ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 7 ಗುರುವಾರ 2023

ಸಂಪುಟ: 44 | ಸಂಚಿಕೆ: 230 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

₹4

ಸರ್ಕಾರಿ ಭೂಮಿ ಒತ್ತುವರಿ ತೆರವು, ಸಂರಕ್ಷಣೆಗೆ ಪ್ರತ್ಯೇಕ ವಿಭಾಗ ಸ್ಥಾಪನೆ

- ವಿಧಾನಪರಿಷತ್‌ನಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡ ಘೋಷಣೆ
- ಈಗಾಗಲೇ ಸಾವಿರಾರು ಕೋಟಿ ಮೌಲ್ಯದ ಭೂಮಿ ಒತ್ತುವರಿ ತೆರವು
- ನಗರ, ಪಟ್ಟಣ ಪ್ರದೇಶದಲ್ಲಿ ಸಾವಿರಾರು ಎಕರೆ ಭೂಮಿ ಒತ್ತುವರಿಯಾಗಿದೆ
- ಕೆರೆ, ಮುಜರಾಯಿ, ವಕ್ಫ್ ಆಸ್ತಿ ಸರ್ವೆ ಮಾಡಿ, ಸಂರಕ್ಷಣೆಗೆ ಕ್ರಮ





ಬೆಂಗಳೂರು, ಡಿ.6(ಕೆಎಂಶಿ)– ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸಿ, ಸಂರಕ್ಷಿಸಲು ಪ್ರತ್ಯೇಕ ವಿಭಾಗ ಸ್ಥಾಪಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಯು.ಬಿ.ವೆಂಕಟೇಶ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೋಟ್ಯಾಂತರ ರೂ. ಬೆಲೆ ಬಾಳುವ ನಮ್ಮ ಒತ್ತುವರಿ ಭೂಮಿಯನ್ನು ತೆರವುಗೊಳಿಸುವ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ.

ನಾವು ಅಧಿಕಾರಕ್ಕೆ ಬಂದ ನಂತರ ನೂರಾರು ಕೋಟಿ ರೂ. ಮೌಲ್ಯದ ಭೂಮಿಯ ಒತ್ತುವರಿಯನ್ನು ತೆರವುಗೊಳಿಸಿ, ಸಂರಕ್ಷಿಸಲಾಗಿದೆ. ಸರ್ಕಾರಿ ಭೂಮಿ ಒತ್ತುವರಿಗೆ ಸಂಬಂಧಿಸಿದಂತೆ ನಮ್ಮ ಮುಂದೆ ಎರಡು–ಮೂರು ವರದಿಗಳಿದ್ದು ಅವುಗಳನ್ನು ಮುಂದಿಟ್ಟುಕೊಂಡು ತೆರವು ಕಾರ್ಯ ನಡೆದಿದೆ. ಒತ್ತುವರಿ ತೆರವಿಗಾಗಿ ನಾನು ಈಗಾಲೇ ಎರಡು–ಮೂರು ಬಾರಿ ಉನ್ನತ ಮಟ್ಟದ ಸಭೆ ನಡೆಸಿದ್ದೇನೆ, ಅಲ್ಲದೆ, ವಿಭಾಗೀಯ ಮಟ್ಟದಲ್ಲೂ ಸಭೆ ನಡೆಸಿ ತೆರವಿಗೆ ಕಠಿಣ ಕ್ರಮಕೈಗೊಂಡಿದ್ದೇವೆ.

ಇನ್ನು, ರಾಜ್ಯದ ನಗರ, ಪಟ್ಟಣ ಸೇರಿದಂತೆ ವಿವಿಧ ಭಾಗಗಳಲ್ಲಿ ಸಾವಿರಾರು ಎಕರೆ ಭೂಮಿ ಒತ್ತುವರಿಯಾಗಿದೆ. ಇದನ್ನು ತೆರವುಗೊಳಿಸಲು ಪ್ರತ್ಯೇಕ ವಿಭಾಗ ರಚಿಸಿ ಅದರ ಮೂಲಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಈ ವಿಭಾಗದಲ್ಲಿ ನಮ್ಮ ಅಧಿಕಾರಿಗಳ ಜೊತೆಗೆ ಪೊಲೀಸ್ ಹಾಗೂ ಕಾನೂನು ತಜ್ಞರನ್ನು ಬಳಸಿಕೊಂಡು ತೆರವು ಮಾಡಲಾಗುವುದು.

ಎಷ್ಟೇ ಬಲಾಢ್ಯರಿದ್ದರೂ ನಮ್ಮ ಭೂಮಿಯನ್ನು ಹಿಂದಕ್ಕೆ ಪಡೆಯುವ ವಿಚಾರದಲ್ಲಿ ಯಾವುದೇ ರಾಜೀ ಇಲ್ಲ. ಇದು ಕೇವಲ ಕಂದಾಯ ಇಲಾಖೆಗೆ ಸೀಮಿತವಾಗಿರದೆ, ಕೆರೆ ಒತ್ತುವರಿ, ಮುಜರಾಯಿ, ವಕ್ಫ್ ಆಸ್ತಿಗಳ ಸರ್ವೆ ನಡೆಸಿ, ಗಡಿ ಗುರುತಿಸಿ ರಕ್ಷಿಸಲಾಗುವುದು.

ಅಲ್ಲದೆ, ಈ ಆಸ್ತಿಗಳ ಡಿಜಿಟಲ್ ಡೇಟಾ ಬೇಸ್ ನಿರ್ವಹಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು. ಇದೇ ಸಂದರ್ಭದಲ್ಲಿ ಎನ್. ರವಿಕುಮಾರ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬರದಿಂದಾಗಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದು, ಅವರ ನೆರವಿಗೆ ಸರ್ಕಾರ ಬದ್ಧವಾಗಿದೆ, ಬೆಳೆ ವಿಮೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್‌ನಿಂದ 4,000 ಕೋಟಿ ರೂ. ಪರಿಹಾರ ನೀಡುವ ಆಲೋಚನೆ ಇದೆ. ಈ ವಿಚಾರದಲ್ಲಿ ವಿರೋಧ ಪಕ್ಷದ ಸಲಹೆಗಳನ್ನೂ ಪರಿಗಣಿಸಲಾಗುವುದು ಎಂದರು.

ಬರ ಪರಿಹಾರಕ್ಕೆ ಕೇಂದ್ರಕ್ಕೆ ಪತ್ರ: ರಾಜ್ಯ ಕಳೆದ ಎರಡು ದಶಕದಲ್ಲಿ 14 ಬಾರಿ ಬರ ಪರಿಸ್ಥಿತಿ ಎದುರಿಸಿದೆ, ಈ ವರ್ಷ ಬರ ಸ್ಥಿತಿ ಮತ್ತಷ್ಟು ತೀವ್ರವಾಗಿದೆ, 223 ತಾಲೂಕುಗಳನ್ನು ಈಗಾಗಲೇ ▶ 7ನೇ ಪುಟಕ್ಕೆ

ಅರ್ಜುನನ ಸಾವಿನ ಸಮಗ್ರ ತನಿಖೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಆತ ಪ್ರಾಣಬಿಟ್ಟ ಸ್ಥಳ, ಹೆಚ್.ಡಿ.ಕೋಟೆಯಲ್ಲಿ ಸ್ಮಾರಕ ನಿರ್ಮಾಣ
- ಸಾವಿನ ಸಂಶಯ ನಿವಾರಣೆ, ತಪ್ಪಿತಸ್ಥರಿದ್ದರೆ ಕ್ರಮ ಕೈಗೊಳ್ಳಲು ತನಿಖಾ ವರದಿ ಸಹಕಾರಿ





ಬೆಂಗಳೂರು, ಡಿ.6(ಕೆಎಂಶಿ)–ಎಂಟು ಬಾರಿ ಮೈಸೂರು ದಸರಾ ಉತ್ಸವದಲ್ಲಿ ಅಂಬಾರಿ ಹೊತ್ತಿದ್ದ ಅರ್ಜುನನ ಸಾವಿನ ಪ್ರಕರಣದ ಸಮಗ್ರ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿ ಸಿದ್ದಾರೆ. ಅರ್ಜುನ ಸಾವಿಗೀಡಾಗಿರುವುದು ದುರದೃಷ್ಟಕರ, ಈ ಸಾವಿನ ಬಗ್ಗೆ ಅನೇಕ ಸಂಶಯಗಳು ಮೂಡಿವೆ. ಇವನ್ನು ನಿವಾರಿಸಲು ಮತ್ತು ತಪ್ಪಿತಸ್ಥರಿದ್ದರೆ, ಕ್ರಮ ಕೈಗೊಳ್ಳಲು ತನಿಖಾ ವರದಿ ಸಹಕಾರಿಯಾಗಲಿದೆ ಎಂದರು. ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ▶ 7ನೇ ಪುಟಕ್ಕೆ

ಆಯುಷ್ಮಾನ್ ಹೆಲ್ತ್ ಕಾರ್ಡ್‌ಗೆ ಹೊಸ ರೂಪ

ಈಗ ಆಯುಷ್ಮಾನ್ ಭಾರತ್–ಪ್ರಧಾನಮಂತ್ರಿ ಜನ ಆರೋಗ್ಯ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ




ಬೆಂಗಳೂರು: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಹೆಲ್ತ್ ಕಾರ್ಡ್‌ಗಳಿಗೆ ಆರೋಗ್ಯ ಇಲಾಖೆ ಹೊಸ ರೂಪ ನೀಡಿದ್ದು, ಮರುನಾಮಕರಣಗೊಂಡ ನವೀಕೃತ ಹೆಲ್ತ್ ಕಾರ್ಡ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಹೆಲ್ತ್ ಕಾರ್ಡ್‌ಗಳನ್ನು, ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನಾರೋಗ್ಯ– ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ" ಎಂದು ಹೆಸರಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಕಾರ್ಡ್‌ನಲ್ಲಿ ಕೆಲ ಬದಲಾವಣೆ ತರಲಾಗಿದ್ದು, ರಾಜ್ಯದ 5.9 ಕೋಟಿ ಜನರಿಗೆ ಹೆಲ್ತ್ ಕಾರ್ಡ್‌ಗಳನ್ನ ವಿತರಿಸುವ ಗುರಿಯನ್ನು ಆರೋಗ್ಯ ಇಲಾಖೆ ಹಾಕಿಕೊಂಡಿದೆ. ನೂತನ ಕಾರ್ಡ್‌ಗಳಿಗೆ ಸಿಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದಾರೆ. ರಾಜ್ಯದ ಪ್ರತಿಯೊಬ್ಬ ಜನ ಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆ ಹಾಗೂ ಚಿಕಿತ್ಸೆಗಳನ್ನ ಒದಗಿಸಬೇಕು ಎಂಬುದು ನಮ್ಮ ಸರ್ಕಾರದ ಆದ್ಯತೆಗಳಲ್ಲಿ ಒಂದು ಎಂದರು.

ಯೋಜನೆಯ ಪ್ರಮುಖ ಅಂಶಗಳೇನು: ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ನ್ಯಾಷನಲ್ ಪೋರ್ಟಲ್‌ಗೆ ನೂತನ ಹೆಲ್ತ್ ಕಾರ್ಡ್‌ಗಳನ್ನು ಸಂಯೋಜನೆಗೊಳಿಸಲಾಗಿದ್ದು, ರಾಜ್ಯದ ಬಿಪಿಎಲ್ ಕಾರ್ಡುದಾರರು ದೇಶದ ಇತರೆ ರಾಜ್ಯಗಳಲ್ಲಿ ಹೆಲ್ತ್ ಕಾರ್ಡ್‌ನ ಅಡಿ ಚಿಕಿತ್ಸೆ ಪಡೆಯಬಹುದಾಗಿದೆ.

ರಾಜ್ಯದಲ್ಲಿರುವ ಒಟ್ಟು 5.09 ಕೋಟಿ ಫಲಾನುಭವಿಗಳಿಗೆ ಮುಂದಿನ 6 ತಿಂಗಳ ಒಳಗಾಗಿ "ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನಾರೋಗ್ಯ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ" ▶ 7ನೇ ಪುಟಕ್ಕೆ

ಕೊಡಗಲ್ಲಿ ಭಾರಿ ಮಳೆ ಅಭಾವ: ನಾಲ್ಕು ದಶಕದ ನಂತರ ಚಿಕ್ಲಿಹೊಳೆ ಜಲಾಶಯದಲ್ಲಿ ಶಿವ ದೇವಾಲಯ ಪ್ರತ್ಯಕ್ಷ



ಕುಶಾಲನಗರ, ಡಿ.6–ಇಲ್ಲಿಗೆ ಸಮೀಪದ ಚಿಕ್ಲಿಹೊಳೆ ಜಲಾಶಯದಲ್ಲಿ ಮುಳುಗಡೆಯಾಗಿದ್ದ ಪುರಾತನ ಶಿವ ದೇವಾಲಯ 4 ದಶಕಗಳ ನಂತರ ಗೋಚರವಾಗಿದೆ. ವರ್ಷದ 6 ತಿಂಗಳ ಕಾಲ ಮಳೆ ಸುರಿಯುತ್ತಿದ್ದ ಕೊಡಗಿನಲ್ಲಿ ಈ ಬಾರಿ ಕೇವಲ 2 ತಿಂಗಳ ಕಾಲ ಸಾಧಾರಣ ಮಳೆ ಸುರಿದಿದ್ದು, ಇದರ ಪರಿಣಾಮವಾಗಿ ಚಿಕ್ಲಿಹೊಳೆ ಜಲಾಶಯದಲ್ಲಿ ನೀರಿನ ಮಟ್ಟ ಕ್ಷೀಣಿಸಿ, ಜಲಾಶಯದ ಮಧ್ಯೆ ಇರುವ ದೇವಾಲಯ ಗೋಚರಿಸುತ್ತಿದೆ.

ಈ ದೇವಾಲಯವನ್ನು ಸುಮಾರು 150 ವರ್ಷದ ಹಿಂದೆ ಮ್ಯಾಕ್‌ಡೋರ್ ಕುಟುಂಬದವರು ನಿರ್ಮಿಸಿದ್ದರು ಎಂದು ಹೇಳಲಾಗಿದ್ದು, ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 1983ರಲ್ಲಿ 0.18 ಟಿಎಂಸಿ ಸಾಮರ್ಥ್ಯದ ಚಿಕ್ಲಿಹೊಳೆ ಜಲಾಶಯವನ್ನು ನಿರ್ಮಿಸಿದಾಗ ಈ ದೇವಾಲಯ ಮುಳುಗಡೆಯಾಗಿತ್ತು. ಆ ಸಂದರ್ಭದಲ್ಲಿ ದೇವಾಲಯದಲ್ಲಿದ್ದ ಶಿವಲಿಂಗವನ್ನು ಬೇರೆಡೆಗೆ ಸ್ಥಳಾಂತರಿಸಿ ಹೊಸ ದೇವಾಲಯವನ್ನು ನಿರ್ಮಿಸಲಾಗಿತ್ತು.

40 ವರ್ಷದ ನಂತರ ಗೋಚರವಾಗಿರುವ ಈ ಪುರಾತನ ಶಿವನ ದೇವಾಲಯ ಕುಸಿದು ಬಿದ್ದಿದೆಯಾದರೂ, ದೇವಾಲಯದ ಗರ್ಭಗುಡಿ ಮತ್ತು ನಂದಿ ಮಂಟಪಗಳು ಯಾವುದೇ ಹಾನಿಯಾಗದೇ ಸುರಕ್ಷಿತವಾಗಿವೆ. ಅಲ್ಲದೇ ದೇವರಿಗೆ ಅಭಿಷೇಕಕ್ಕಾಗಿ ಬಳಸುತ್ತಿದ್ದ ಬಾವಿ ಹಾಗೂ ಭಕ್ತರ ಬಳಕೆಗಾಗಿ ಇದ್ದಂತಹ ಬಾವಿಯೂ ಸುರಕ್ಷಿತವಾಗಿದೆ.

ಹಿನ್ನೆಲೆ: ಸುಮಾರು ಒಂದೂವರೆ ಶತಮಾನಕ್ಕೂ ಮುನ್ನ ಮ್ಯಾಕ್‌ಡೋರ್ ಕುಟುಂಬದವರಿಂದ ನಿರ್ಮಾಣವಾದ ಈ ಶಿವಾಲಯ ಬಹಳ ಪ್ರಸಿದ್ಧಿ ಹೊಂದಿದ್ದು, ಆಗ ಈ ದೇವಾಲಯದಲ್ಲಿ ದೊಡ್ಡ ಜಾತ್ರೆಯೇ ನಡೆಯುತ್ತಿತ್ತು. ಸುತ್ತಮುತ್ತಲ ಹಲವಾರು ಗ್ರಾಮಸ್ಥರು ಜಾತ್ರೆಗೆ ಆಗಮಿಸುತ್ತಿದ್ದು, ನೂರಾರು ಅಂಗಡಿ–ಮುಂಗಟ್ಟುಗಳು ಜಾತ್ರೆ ವೇಳೆ ತಾತ್ಕಾಲಿಕವಾಗಿ ತೆರೆಯಲ್ಪಡುತ್ತಿತ್ತು. 40 ವರ್ಷದ ಹಿಂದೆ ದೇವಾಲಯ ಜಲಾಶಯದಲ್ಲಿ ಮುಳುಗಿದ ನಂತರ ಈ ಜಾತ್ರಾ ಮಹೋತ್ಸವ ಸ್ಥಗಿತಗೊಂಡಿತ್ತು. ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಚಿಕ್ಲಿಹೊಳೆ ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾದಾಗ ಈ ದೇವಾಲಯದ ಗೋಪುರ ಮಾತ್ರ ಸ್ವಲ್ಪ ಕಾಣುತ್ತಿತ್ತು. ಆದರೆ ಇದೀಗ ದೇವಾಲಯವು ಸಂಪೂರ್ಣವಾಗಿ ಗೋಚರಿಸುತ್ತಿದೆ. ಸುತ್ತಮುತ್ತಲ ಗ್ರಾಮಸ್ಥರು ತಂಡೋಪತಂಡವಾಗಿ ದೇವಸ್ಥಾನಕ್ಕೆ ಭೇಟಿ ನೀಡಿ ಬರುತ್ತಿದ್ದಾರೆ.

ಮೈಸೂರು ಮಿತ್ರ ಗುರುವಾರ 7 ಡಿಸೆಂಬರ್ 2023

ಅನಧಿಕೃತವಾಗಿ ಬೆಳೆದ ತಂಬಾಕು ಮಾರಾಟಕ್ಕೆ ಅನುಮತಿ ಸಾಧ್ಯತೆ

ಸಂಸದ ಪ್ರತಾಪ್ ಸಿಂಹ ಅವರ ಮನವಿಗೆ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಸಕಾರಾತ್ಮಕ ಸ್ಪಂದನೆ



ಮೈಸೂರು, ಡಿ. 6(ಆರ್‌ಕೆ)– ಲೈಸೆನ್ಸ್ ಇಲ್ಲದೇ ರೈತರು ಅನಧಿಕೃತವಾಗಿ ಬೆಳೆದ ತಂಬಾಕನ್ನು ಹರಾಜು ಮೂಲಕ ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಸಂಸದ ಪ್ರತಾಪ್ ಸಿಂಹ ಕೇಂದ್ರ ಸರ್ಕಾರವನ್ನು ಕೋರಿದ್ದಾರೆ.

ನವದೆಹಲಿಯಲ್ಲಿ ಇಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಅವರು, ನೋಂದಾಯಿಸದಿರುವ ಬೆಳೆಗಾರರು ಬೆಳೆದ ತಂಬಾಕನ್ನು ಯಾವುದೇ ದಂಡ ವಿಧಿಸದೇ 2022–23ರ ಬೆಳೆ ಹಂಗಾಮಿಗೆ ಕರ್ನಾಟಕದಲ್ಲಿ ಹರಾಜು ಮೂಲಕ ಅನಧಿಕೃತ ತಂಬಾಕು ಬೆಳೆಗಾರರಿಗೆ ಲೈಸೆನ್ಸ್ ನೀಡುವಂತೆ ಕೋರಿಕೊಂಡಿದ್ದಾರೆ. ಮೈಸೂರು ಭಾಗದಲ್ಲಿ 40,000 ಅಧಿಕೃತ ಹಾಗೂ 11,000 ನೋಂದಾವಣಿಯಾಗದ ರೈತರು ಈ ವಾಣಿಜ್ಯ ಬೆಳೆಯನ್ನು ಬೆಳೆಯುತ್ತಿದ್ದು, ಜೀವನಾಧಾರವಾಗಿಸಿಕೊಂಡಿರುವ ಮಾನ್ಸೂನ್ ಕೈಕೊಟ್ಟಿರುವ ಕಾರಣ, ಕರ್ನಾಟಕ ಟೊಬಾಕೋ ಬೆಳೆಗಾರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಇತರ ಬೆಳೆಗೆ ತೊಂದರೆಯಾಗಿದ್ದು, ತಂಬಾಕು ಮಾತ್ರ ಅವರ ಜೀವನಾಧಾರವಾಗಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಈ ಕಾರಣದಿಂದಾಗಿ ಅನಧಿಕೃತವಾಗಿ ಬೆಳೆದಿರುವ ತಂಬಾಕಿಗೆ ದಂಡ ವಿಧಿಸದೆ ಅವರು ಬೆಳೆದಿರುವ ತಂಬಾಕನ್ನು ಹರಾಜು ಮೂಲಕ ಮಾರಾಟ ಮಾಡಲು ಅವಕಾಶ ನೀಡಬೇಕು ಎಂಬ ಪ್ರತಾಪ್ ಸಿಂಹ ಕೋರಿಕೆಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಾಂಡಾ, ಹಟ್ಟಿ, ಒಡ್ಡರಟ್ಟಿಯಂತಹ ಜನವಸತಿ ಪ್ರದೇಶಗಳು ಜನವರಿಯೊಳಗೆ ಕಂದಾಯ ಪ್ರದೇಶಗಳಾಗಿ ಘೋಷಣೆ



ಬೆಂಗಳೂರು,ಡಿ.6(ಕೆಎಂಶಿ)–ತಾಂಡಾ, ಹಟ್ಟಿ, ಒಡ್ಡರಹಟ್ಟಿ, ಗೊಲ್ಲರಹಟ್ಟಿ ಸೇರಿದಂತೆ ಎಲ್ಲಾ ಜನವಸತಿ ಪ್ರದೇಶಗಳನ್ನು ಜನವರಿ ಅಂತ್ಯದೊಳಗೆ ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನ ಪರಿಷತ್‌ನಲ್ಲಿಂದು ಪ್ರಕಟಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಎಂ.ನಾಗರಾಜು ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟಾರೆ 3,290 ಜನವಸತಿ ಪ್ರದೇಶಗಳು ಕಂದಾಯ ಗ್ರಾಮಗಳಾಗಿ ಘೋಷಣೆಯಾಗಬೇಕಿತ್ತು. ಆದರೆ, ಕಳೆದ 4 ವರ್ಷದಲ್ಲಿ ತಾಂಡಾ, ಗೊಲ್ಲರಹಟ್ಟಿ ಸೇರಿದಂತೆ ಕೇವಲ 1,400 ಜನವಸತಿ ಪ್ರದೇಶಗಳನ್ನು ಮಾತ್ರ ಕಂದಾಯ ಗ್ರಾಮಗಳಾಗಿ ಘೋಷಿಸಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದಲೂ ನಮಗೆ ಸೂಚನೆ ಬಂದಿದ್ದು, ಜನವರಿ ಅಂತ್ಯದೊಳಗೆ ಎಲ್ಲಾ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಲಾಗುವುದು ಎಂದು ಕೃಷ್ಣಭೈರೇಗೌಡ ಸ್ಪಷ್ಟನೆ ನೀಡಿದರು.

ಪ್ರತೀ 15 ದಿನಗಳಿಗೊಮ್ಮೆ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಧಿಕಾರಿಗಳ ಸಭೆ ನಡೆಸಲಾಗುತ್ತಿದೆ. ಶೀಘ್ರವಾಗಿ ಕಂದಾಯ ಗ್ರಾಮಗಳನ್ನು ಘೋಷಿಸುವಂತೆ ತಾಕೀತು ಮಾಡಲಾಗುತ್ತಿದೆ. ಅಲ್ಲದೆ, ಪಟ್ಟಿಯಿಂದ ಬಿಟ್ಟು ಹೋಗಿರುವ ತಾಂಡಾ, ಹಟ್ಟಿ, ಒಡ್ಡರಹಟ್ಟಿಗಳನ್ನು ಹೊಸದಾಗಿ ಸೇರಿಸುವಂತೆಯೂ ಸೂಚಿಸಲಾಗಿದೆ. ಇದೀಗ ಡ್ರೋನ್ ಮೂಲಕ ಸರ್ವೇ ಕೆಲಸ ಆರಂಭಿಸಿದ್ದು, ಡ್ರೋನ್ ಮೂಲಕವೂ ಕಂದಾಯ ಗ್ರಾಮಗಳ ಹುಡುಕಾಟ ನಡೆದಿದೆ ಎಂದರು.

ಅಲ್ಲದೆ, ಬಿಟ್ಟುಹೋಗಿರುವ ಗ್ರಾಮಗಳ ಸೇರ್ಪಡೆಗೆ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಶಾಸಕರಲ್ಲೂ ಮನವಿ ಮಾಡಲಾಗಿದೆ ಎಂದರು. ಸದಸ್ಯರು, ಸಂಘ ಸಂಸ್ಥೆಗಳು ದಯವಿಟ್ಟು ಬಿಟ್ಟುಹೋಗಿರುವ ಗ್ರಾಮಗಳ ಸೇರ್ಪಡೆಗೆ ಸಹಕರಿಸಬೇಕು. ಬಡವರಿಗೆ ಸಹಾಯವಾಗುವಂತಿದ್ದರೆ, ಯಾರೇ ಪಟ್ಟಿಕೊಟ್ಟರೂ ಪರಿಗಣಿಸಲಾಗುವುದು. ನಮ್ಮ ಸರ್ಕಾರ ಬಡಜನರ ಪರವಾಗಿಯೇ ಇದೆ ಎಂದು ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಇಂದಿನಿಂದ ವಿಧಿವಿಜ್ಞಾನ ವಸ್ತುಪ್ರದರ್ಶನ



ಮೈಸೂರು, ಡಿ. 6(ಆರ್‌ಕೆ)–ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಾಳೆ (ಡಿ.7)ಯಿಂದ ಎರಡು ದಿನಗಳ ವಿಧಿವಿಜ್ಞಾನ ವಸ್ತುಪ್ರದರ್ಶನ ಆಯೋಜಿಸಲಾಗಿದೆ.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ನಗರ ಸಂಚಾರ ಪೊಲೀಸ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಹಾಗೂ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ವಸ್ತುಪ್ರದರ್ಶನವನ್ನು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಾನೋತ್ ಗುರುವಾರ ಬೆಳಗ್ಗೆ 10 ಗಂಟೆಗೆ ಉದ್ಘಾಟಿಸುವರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ರಿಜಿಸ್ಟ್ರಾರ್ ಡಾ.ಬಿ.ಮಂಜುನಾಥ, ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ನ್ಯಾಯವೈದ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಹೆಚ್.ವಿ.ಚಂದ್ರಕಾಂತ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅಪರಾಧ ಮತ್ತು ತನಿಖೆ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಗುರುವಾರ ಮತ್ತು ಶುಕ್ರವಾರ ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ಉಚಿತ ಪ್ರವೇಶವಿದೆ. ಸಂಚಾರ ನಿಯಮಗಳು, ರಸ್ತೆ ಅಪಘಾತಗಳು, ಮದ್ದು–ಗುಂಡುಗಳು, ದಂತ ಸಾಕ್ಷ್ಯಾಧಾರ, ಮಹಜರು ಪ್ರಕ್ರಿಯೆ, ಬೆರಳಚ್ಚು–ಹಸ್ತಾಕ್ಷರ ವಿಶ್ಲೇಷಣೆ, ವಿಷವಿಜ್ಞಾನ ಹಾಗೂ ಕಲಬೆರಕೆ ಆಹಾರ ಕುರಿತಂತೆ ವಸ್ತುಪ್ರದರ್ಶನದಲ್ಲಿ ಪ್ರದರ್ಶನ ಮಾಡಿ, ಮಾಹಿತಿ ನೀಡಲಾಗುವುದು.



ಮೈಸೂರಿನ ಅನಂತಗೀತ ಶಾಲೆ ವತಿಯಿಂದ ರಸ್ತೆ ಬದಿಯಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ರಘುಲಾಲ್ ಫಾರ್ಮಸಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆಯ ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಮೇಲ್ವಿಚಾರಕ ಮಹದೇಶ್, ಸಹಾಯಕ ಮಹದೇವಪ್ಪ ಅನಂತಗೀತ ವಿದ್ಯಾಲಯದ ಅಕ್ಕಪಕ್ಕದ ರಸ್ತೆಗಳಲ್ಲಿ ಹಲವು ಬಗೆಯ ಗಿಡಗಳನ್ನು ನೆಟ್ಟು ನೀರೆರೆದರು.

'ಜಗವ ಸುತ್ತುವ ಮಾಯೆ'ಗೆ ಮತ್ತೊಂದು ಪ್ರಶಸ್ತಿ



ಮೈಸೂರು, ಡಿ.6–ಮೈಸೂರಿನ ಬರಹಗಾರರು ಮತ್ತು ಲೇಖಕರೂ ಆದ ಶ್ರೀಮತಿ ಸುಚಿತ್ರಾ ಹೆಗ್ಡೆ ಅವರು ಮತ್ತೊಂದು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಧಾರವಾಡದ ಭೂಮಿ ಪ್ರತಿಷ್ಠಾನ ಮತ್ತು ಸತ್ತೂರಿನ ಅರವಳ ಪ್ರತಿಷ್ಠಾನದ ಭೂಮಿ ಸಾಹಿತ್ಯ ಪುರಸ್ಕಾರದ ಟಾಪ್ ಟೆನ್ ಕೃತಿಗಳಲ್ಲಿ ಇವರ 'ಜಗವ ಸುತ್ತುವ ಮಾಯೆ' ಪ್ರವಾಸ ಕಥನ ಪ್ರಥಮ ಸ್ಥಾನ ಪಡೆದುಕೊಳ್ಳುವ ಮೂಲಕ ಪ್ರಶಸ್ತಿಗೆ ಭಾಜನವಾಗಿದೆ. ಇದೇ ಪ್ರವಾಸ ಕಥನಕ್ಕೆ ಸೇಡಂನ 'ಅಮ್ಮ' ಪ್ರಶಸ್ತಿ ಪಡೆದಿದ್ದ ಶ್ರೀಮತಿ ಸುಚಿತ್ರಾ ಹೆಗ್ಡೆ ಅವರು ಮೈಸೂರಿನ ಗೋಕುಲಂ ಬಡಾವಣೆ ನಿವಾಸಿ.

ವಚನ ಸಾಹಿತ್ಯ ರಸಪ್ರಶ್ನೆ: ಇಂಚರಗೆ ಬಹುಮಾನ



ಮೈಸೂರು,ಡಿ.6–ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 79ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲೆ ಚನ್ನಗಿರಿ ತಾ. ಪಾಂಡೋಮಟ್ಟಿ ಗ್ರಾಮದ ಎಚ್.ಸಿಇಂಚರ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ಅಂಬೇಡ್ಕರ್‌ರ ಜಾತ್ಯಾತೀತ ಭಾರತದ ಕನಸು ನನಸಾಗಿಲ್ಲ

ಮಹಾ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು ವಿಷಾದ



ಮೈಸೂರು, ಡಿ.6(ಎಂಟಿವೈ)– ಬ್ರಿಟೀಷರಿಂದ ಸ್ವಾತಂತ್ರ್ಯ ದೊರಕಿದ ನಂತರ ಭಾರತವನ್ನು ಸಂವಿಧಾನಾತ್ಮಕವಾಗಿ ಕಟ್ಟಲು ಡಾ.ಅಂಬೇಡ್ಕರ್ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅಲ್ಲದೆ, ಅವರು ಕಂಡಿದ್ದ ಸಂಪೂರ್ಣ ಜಾತ್ಯಾತೀತ ಭಾರತದ ಕನಸು ಇನ್ನೂ ನನಸಾಗಿಲ್ಲ ಎಂದು ಸಾಹಿತಿ ಬನ್ನೂರು ಕೆ.ರಾಜು ವಿಷಾದಿಸಿದ್ದಾರೆ.


ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯ ಅಕ್ಕನ ಬಳಗ ಶಾಲೆಯಲ್ಲಿ ವಿಶ್ವೇಶ್ವರ ನಗರದ ವೀವರ್ಸ್ ಕಾಲೋನಿಯ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಅಂಬೇಡ್ಕರ್ ಮಹಾ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿಗೂ ದೇಶವನ್ನು ಕಾಡುತ್ತಿರುವ ಜಾತಿ, ಮತ, ಧರ್ಮ, ವರ್ಣ, ವರ್ಗ, ಪಂಥಗಳೆಂಬ ಭೇದ ಭಾವಗಳ ರೋಗಗಳಿಗೆ ಅಂಬೇಡ್ಕರ್ ಸಿದ್ಧಾಂತವೇ ಸಿದ್ಧೌಷಧಿಯಾಗಿದೆ. ಬಾಬಾ ಸಾಹೇಬರು ಕೆಳಜಾತಿಯಲ್ಲಿ ಹುಟ್ಟಿದ್ದಕ್ಕಾಗಿ ಬಾಲ್ಯದಿಂದಲೂ ಅವರು ಅಸ್ಪೃಶ್ಯತೆಯ ಕರಿನೆರಳಿನಲ್ಲಿ ಅನೇಕ ನೋವುಗಳನ್ನು ಅನುಭವಿಸಿದರು. ಅದರಿಂದ ನರಳಿ ಅಪಮಾನಕ್ಕೆ ಒಳಗಾದವರು. ಕೊನೆಗೆ ಇದೆಲ್ಲದರ ವಿರುದ್ಧ ಸಿಡಿದೆದ್ದು ಶಿಕ್ಷಣವೆಂಬ ಅಸ್ತ್ರದಿಂದ ಉನ್ನತ ಜ್ಞಾನಗಳಿಸಿ 'ಭಾರತ ಸಂವಿಧಾನ' ರಚಿಸಿ, ಸಂವಿಧಾನ ಶಿಲ್ಪಿ ಎನಿಸಿಕೊಂಡು ಅಸ್ಪೃಶ್ಯರ ಉದ್ಧಾರಕ್ಕಾಗಿ ಹೋರಾಟ ಮಾಡಿದರು ಎಂದು ತಿಳಿಸಿದರು.

ದೇಶವೇ ಹೆಮ್ಮೆಪಡುವಂತಹ ಅಂಬೇಡ್ಕರರ ನಿಜವಾದ ಇತಿಹಾಸವನ್ನೇ ಮುಚ್ಚಿಡುವ ಸಂಚು ನಿರಂತರವಾಗಿ ನಡೆಸಲಾಗುತ್ತಿದೆ. ಅಂಬೇಡ್ಕರ್ ಬದುಕು ಮಾತ್ರ ಇತಿಹಾಸವಲ್ಲ. ಅವರೇ ಒಂದು ಚರಿತ್ರೆಯಾಗಿದ್ದಾರೆ. ದೇಶದಲ್ಲಿ ಅಂಬೇಡ್ಕರ್ ಎಂಬ ಮಹಾನ್ ಚೇತನ ಜನಿಸದೇ ಇದ್ದಿದ್ದರೆ ದೇಶದ ಬಹುಜನರ ಬದುಕು, ಅದರಲ್ಲೂ ಮಹಿಳೆಯರ, ಕಾರ್ಮಿಕರ ಹಾಗೂ ರೈತರ ಬದುಕು ಇನ್ನೆಷ್ಟು ಸಂಕಷ್ಟಕ್ಕೆ ತಳ್ಳಲ್ಪಡುತ್ತಿತ್ತು. ತಮ್ಮ ಮೇಧಾವಿತನದಿಂದ ಬ್ರಿಟಿಷ್ ಭಾರತದಲ್ಲೇ ಮಂತ್ರಿಮಂಡಲದಲ್ಲಿ ಸ್ಥಾನ ಪಡೆದು, ನಂತರ ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ಯಾರೂ ಊಹಿಸದ ರೀತಿಯಲ್ಲಿ ದೇಶದ ಅಭಿವೃದ್ಧಿ ಹಾಗೂ ಸಮಾಜ ಸುಧಾರಣೆಗೆ ತಮ್ಮನ್ನೇ ಸಮರ್ಪಿಸಿಕೊಂಡ ಬಾಬಾ ಸಾಹೇಬರು ಪಂಚವಾರ್ಷಿಕ ಯೋಜನೆಯಲ್ಲಿ ನೆಹರು ಅವರಿಗೆ ಒತ್ತಾಸೆಯಾಗಿ ನಿಂತವರು ಎಂದರು.

ಕಾರ್ಯಕ್ರಮದಲ್ಲಿ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಮಹೇಶ್ ಅವರು ಪ್ರಾಸ್ತಾವಿಕ ಭಾಷಣದಲ್ಲಿ ಭಾರತದ ಸಂವಿಧಾನದ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದಿಂದ ವಿದ್ಯಾರ್ಥಿಗಳಿಗೆ ಸಂವಿಧಾನ ಓದು ಪುಸ್ತಕವನ್ನು ಉಚಿತವಾಗಿ ವಿತರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಹಿರಿಯ ಶಿಕ್ಷಕ ಶಿವಯ್ಯ, ಶಿಕ್ಷಕಿಯರಾದ ಶಿಲ್ಪಶ್ರೀ, ನಾಗರತ್ನ ಮತ್ತಿತರರು ಉಪಸ್ಥಿತರಿದ್ದರು.

ಜನವರಿಯಲ್ಲಿ 'ಏಜ್ ಫ್ರೆಂಡ್ಲಿ ಮೈಸೂರು' ಪ್ರಾಜೆಕ್ಟ್ ಆರಂಭ



ಮೈಸೂರು, ಡಿ.6– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಜೆರಿಯಾಟ್ರಿಕ್ಸ್ ವಿಭಾಗ, ಪಬ್ಲಿಕ್ ಹೆಲ್ತ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಪಿಹೆಚ್‌ಆರ್‌ಐಐ) ಮತ್ತು ಅಮೆರಿಕಾದ ಟುಸಾನ್ ನಗರದಲ್ಲಿರುವ ಅರಿಝೋನಾ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಮುಂದಿನ ಜನವರಿಯಲ್ಲಿ 'ಏಜ್ ಫ್ರೆಂಡ್ಲಿ ಮೈಸೂರು' ಪ್ರಾಜೆಕ್ಟ್ ಆರಂಭವಾಗಲಿದೆ.

ಮೈಸೂರಿನ ಹಿರಿಯ ನಾಗರಿಕರ ಹೆಚ್ಚುತ್ತಿರುವ ಅಗತ್ಯತೆಗಳನ್ನು ಹೇಗೆ ಪೂರೈಸಬಹುದು ಎಂಬುದನ್ನು ಈ ಪ್ರಾಜೆಕ್ಟ್ ಪರಿಶೀಲಿಸುತ್ತದೆ. ಮೈಸೂರನ್ನು ಪಿಂಚಣಿದಾರರ ಸ್ವರ್ಗ ಎಂದು ಕರೆಯಲಾಗುತ್ತದೆ. ಆದರೂ ನಮ್ಮಲ್ಲಿ ನಾಲ್ಕನೇ ಒಂದು ಭಾಗದಷ್ಟು ಹಿರಿಯ ನಾಗರಿಕರ ವೈದ್ಯಕೀಯ ಅಗತ್ಯಗಳನ್ನು ಪೂರೈಸಲಾಗುತ್ತಿಲ್ಲ ಎಂದು ಮೈಸೂರಿನ ಜೆರೊಂಟಾಲಜಿಸ್ಟ್ ಡಾ.ಪ್ರತಿಮಾ ಪೆರೇರಾ ಅವರು ವಿಷಾದ ವ್ಯಕ್ತಪಡಿಸಿದ್ದು, ಮೈಸೂರಿನ ಹಿರಿಯರ ಆರೋಗ್ಯ ಸಕ್ರಿಯತೆ, ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಪೂರೈಸುವಂತಹ ಭವಿಷ್ಯದ ಯೋಜನೆಗಳನ್ನು ರೂಪಿಸಬೇಕಾಗಿದೆ ಎಂದಿದ್ದಾರೆ.

ಮೈಸೂರು ಸೃಜನಶೀಲ ಮತ್ತು ದೂರದೃಷ್ಟಿಯುಳ್ಳ ನಗರ ಎಂಬ ಖ್ಯಾತಿ ಹೊಂದಿದ್ದರೂ ಹಿರಿಯರಿಗೆ ವೈದ್ಯಕೀಯ ಸೇವೆ, ಸಾಮಾಜಿಕವಾಗಿ ತೊಡಗಿಸಿಕೊಳ್ಳುವಿಕೆ ಮತ್ತು ಸಾರಿಗೆ ಸೇವೆಗಳನ್ನು ಒದಗಿಸುವ ವಿಷಯದಲ್ಲಿ ದೊಡ್ಡ ಮಟ್ಟದ ಕೊರತೆಗಳಿವೆ. ಅನೇಕ ವೈದ್ಯಕೀಯ ಕೇಂದ್ರಗಳು ಮತ್ತು ಸಾಂಸ್ಕೃತಿಕ ತಾಣಗಳಿಗೆ ಬಸ್ ವ್ಯವಸ್ಥೆ ಇಲ್ಲದಿರುವುದರಿಂದ ಖಾಸಗಿ ಸಾರಿಗೆಯ ವೆಚ್ಚವನ್ನು ಅನೇಕ ಹಿರಿಯರಿಗೆ ಭರಿಸಲಾಗುತ್ತಿಲ್ಲ ಎಂದು ಅಮೆರಿಕಾದ ಅರಿಝೋನಾ ವಿವಿ ಸಂಶೋಧಕ ಡಾ. ಕಾರ್ಲ್ ಕ್ರುಪ್ ತಿಳಿಸಿದ್ದಾರೆ.

ಏಜ್ ಫ್ರೆಂಡ್ಲಿ ಮೈಸೂರು ಪ್ರಾಜೆಕ್ಟ್ ವಿಶ್ವ ಆರೋಗ್ಯ ಸಂಸ್ಥೆಯ ವಯೋ ಸ್ನೇಹಿ ನಗರಗಳ ಚೌಕಟ್ಟಿನ ಆಧಾರದ ಮೇಲೆ ಸಮುದಾಯದ ಆರೋಗ್ಯ ರಕ್ಷಣೆ, ಸಾರಿಗೆ ವ್ಯವಸ್ಥೆ, ವಸತಿ, ಸಾಮಾಜಿಕ ಭಾಗವಹಿಸುವಿಕೆ, ಹೊರಾಂಗಣ ಸ್ಥಳಗಳು, ಕಟ್ಟಡಗಳು, ಉದ್ಯೋಗ ಮತ್ತು ಸಂವಹನಗಳ ಮಾಹಿತಿಯಂತಹ ಅಂಶಗಳ ಬಗ್ಗೆ ಹಿರಿಯರನ್ನು ಸಂದರ್ಶಿಸುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಿ.13, ವಿವಿಧ ತಾಲೂಕುಗಳಿಗೆ ಲೋಕಾಯುಕ್ತ ಅಧಿಕಾರಿಗಳು ಭೇಟಿ

ಮೈಸೂರು,ಡಿ.6–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳು ಡಿ.13ರಂದು ವಿವಿಧ ತಾಲೂಕುಗಳಿಗೆ ಭೇಟಿ ನೀಡಲಿದ್ದು, ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಬಹುದು.

ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ಸಾರ್ವಜನಿಕ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಸಾರ್ವಜನಿಕ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿಮಾಡಿದ ದೂರುಗಳನ್ನು ನಮೂನೆ 01ರಲ್ಲಿ ಮತ್ತು 02ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳೊಡನೆ ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಡಿ.13ರಂದು ಹುಣಸೂರು ತಾಲೂಕಿನ ನಗರಸಭೆ ಕಾರ್ಯಾಲಯ ಸಭಾಂಗಣದಲ್ಲಿ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಪ್ರವಾಸಿ ಮಂದಿರ, ಮಡಿಕೇರಿ ಜಿಲ್ಲೆ ಪೊನ್ನಂಪೇಟೆ ತಾಲೂಕಿನ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ದೂರು ಸಲ್ಲಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು, ಕರ್ತವ್ಯ ಲೋಪವೆಸಗುವ ಭ್ರಷ್ಟ ಸರ್ಕಾರಿ, ಸಾರ್ವಜನಿಕ ನೌಕರರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು,ಡಿ.6–2023–24ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ವಿಶೇಷ ಘಟಕ ಮತ್ತು ಗಿರಿಜನ ಅಡಿಯಲ್ಲಿ ಜನಪರ ಮತ್ತು ಗಿರಿಜನ ಉತ್ಸವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಹ ಪರಿಶಿಷ್ಟ ಜಾತಿ ಮತ್ತು ವರ್ಗದ ವಿವಿಧ ಕಲಾ ಪ್ರಕಾರಗಳ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಡಿ.16 ಕೊನೆ ದಿನ. ಮಾಹಿತಿಗಾಗಿ ದೂ. ಸಂ: 0821–2513225 ಸಂಪರ್ಕಿಸಬಹುದು.

ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಆಗ್ರಹಿಸಿ ಪ್ರತಿಭಟನೆ




ಮೈಸೂರು,ಡಿ.6(ಜಿಎ)–ಮೈಸೂರಿನಲ್ಲಿ ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನವನ್ನು ಶೀಘ್ರವೇ ಪೂರ್ಣಗೊಳಿಸಿ, ಉದ್ಘಾಟಿಸುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ಸಮಿತಿ ವತಿಯಿಂದ ಭವನದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ದಿವಾನ್ಸ್ ರಸ್ತೆಯಲ್ಲಿರುವ ಅಂಬೇಡ್ಕರ್ ಭವನದ ಮುಂಭಾಗ ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಿಸಿ, ಭವ್ಯವಾದ ಭವನವನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ನಗರದ ಹೃದಯದ ಭಾಗದಲ್ಲಿ 2011ರಲ್ಲಿ ಆರಂಭವಾದ ಭವನದ ಕಾಮಗಾರಿಯು ಈ ಇನ್ನೂ ಪೂರ್ಣಗೊಂಡಿಲ್ಲದಿರುವುದನ್ನು ಸಿಪಿಐ(ಎಂ) ಖಂಡಿಸುತ್ತಿದ್ದು, ಕೂಡಲೇ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಬೇಕೆಂದು ಒತ್ತಾಯಿಸಿದರು.

ಕಳೆದ 10 ವರ್ಷದಲ್ಲಿ ಎರಡು ಸರ್ಕಾರಗಳು ಬಂದು ಹೋದರೂ ಸಂವಿಧಾನ ಶಿಲ್ಪಿಯ ಭವನ ಪೂರ್ಣಗೊಳಿಸಿಲ್ಲ. ಪ್ರತಿ ವರ್ಷ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಮತ್ತು ಪರಿನಿಬ್ಬಾಣ ದಿನಾಚರಣೆಯಂದು ಮಾತ್ರ ಅಪೂರ್ಣವಾಗಿರುವ ಅಂಬೇಡ್ಕರ್ ಭವನ ಜಿಲ್ಲಾಡಳಿತಕ್ಕೆ ನೆನಪಾಗುತ್ತದೆ. ತದನಂತರ ಯಾರೂ ಇತ್ತ ಸುಳಿಯುವುದಿಲ್ಲ. ಇದರಿಂದ ಭವನದ ಸುತ್ತಲೂ ಗಿಡಗಂಟಿಗಳು ಬೆಳೆದು ಭವನವು ಪಳೆಯುಳಿಕೆಯ ಅವಶೇಷಗಳಂತಾಗುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಜಿ.ರಾಜೇಂದ್ರ, ಜಗದೀಶ್ ಸೂರ್ಯ, ಬಾಲಾಜಿ ರಾವ್, ಕೆ.ಬಸವರಾಜು, ಜೈರಾಮ್, ಸುಬ್ರಮಣ್ಯ, ಅಪ್ಪಣ್ಣ, ಬಸವಯ್ಯ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.12.2023 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023ರಿಂದ 15.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ:** 94ನೇ ಅಥ್ಲೆಟಿಕ್ಸ್ ಕ್ರೀಡಾಕೂಟ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್, ಅಧ್ಯಕ್ಷತೆ: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಸ್ಥಳ: ಓವೆಲ್ ಮೈದಾನ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು:** ಕಾಲೇಜು ಸಂಸ್ಥಾಪಕರ ದಿನಾಚರಣೆ ಅಂಗವಾಗಿ ರಕ್ತ ಗುಂಪು ತಪಾಸಣೆ ಮತ್ತು ರಕ್ತದಾನ ಶಿಬಿರ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಬಿ.ವಿ. ಪ್ರಶಾಂತ್, ಸಂಪನ್ಮೂಲ ವ್ಯಕ್ತಿಗಳು: ಜೀವಧಾರ ರಕ್ತನಿಧಿ ಕೇಂದ್ರದ ವೈದ್ಯಕೀಯ ಅಧಿಕಾರಿ ಡಾ. ಕೃತಿಕಾ, ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಎಸ್.ಇ.ಗಿರೀಶ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಹೆಚ್‌ಡಿಎಫ್‌ಸಿ ಬ್ಯಾಂಕ್ ಸಹಾಯಕ ಉಪಾಧ್ಯಕ್ಷೆ ಪೂರ್ಣಿಮಾ ಪೂಂಜ, ಎಸ್.ಭ್ರಮರಾಂಭ, ಪ್ರೊ.ಎನ್.ಎಂ.ರಾಮಚಂದ್ರಯ್ಯ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.45ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಫೋರೆನ್ಸಿಕ್ ಫೇರ್–2023, ಮುಖ್ಯ ಅತಿಥಿಗಳು: ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಗೌರವ ಅತಿಥಿಗಳು: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಆಡಳಿತಾಧಿಕಾರಿ ಎಸ್.ಆರ್. ಸತೀಶ್‌ಚಂದ್ರ, ಸ್ಥಳ: ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಬನ್ನಿಮಂಟಪ, ಬೆಳಗ್ಗೆ 10ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಕಾನೂನು ಅಧ್ಯಯನ ವಿಭಾಗ :** ಕನ್ನಡ ರಾಜ್ಯೋತ್ಸವ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ, ಮುಖ್ಯ ಅತಿಥಿಗಳು : ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ್, ಗೌರವ ಅತಿಥಿಗಳು : ಕಾನೂನು ಪ್ರಾಧ್ಯಾಪಕರಾದ ಡಾ. ರಮೇಶ್, ಡಾ. ಎಂ. ಸುರೇಶ್ ಬೆಂಜಮಿನ್, ಅಧ್ಯಕ್ಷತೆ : ಕಾನೂನು ನಿಕಾಯ ಅಧ್ಯಕ್ಷರು ಹಾಗೂ ಡೀನ್ ಡಾ. ಟಿ.ಆರ್. ಮಾರುತಿ, ಸ್ಥಳ: ಕಾನೂನು ವಿಭಾಗ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯದ ಡಾ. ಸದಾನಂದ ಬಿ. ಸುಗಂಧಿ ಅವರಿಂದ ಭಾರತದ ಸಂವಿಧಾನದಲ್ಲಿ ಪ್ರಾಚೀನ ಭಾರತದ ಕುರುಹುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ವಿ. ಶೋಭ, ಸ್ಥಳ: ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಮಾಧ್ಯಮ ಪ್ರತಿನಿಧಿಗಳಿಗೆ ವಾರ್ತಾಲಾಪ ಕಾರ್ಯಾಗಾರ ಮತ್ತು ಸಂವಾದ, ಸ್ಥಳ: ಸಿದ್ದಾರ್ಥ ಹೋಟೆಲ್, ಬೆಳಗ್ಗೆ 10.30ಕ್ಕೆ.

■ **ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಅಂಡ್ ಟೆಕ್ನಾಲಜಿಸ್ಟ್ (ಇಂಡಿಯಾ) :** 9ನೇ ಅಂತಾರಾಷ್ಟ್ರೀಯ ಆಹಾರ ಮೇಳ, ಉಪಸ್ಥಿತರು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಸಿಎಸ್‌ಐಆರ್–ಐಐಟಿಆರ್ ನಿರ್ದೇಶಕ ಡಾ. ಎನ್. ಭಾಸ್ಕರ್, ಸಿಎಸ್‌ಐಆರ್–ಸಿಡಿಆರ್ ನಿವೃತ್ತ ಸಹಾಯಕ ನಿರ್ದೇಶಕ ಡಾ. ಪ್ರದೀಪ್ ಕೆ. ಶ್ರೀವತ್ಸ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಶಶಾಂಕ್ ಆರ್. ಜೋಶಿ, ಡಾ. ಸುರೇಶ್ ಡಿ. ಶಾಕರೆ, ಡಾ. ಎನ್. ಕಲೈಸೆಲ್ವಿ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ:ಕರಾಮುವಿವಿ ಘಟಿಕೋತ್ಸವ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಜಿ.ಎಂ.ಹೆಗಡೆ, 6.50 ರೈತರಿಗೆ ಸಲಹೆ, 8.30 ಆರೋಗ್ಯಾಮೃತ–ಪ್ರಾಯೋಜಿತ ಕಾರ್ಯಕ್ರಮ, 10.00 ಹೆಚ್.ಟಿ.ಹರೀಶ್–ಸ್ಯಾಕ್ಸೋಫೋನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ–ರಮಾ ರಾಮಕೃಷ್ಣ, 4.00 ಜನಪದ ಸಂಗೀತ, 6.50 ಕೃಷಿರಂಗ–ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ರಾಘವೇಂದ್ರ ಕೆ.ಮೆಸ್ತ, 8.00 ಯುವವಾಣಿ, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಗಡಿ ದಾಟಿದಾಗ", ರಚನೆ: ಡಾ.ಹೆಚ್. ರಾಚಪ್ಪ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿಬ್ಬಾಣ ದಿನ

ಮೈಸೂರಲ್ಲಿ ವಿವಿಧೆಡೆ ಮೇಣದ ಬತ್ತಿ ಮೆರವಣಿಗೆ





ಮೈಸೂರಿನ ಪುರಭವನ ಆವರಣದಲ್ಲಿ ಅಂಬೇಡ್ಕರ್ ಅವರ ಪರಿನಿಬ್ಬಾಣದ ಅಂಗವಾಗಿ ಬುಧವಾರ ಸಂಜೆ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪೌರಕಾರ್ಮಿಕರ ಮಹಾ ಸಂಘದಿಂದ ಪುಷ್ಪ ನಮನ ಸಲ್ಲಿಸಿ, ಮೇಣದ ಬತ್ತಿ ಬೆಳಗಿಸಲಾಯಿತು. (ಬಲಚಿತ್ರ) ಮೈಸೂರಿನ ಅಶೋಕಪುರಂನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಮತ್ತು ಬುದ್ಧನ ವಿಗ್ರಹದ ಸ್ತಬ್ಧಚಿತ್ರದೊಂದಿಗೆ ಮೇಣದ ಬತ್ತಿ ಮೆರವಣಿಗೆ ನಡೆಸಲಾಯಿತು.

ಮೈಸೂರು,ಡಿ.6(ಪಿಎಂ)–ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ನಗರದಲ್ಲಿ ಬುಧವಾರ ಸಂಜೆ ವಿವಿಧೆಡೆ ಮೇಣದಬತ್ತಿ ಮೆರವಣಿಗೆ ನಡೆಸಿ, ಬಾಬಾ ಸಾಹೇಬರ ಕೊಡುಗೆ, ಸಾಧನೆ ಮತ್ತು ತ್ಯಾಗವನ್ನು ಸ್ಮರಿಸಿ, ಅವರಿಗೆ ಗೌರವ ಪೂರ್ವಕ ನಮನ ಸಲ್ಲಿಸಲಾಯಿತು.

ಪೌರಕಾರ್ಮಿಕರ ಮಹಾಸಂಘ: ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದ ಮೈಸೂರು ಜಿಲ್ಲಾ ಶಾಖೆ ವತಿಯಿಂದ ಮೇಣದಬತ್ತಿ ದೀಪಗಳ ಮೆರವಣಿಗೆ ನಡೆಸಿ, ಗೌರವಪೂರ್ವಕ ನಮನಗಳನ್ನು ಸಲ್ಲಿಸಲಾಯಿತು.

ನಗರದ ಗನ್‌ಹೌಸ್ ಬಳಿಯ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಪುಷ್ಪಗಳಿಂದ ಅಲಂಕೃತಗೊಂಡ ಬಾಬಾ ಸಾಹೇಬರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಬಿಎನ್ ರಸ್ತೆ (ದೊಡ್ಡಕೆರೆ ಮೈದಾನದ ಮಾರ್ಗ), ಹಾರ್ಡಿಂಗ್ ವೃತ್ತದ ಮೂಲಕ ಪುರಭವನ ಆವರಣ ತಲುಪಿ, ಇಲ್ಲಿರುವ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಮನಃ ಪೂರ್ವಕವಾಗಿ ಸ್ಮರಿಸಲಾಯಿತು. ಮಹಾಸಂಘದ ರಾಜ್ಯಾಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ, ಸಂಘದ ಪದಾಧಿಕಾರಿಗಳಾದ ಆರ್ಟಿಸ್ಟ್ ನಾಗರಾಜ್, ಮೋಹನ್ ಕುಮಾರ್ ಸೇರಿದಂತೆ ಹಲವಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಅಶೋಕಪುರಂ ಜನತೆ: ಅಶೋಕಪುರಂ ಜನತೆ ವತಿಯಿಂದ ಭೀಮ ಜ್ಯೋತಿ



ಮೈಸೂರಿನ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ (ಎಫ್‌ಟಿಎಸ್ ವೃತ್ತ) ಡಾ.ಬಿ.ಆರ್.ಅಂಬೇಡ್ಕರ್ ಅವರ ಬೃಹತ್ ಫೋಟೋ ಮತ್ತು ಬುದ್ಧನ ವಿಗ್ರಹದ ಸ್ತಬ್ಧಚಿತ್ರದೊಂದಿಗೆ ಮೇಣದ ಬತ್ತಿ ಮೆರವಣಿಗೆ ನಡೆಸಲಾಯಿತು.



ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಶ್ರೀ ರಾಮಮಂದಿರ, ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪದಾಧಿಕಾರಿಗಳು, ಯಜಮಾನರು, ಮುಖಂಡರು ಮೈಸೂರಿನ ಎಫ್‌ಟಿಎಸ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಮೇಣದಬತ್ತಿ ಬೆಳಗಿಸಿ, ಗೌರವ ಸಲ್ಲಿಸಿದರು.

ಮೆರವಣಿಗೆ ನಡೆಸಿ ಅಂಬೇಡ್ಕರ್ ಅವರಿಗೆ ಮಹಾ ನಮನ ಸಲ್ಲಿಸಲಾಯಿತು. ಅಂಬೇಡ್ಕರ್ ಭಾವಚಿತ್ರ ಹಾಗೂ ಬುದ್ಧನ ವಿಗ್ರಹ ಒಳಗೊಂಡ ಸ್ತಬ್ಧಚಿತ್ರದೊಂದಿಗೆ ಮಕ್ಕಳು, ಹಿರಿಯರು, ಮಹಿಳೆಯರು ಮೇಣದಬತ್ತಿ ಹಿಡಿದು ಅಶೋಕಪುರಂನ ವಿವಿಧ ರಸ್ತೆಗಳಲ್ಲಿ ಸಾಗಿದರು.

ಇದಕ್ಕೂ ಮುನ್ನ ಇಲ್ಲಿನ ಡಾ.ಅಂಬೇಡ್ಕರ್ ಉದ್ಯಾನವನದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು.



ಮೈಸೂರು ವಕೀಲರ ಸಂಘದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನವನ್ನು ಬುಧವಾರ ಆಚರಿಸಲಾಯಿತು. ಈ ವೇಳೆ ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಲಾ ಗೈಡ್ ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ಹಿರಿಯ ವಕೀಲರಾದ ಐ.ಸಿ.ಸುಬ್ರಹ್ಮಣ್ಯ, ಎಸ್.ಲೋಕೇಶ್, ತಿಮ್ಮಯ್ಯ, ಸನತ್‌ಕುಮಾರ್, ಪುಟ್ಟಸಿದ್ದೇಗೌಡ, ಪುಟ್ಟರಸ ಇನ್ನಿತರರು ಉಪಸ್ಥಿತರಿದ್ದರು.

ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿಬೇಗಂ, ಲೇಖಕ ಸಿದ್ದಸ್ವಾಮಿ ಸೇರಿದಂತೆ ನೂರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಗಾಂಧಿನಗರ: ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ದಲಿತ ಮಹಾಸಭಾದ ವತಿಯಿಂದ ಅಂಬೇಡ್ಕರ್ ಅವರ ಬೃಹತ್ ಫೋಟೋ ಹಾಗೂ ಬುದ್ಧನ ವಿಗ್ರಹ ಒಳಗೊಂಡ ಸ್ತಬ್ಧಚಿತ್ರದೊಂದಿಗೆ ಮೇಣದ ಬತ್ತಿ ಮೆರವಣಿಗೆ ನಡೆಸಲಾಯಿತು.

ಅಂಬೇಡ್ಕರ್ ವೃತ್ತದಲ್ಲಿರುವ (ಎಫ್‌ಟಿಎಸ್ ವೃತ್ತ) ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಮೇಣದ ಬತ್ತಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಸ್ತಬ್ಧಚಿತ್ರದಲ್ಲಿದ್ದ ಅಂಬೇಡ್ಕರ್ ಅವರ ಬೃಹತ್ ಫೋಟೊ ಹಾಗೂ ಬುದ್ಧನ ವಿಗ್ರಹಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಮಹಾಸಭಾದ ಗೌರವಾಧ್ಯಕ್ಷರೂ ಆದ ಶ್ರೀ ಉರಿಲಿಂಗ ಪೆದ್ದೀಶ್ವರ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮೆರವಣಿಗೆ ಉದ್ಘಾಟಿಸಿದರು. ವಿದ್ಯುತ್ ದೀಪಗಳಿಂದ ಅಂಬೇಡ್ಕರ್ ಪ್ರತಿಮೆ ಇರುವ ಗೋಪುರವನ್ನು ಅಲಂಕೃತಗೊಳಿಸಲಾಗಿತ್ತು. ಮೆರವಣಿಗೆಗೂ ಮುನ್ನ ಅಂಬೇಡ್ಕರ್ ವೃತ್ತದಲ್ಲಿ ಕ್ರಾಂತಿಗೀತೆಗಳ ಗಾಯನ ಕಾರ್ಯಕ್ರಮ ನಡೆಯಿತು. ಅಂಬೇಡ್ಕರ್ ಅವರ ಹೋರಾಟ, ತ್ಯಾಗ, ಕೊಡುಗೆ ಮತ್ತು ಸಾಧನೆಯ ಸ್ಮರಣೆಯ ಸಾಹಿತ್ಯ ಹೊಂದಿರುವ ಗೀತೆಗಳನ್ನು ಸಾದರಪಡಿಸಲಾಯಿತು.

ಫೈವ್‌ಲೈಟ್ ವೃತ್ತ, ಅಶೋಕ ರಸ್ತೆ, ನೆಹರು ವೃತ್ತ, ಇರ್ವಿನ್ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಅಂತಿಮವಾಗಿ ಪುರಭವನದ ಆವರಣ ತಲುಪಿ, ಇಲ್ಲಿನ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಅರ್ಪಿಸಲಾಯಿತು. ಪುರಭವನ ಆವರಣದ ಅಂಬೇಡ್ಕರ್ ಪ್ರತಿಮೆ ಇರುವ ಗೋಪುರವನ್ನು ವಿದ್ಯುತ್ ದೀಪಗಳು ಹಾಗೂ ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಮಹಾಸಭಾದ ಅಧ್ಯಕ್ಷ ಪುಟ್ಟರಂಗಸ್ವಾಮಿ, ಉಪಾಧ್ಯಕ್ಷ ಅನಂತ್, ಪ್ರಧಾನ ಕಾರ್ಯದರ್ಶಿ ಎಸ್.ಆದರ್ಶ್, ಪಾಲಿಕೆ ಮಾಜಿ ಸದಸ್ಯ ಆರ್.ಸಿದ್ದಪ್ಪ, ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್, ಪ್ರಕಾಶಕ ಭರತ್ ರಾಮಸ್ವಾಮಿ, ಕಾಂಗ್ರೆಸ್ ಮುಖಂಡ ಎಸ್. ರಾಜೇಶ್ ಸೇರಿದಂತೆ ನೂರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ, ವಿವಿಧ ಸಂಘಟನೆಗಳ ವತಿಯಿಂದ ನಗರದ ವಿವಿಧೆಡೆ ಅಂಬೇಡ್ಕರ್ ಅವರ ಫೋಟೋಗೆ ಪುಷ್ಪ ನಮನ ಸಲ್ಲಿಸಿ, ಮೇಣದ ಬತ್ತಿ ಬೆಳಗಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಗೌರವ ಸಮರ್ಪಿಸಲಾಯಿತು.

ಅಂಬೇಡ್ಕರ್ ಸ್ಮರಿಸಿದ ಪ್ರಧಾನಿ ಮೋದಿ



ನವದೆಹಲಿ: ಶೋಷಿತ ಮತ್ತು ವಂಚಿತರ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುಣ್ಯತಿಥಿಯಂದು ಪ್ರಧಾನಿ ನರೇಂದ್ರ ಮೋದಿ, ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಡಾ.ಅಂಬೇಡ್ಕರ್ ಅವರ ಪುಣ್ಯತಿಥಿಯನ್ನು ದೇಶಾದ್ಯಂತ ಮಹಾಪರಿನಿರ್ವಾಣ ದಿನವೆಂದು ಆಚರಿಸಲಾಗುತ್ತದೆ. ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ ಅಲ್ಲದೆ, ಸಾಮಾಜಿಕ ಸೌಹಾರ್ದತೆಯ ಅಮರ ಹೋರಾಟಗಾರರಾಗಿದ್ದರು. ದಲಿತ ಕುಟುಂಬದಿಂದ ಬಂದ ಅಂಬೇಡ್ಕರ್ ಹಿಂದುಳಿದವರ ಪರವಾಗಿ ಹೋರಾಡುವ ಮೂಲಕ ಭಾರತದ ರಾಜಕೀಯದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದರು ಎಂದು ಕೂಡ ಪ್ರಧಾನಿ ಸ್ಮರಿಸಿದ್ದಾರೆ.

ದಲಿತ ಹಿನ್ನೆಲೆಯ ಅಂಬೇಡ್ಕರ್ ಅವರು 1956ರಲ್ಲಿ ನಿಧನರಾದಾಗಿನಿಂದ ಅವರ ತತ್ವ, ವಿಚಾರಧಾರೆಗಳು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಹೋಗುತ್ತಿದೆ. ನಾಯಕರು, ವಿಶೇಷವಾಗಿ ದಲಿತ ಹಿನ್ನೆಲೆಯುಳ್ಳವರು, ಶಿಕ್ಷಣ, ಸಾಂವಿಧಾನಿಕ ಆಂದೋಲನ ಮತ್ತು ತಮ್ಮ ಬಲವರ್ಧನೆಗಾಗಿ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಪರಿಶಿಷ್ಟ ಜಾತಿಗಳು, ಪ್ರಭಾವಿ ಮತದಾರ ಬಣ ಮತ್ತು ಇತರ ದುರ್ಬಲ ವರ್ಗಗಳನ್ನು ಒಟ್ಟುಗೂಡಿಸಲು ಕೂಡ ಡಾ.ಬಿ.ಆರ್.ಅಂಬೇಡ್ಕರ್ ವಿಚಾರಧಾರೆಗಳನ್ನು ಬಳಸಲಾಗುತ್ತಿದೆ.



ಮೈಸೂರು ತಾಲೂಕು ಹೊಸಹುಂಡಿಯಲ್ಲಿ ಅಯ್ಯಪ್ಪ ಸ್ವಾಮಿ, ನವಗ್ರಹ ದೇವಸ್ಥಾನ ಮತ್ತು ಉಗ್ರಾಣ ಕಟ್ಟಡಕ್ಕೆ ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ನೇತೃತ್ವದಲ್ಲಿ ಗುದ್ದಲಿಪೂಜೆ ಮಾಡಲಾಯಿತು. ಪಕ್ಷದ ಮೈಸೂರು ನಗರಾಧ್ಯಕ್ಷ ಶ್ರೀನಿವಾಸ್, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷೆ ಶ್ರೀಮತಿ ಭಾಗ್ಯಮ್ಮ, ರಾಜ್ಯ ಉಪಾಧ್ಯಕ್ಷ ಮೋಹನ್‌ದಾಸ್, ರಾಜ್ಯ ಯುವ ಘಟಕದ ಅಧ್ಯಕ್ಷ ಮಂಜುನಾಥ್, ಅಯ್ಯಪ್ಪ ನವಗ್ರಹ ದೇವಸ್ಥಾನ ಸಮಿತಿಯ ಯುವ ಬಳಗದ ಯುವಕರು, ಹೊಸಹುಂಡಿ, ಗುಡುಮಾದನಹಳ್ಳಿ, ಬಂಡೀಪಾಳ್ಯ ಗ್ರಾಮಸ್ಥರು ಉಪಸ್ಥಿತರಿದ್ದರು.

5 ಲಕ್ಷ ಸಾಲದ ಆಸೆ ತೋರಿಸಿ 39,349 ರೂ. ವಂಚನೆ

ಮುಂದುವರೆದ ಆನ್‌ಲೈನ್ ದೋಖಾ

ಮೈಸೂರು, ಡಿ.6– ಆನ್‌ಲೈನ್ ಮೂಲಕ 5.35 ಲಕ್ಷ ರೂ. ಸಾಲ ನೀಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ 39,349 ರೂ. ವಂಚಿಸಲಾಗಿದೆ.

ಮೈಸೂರಿನ ಮಹದೇವಪುರ ಗ್ರಾಮದ ಕೆ.ಹನುಮಂತ ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ ಡಿ.6ರಂದು ಬೆಳಗ್ಗೆ 8677960632 ಮತ್ತು 9005 610073 ಸಂಖ್ಯೆಗಳಿಂದ ಕರೆ ಮಾಡಿದ ವಂಚಕರು ತಾವು ರಿಲೈಯನ್ಸ್ ಫೈನಾನ್ಸ್‌ನಿಂದ ಕರೆ ಮಾಡುತ್ತಿದ್ದು, ನಿಮಗೆ 5 ಲಕ್ಷ ರೂ. ಬಿಸಿನೆಸ್ ಲೋನ್ ಮಂಜೂರಾಗಿದೆ ಎಂದು ತಿಳಿಸಿದ್ದಾರೆ.

ಲೋನ್ ಪಡೆಯಲು ಆಧಾರ್ ಕಾರ್ಡ್, ಪಾನ್ ಕಾರ್ಡ್, ಫೋಟೋ, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಮುಂತಾದವುಗಳನ್ನು ವಾಟ್ಸಾಪ್ ಮೂಲಕ ಪಡೆದುಕೊಂಡ ವಂಚಕರು, ರಿಲೈಯನ್ಸ್ ಕ್ಯಾಪಿಟಲ್ ಎಂಬ ಹೆಸರಿನಲ್ಲಿ ಹನುಮಂತ ಅವರಿಗೆ 5 ಲಕ್ಷ ರೂ. ಸಾಲ ಮಂಜೂರಾಗಿರುವುದಾಗಿಯೂ, ತಿಂಗಳಿಗೆ 10,623. 52 ರೂ.ಗಳಂತೆ 5 ವರ್ಷ ಇಎಂಐ ಕಟ್ಟಬೇಕೆಂದು ಮಂಜೂರಾತಿ ಪತ್ರವನ್ನೂ ಕೂಡ ವಾಟ್ಸಾಪ್ ಮೂಲಕ ರವಾನಿಸಿದ್ದಾರೆ. ಆದರೆ 2550 ರೂ. ಪ್ರೋಸೆಸಿಂಗ್ ಚಾರ್ಜ್ ಪಾವತಿಸಿದ ನಂತರ ಅವರ ಖಾತೆಗೆ 5 ಲಕ್ಷ ರೂ. ಜಮೆ ಮಾಡುವುದಾಗಿ ಮಂಜೂರಾತಿ ಪತ್ರದಲ್ಲಿ ತಿಳಿಸಲಾಗಿತ್ತು.

ಹನುಮಂತ ಅವರು 2550 ರೂ.ಗಳನ್ನು ಆನ್‌ಲೈನ್ ಮೂಲಕ ಕಳುಹಿಸಿದ ನಂತರ ಮತ್ತೆ ಅವರಿಗೆ ಕರೆ ಮಾಡಿದ ವಂಚಕರು, ಇನ್ಶೂರೆನ್ಸ್ ಚಾರ್ಜ್ 16,849 ರೂ. ಹಾಗೂ ಟಿಡಿಎಸ್ 21,900 ರೂ. ಪಾವತಿಸಿದರೆ ಹನುಮಂತ ಅವರ ಖಾತೆಗೆ 5.35 ಲಕ್ಷ ಜಮೆ ಆಗುತ್ತದೆ ಎಂದು ತಿಳಿಸಿದ್ದಾರೆ. ಅದರಂತೆ ಹನುಮಂತ ಒಟ್ಟು 39,349 ರೂ. ಪಾವತಿಸಿದ ನಂತರ ಮತ್ತೆ 28,500 ರೂ. ವರ್ಗಾವಣೆ ಮಾಡುವಂತೆ ವಂಚಕರು ಕೇಳಿದಾಗ ತಾವು ಮೋಸ ಹೋಗಿರುವುದಾಗಿ ಮನಗಂಡ ಹನುಮಂತ ವಿದ್ಯಾರಣ್ಯಪುರಂ ಠಾಣೆ ದೂರು ಸಲ್ಲಿಸಿದ್ದಾರೆ.

ಮೈಸೂರು ಐತಿಹಾಸಿಕ ಪೂರ್ಣಯ್ಯ ನಾಲೆ, ಬೋಗಾದಿ ಕೆರೆ, ಲಿಂಗಾಂಬುದಿ ಕೆರೆ ಸಂಪರ್ಕ ಕೊಂಡಿಯಾಗಿರುವ ರಾಜಕಾಲುವೆ ಉಳಿವಿಗೆ ಹೋರಾಟ

- ಮೈಸೂರು ಗ್ರಾಹಕರ ಪರಿಷತ್‌ನಲ್ಲಿ ಗಹನ ಚರ್ಚೆ
- ಜನಾಗ್ರಹ, ನಾಲಾ ಉತ್ಸವದ ಮೂಲಕ ಜನಾಂದೋಲನ ರೂಪಿಸಲು ನಿರ್ಧಾರ
- ಜನಪ್ರತಿನಿಧಿಗಳನ್ನೊಳಗೊಂಡಂತೆ ಹೋರಾಟದ ಚಿಂತನೆ

ಮೈಸೂರು,ಡಿ.6(ಎಸ್‌ಪಿಎನ್)– ಐತಿಹಾಸಿಕ ಪೂರ್ಣಯ್ಯ ನಾಲೆ, ಬೋಗಾದಿ ಕೆರೆ ರಾಜಕಾಲುವೆ, ಲಿಂಗಾಂಬುದಿ ಕೆರೆ ರಾಜಕಾಲುವೆ ಒತ್ತುವರಿ ಸಂಬಂಧ ಹಂತ ಹಂತವಾಗಿ 'ಜನಾಗ್ರಹ ಚಳವಳಿ' ಮತ್ತು 'ನಾಲಾ ಹಬ್ಬ' ಶೀರ್ಷಿಕೆಯಡಿ ಜನರಲ್ಲಿ ಜಾಗೃತಿ ಮೂಡಿಸಲು ಮೈಸೂರು ಗ್ರಾಹಕರ ಪರಿಷತ್ ಸದಸ್ಯರು ಬುಧವಾರ ಒಕ್ಕೊರಲ ನಿರ್ಣಯ ಕೈಗೊಂಡರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ಪರಿಸರವಾದಿ ಹಾಗೂ ಮೈಗ್ರಾಪ ಸದಸ್ಯ ಯು.ಎನ್. ರವಿಕುಮಾರ್, ಪೂರ್ಣಯ್ಯ ನಾಲೆ ಒತ್ತುವರಿಯಿಂದ ಆಗಿರುವ ಸಮಸ್ಯೆಯಿಂದ ಬೋಗಾದಿ ಕೆರೆ ತುಂಬಿದಾಗ ಆಗುವ ಅನಾಹುತ, ಲಿಂಗಾಂಬುದಿ ಕೆರೆ, ರಾಜಕಾಲುವೆ ಒತ್ತುವರಿಯಿಂದ ಅಕ್ಕ–ಪಕ್ಕದ ಬಡಾವಣೆಗಳಿಗೆ ಆಗುತ್ತಿರುವ ತೊಂದರೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಿದರು.

ಪೂರ್ಣಯ್ಯ ನಾಲೆ ಮೊದಲು 22 ಕಿ.ಮೀ ನಿರ್ಮಿಸಲಾಗಿತ್ತು. ಕಾಲಕ್ರಮೇಣ ಮೈಸೂರು ನಗರ ಬೆಳೆದಂತೆ ಈ ನಾಲೆ ಒತ್ತುವರಿ ಮಾಡಿ, ಸಂಪೂರ್ಣ ಮುಚ್ಚಲಾಗಿದೆ. ಇದರಿಂದ ಶೇ.80ರಷ್ಟು ಮಳೆ ನೀರು ಕುಕ್ಕರಹಳ್ಳಿ ಕೆರೆಗೆ ಬರುವುದು ಸ್ಥಗಿತಗೊಂಡಿದೆ. ಅಲ್ಲದೆ, ಇನ್ನು ಳಿದ 2.5 ಕಿ.ಮೀ ಪೂರ್ಣಯ್ಯ ನಾಲೆ ಯನ್ನು ಜಿಲ್ಲಾಡಳಿತ ಸರ್ವೆ ನಡೆಸಿ, ವಶಕ್ಕೆ ಪಡೆಯುವಂತೆ ಒತ್ತಡ ಹಾಕಬೇಕು. ಈ 2.5 ಕಿ.ಮೀ ನವೀಕರಿಸಿದರೆ, ಕುಕ್ಕರಹಳ್ಳಿ ಕೆರೆಗೆ ಶೇ.30 ಮಳೆ ನೀರು ಸಂಗ್ರಹ ವಾಗಲು ಅನುಕೂಲವಾಗುತ್ತದೆ. ಇದನ್ನು ಸಂರಕ್ಷಿಸುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯತೆ ಕುರಿತು ಸಭೆಗೆ ತಿಳಿಸಿದರು. ಅಲ್ಲದೆ, ಪೂರ್ಣಯ್ಯ ನಾಲೆ ಕುರುಹುಗಳಿರುವ ಕಡೆ ನಾಲಾ ಹಬ್ಬ



ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಿ, ಜಲಮೂಲಗಳ ಉಳಿಸುವ ಅಗತ್ಯ ಕುರಿತು ನಾಲಾ ಅಕ್ಕ–ಪಕ್ಕದವರಿಗೆ ತಿಳಿಸಿಕೊಡುವಂತೆ ಮನವಿ ಮಾಡಿದರಲ್ಲದೆ, 4–5 ಗಂಟೆ ಧಾರಾಕಾರ ಮಳೆ ಸುರಿದರೆ ಬೋಗಾದಿ ಕೆರೆ ತುಂಬಿ, ಆ ನೀರು ವ್ಯವಸ್ಥಿತವಾಗಿ ಹರಿದು ಹೋಗಲು ಜಾಗವಿಲ್ಲದೆ, ರಸ್ತೆ, ರಾಜಕಾಲುವೆ ಅಕ್ಕ–ಪಕ್ಕದ ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸುವ ಸಂದರ್ಭವನ್ನು ಜನರಿಗೆ ತಿಳಿಸಿಕೊಡಬೇಕು. ಹೊಸ ಹೊಸ ಬಡಾವಣೆಗಳಲ್ಲಿ ರಾಜಕಾಲುವೆ, ಪೂರ್ಣಯ್ಯ ನಾಲೆ ಒತ್ತುವರಿ ಕುರಿತು 'ನಾಲಾ ಹಬ್ಬ'ದ ಮೂಲಕ ಅಲ್ಲಿನ ಜನರನ್ನು ಜಾಗೃತಿಗೊಳಿಸುವುದು. ಅಲ್ಲದೆ, ಆ ಕಾರ್ಯಕ್ರಮಕ್ಕೆ ರಾಜಕಾರಣಿಗಳೂ ಭಾಗವಹಿಸುವಂತೆ ಆಸಕ್ತಿ ಮೂಡಿಸಬೇಕು ಎಂದು ಮೈಗ್ರಾಪ ಸದಸ್ಯ ಬಾಮೀ ಶೆಣೈ ಸಭೆಗೆ ತಿಳಿಸಿದರು.

ಕಾನೂನು ಹೋರಾಟಕ್ಕೂ ರೆಡಿ: ರಾಜಕಾಲುವೆ, ನಾಲೆ ಒತ್ತುವರಿ ಸರಾಗವಾಗಿ ತೆರವು ಸಾಧ್ಯತೆಗಳಿರುವಲ್ಲಿ ಅಂತಹ ಜಾಗಗಳನ್ನು ವಶಕ್ಕೆ ಪಡೆಯಲು ಒತ್ತಡ ತರುವುದು. ಕಾನೂನು ಮೂಲಕ ಒತ್ತುವರಿ ತೆರವುಗೊಳಿಸುವ ಸಂದರ್ಭವಿದೆಯೋ ಆ ಜಾಗಗಳ ಬಗ್ಗೆ ಕಾನೂನಿನ ಹೋರಾಟದ ಮೂಲಕವೇ ಬಿಡಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಅಂತರ ಜಲ ವೃದ್ಧಿಗೆ ಶ್ರಮಿಸಬೇಕು: ಮೈಸೂರು ವಿಜಯನಗರ ಸೇರಿದಂತೆ ಪಶ್ಚಿಮ ಭಾಗದಲ್ಲಿ ಅಂತರ್ಜಲ ಪ್ರಮಾಣ ಕಡಿಮೆ ಇದ್ದು, ಮುಂಬರುವ ದಿನಗಳಲ್ಲಿ ಕಾವೇರಿ ನೀರು ಸರಬರಾಜು ಆಗದಿದ್ದರೆ, ಈ ಭಾಗದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ ಎಂದು ಸದಸ್ಯ ವಿಶ್ವನಾಥ್ ಆತಂಕ ವ್ಯಕ್ತಪಡಿಸಿದರು.

ಕಾವೇರಿ ಹಾಗೂ ಕಬಿನಿ ಜಲಾಯನ ಪ್ರದೇಶವನ್ನು ವಿಂಗಡಿಸಿ, ಎತ್ತರದ ಭೂಪ್ರದೇಶವನ್ನು ಆಧರಿಸಿ ಪೂರ್ಣಯ್ಯ ನಾಲೆಯನ್ನು ನಿರ್ಮಿಸಲಾಗಿತ್ತು. ಇದರಿಂದ ಹುಯಿಲಾಳು ಕೆರೆ, ಮಾಗಡಹಳ್ಳಿ ಕೆರೆ ಸೇರಿದಂತೆ 6–7 ಕೆರೆಗಳ ಕೋಡಿ ನೀರು ಸೇರಿದಂತೆ ಮಳೆ ನೀರನ್ನು ಕುಕ್ಕರಹಳ್ಳಿ ಕೆರೆಗೆ ತರಲಾಗುತ್ತಿತ್ತು. ಒತ್ತುವರಿಯಿಂದ ನಗರ ಪ್ರದೇಶ ಸಣ್ಣಸಣ್ಣ ಕೆರೆಗಳಿಗೆ ಮಳೆ ನೀರು ಸಂಗ್ರಹಕ್ಕೆ ಜಾಗವೇ ಇಲ್ಲದಂತಾಗಿದೆ. ಈ ಸನ್ನಿವೇಶವನ್ನು ಭೂಗಳ್ಳರು ಉಪಯೋಗಿಸಿಕೊಂಡು ಕೆರೆಗಳನ್ನು ಮುಚ್ಚಿ ನಿವೇಶನ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂದು ಜಲಮೂಲಗಳ ಬಗ್ಗೆ ಯು.ಎನ್.ರವಿಕುಮಾರ್ ಸೇರಿದಂತೆ ಅನೇಕ ಸದಸ್ಯರು ಇದರ ಕುರಿತು ಬೆಳಕು ಚೆಲ್ಲಿದರು.

ಮಾಗಡಹಳ್ಳಿ ಕೆರೆಯಲ್ಲಿ 150 ವರ್ಷದ ಹಿಂದೆ ನಾಲೆಗೆ ಮಾಡಿದ್ದ ಕೋಡಿ ಗೇಟ್ ಇದ್ದು, ಪಾರಂಪರಿಕ ಸ್ಥಳವಾಗಿ ರಕ್ಷಣೆ ಮಾಡಬೇಕು. ಈ ಜಾಗದಲ್ಲಿ ಉದ್ಯಾನ ನಿರ್ಮಿಸಬೇಕು. ಮರಟಿಕ್ಯಾತನಹಳ್ಳಿ ವರೆಗೆ ನಾಲೆಯನ್ನು ರಕ್ಷಣೆ ಮಾಡಬೇಕು. ಬೆಂಗಳೂರಿನಲ್ಲಿ ಪ್ರವಾಹವಾದ ನಂತರ ರಾಜಕಾಲುವೆ ರಕ್ಷಣೆ ಮಾಡಲಾಯಿತು. ಮೈಸೂರಿನ ಮಹಾರಾಜರು ನಿರ್ಮಿಸಿದ ಪೂರ್ಣಯ್ಯ ನಾಲೆಯನ್ನು ಕಾಪಾಡುವುದು ಮೈಸೂರಿಗರಾದ ನಮಗೆ ಹೆಚ್ಚಿನ ಜವಾಬ್ದಾರಿ ಇದೆ. ಇದಕ್ಕೆ ಮತ್ತಷ್ಟು ಜನರ ಬೆಂಬಲ ಪಡೆಯಬೇಕು ಸದಸ್ಯ ಗಂಗಾಧರಗೌಡ ಸಲಹೆ ನೀಡಿದರು.

ನಮ್ಮಲ್ಲಿ ಒಗ್ಗಟ್ಟು ಮುಖ್ಯ: ನಗರ ಪ್ರದೇಶದಲ್ಲಿ ಭೂಗಳ್ಳರ ಪಾಲಾಗಿರುವ ಕೆರೆ, ರಾಜಕಾಲುವೆ, ನಾಲಾ ಜಾಗಗಳನ್ನು ಮರುವಶಕ್ಕೆ ಪಡೆಯಲು ಜನರಲ್ಲಿ ಜಾಗೃತಿ ಮೂಡಿಸಿ ಚಳವಳಿ ನಡೆಸಿದರೆ, ಈ ಹೋರಾಟರೊಂದಿಗೆ ಜನಪ್ರತಿನಿಧಿಗಳೂ ಸೇರಿಕೊಳ್ಳಲಿದ್ದಾರೆ. ಈ ಹಿಂದೆ ಕುಕ್ಕರಹಳ್ಳಿ ಕೆರೆ ರಕ್ಷಣೆಗಾಗಿ ನಡೆದ ಹೋರಾಟವೂ ನಮಗೆ ಮಾದರಿಯಾಗಬೇಕು. ಅಳಿದುಳಿದಿರುವ ನಾಲೆ ಕೈಬಿಟ್ಟು ಹೋಗುವ ಮುಂಚೆ ಅದನ್ನು ಉಳಿಸಿಕೊಳ್ಳಲು ಎಲ್ಲಾ ರೀತಿಯ ಹೋರಾಟಕ್ಕೂ ಮುಂದಾಗಬೇಕು ಎಂದು ಬಾಮೀ ಶೆಣೈ ನೀಡಿದ ಸಲಹೆಗೆ ಸದಸ್ಯರು ಒಕ್ಕೊರಲ ಬೆಂಬಲ ನೀಡಿದರು.

ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸಬೇಕು: ಪ್ರತಿದಿನ ಕುಕ್ಕರಹಳ್ಳಿ ಕೆರೆಗೆ 3 ಸಾವಿರಕ್ಕೂ ಅಧಿಕ ವಾಯುವಿಹಾರಿಗಳು ಬರುತ್ತಾರೆ. ಇದರಲ್ಲಿ ಕಾಳಜಿ ಇರುವವರನ್ನು ಸೇರಿಸಿಕೊಂಡು ಹೋರಾಟ ರೂಪಿಸಬೇಕು. ಕೆರೆಗೆ ಮಲಿನ ನೀರು ಸೇರುತ್ತಿದ್ದಾಗ, ಮೀನುಗಳ ಸಾವಾದಾಗ ನಡೆದ ಸಹಿ ಸಂಗ್ರಹ ಅಭಿಯಾನದಲ್ಲಿ ಎಲ್ಲರೂ ಪಾಲ್ಗೊಂಡಿದ್ದರು. ಮುಂದುವರೆದ ಭಾಗವಾಗಿ ವಿವಿಧ ಹೋರಾಟಗಳನ್ನು ರೂಪಿಸಿ, ಜಿಲ್ಲಾಡಳಿತ ಗಮನ ಸೆಳೆಯಬೇಕು ಎಂದು ಮತ್ತೊಬ್ಬ ಸದಸ್ಯ ಶೈಲಜೇಶ್ ಸಲಹೆ ನೀಡಿದರು.

'ಲಿಬಿಯಾದಂತಹ ಮರುಭೂಮಿಯಲ್ಲಿ ದಿಢೀರ್ ಪ್ರವಾಹ ಉಂಟಾಗಿತ್ತು ಆಗ ಅಲ್ಲಿನ ಜನರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅದೇ ಮಾದರಿಯ ಪ್ರವಾಹ ನಮ್ಮ ನಗರಕ್ಕೂ ಬರಬಹುದು. ಆಗ ಪರದಾಡುವ ಬದಲು ಈಗಲೇ ಎಚ್ಚೆತ್ತುಕೊಳ್ಳಬೇಕು. ಉದಾಹರಣೆಗೆ ಬೋಗಾದಿಯ ರಿಂಗ್‌ರಸ್ತೆ ಜಂಕ್ಷನ್‌ನಲ್ಲಿ 4 ದಿನ ಜೋರು ಮಳೆ ಬಂದರೆ ಸಂಚರಿಸಲಾಗದಷ್ಟು ಮಳೆ ನೀರು ನಿಲ್ಲುತ್ತದೆ. ರೈಲ್ವೆ ಬಡಾವಣೆಯಲ್ಲಿ ನಾಲೆಯನ್ನೇ ರಸ್ತೆ ಮಾಡಲಾಗಿದೆ. ಈ ಕಾಲುವೆ ಉಳಿಸಲು ಇಲ್ಲಿನ ನಿವಾಸಿಗಳು ಹೋರಾಟದಲ್ಲಿ ಭಾಗಿಯಾಗಲು ನಿರ್ಧರಿಸಿದ್ದಾರೆ ಎಂದು ರೈಲ್ವೆ ಬಡಾವಣೆಯ ನಿವಾಸಿ ಹರೀಶ್ ತಿಳಿಸಿದರು. ಇದಕ್ಕೆ ಎಸ್‌ಬಿಎಂ ಬಡಾವಣೆಯ ಜಯರಾಂ ಹಾಗೂ ಶ್ರೀಪತಿ ದನಿಗೂಡಿಸಿದರು. ಈ ವೇಳೆ ಶ್ರೀಪತಿ, ಜಯರಾಂ, ಪ್ರೊ.ಶೋಭನಾ, ವಿಶ್ವನಾಥ್ ಇದ್ದರು.

ರಾಜಕಾರಣಿಗಳ ಬೆಂಬಲವೂ ಬೇಕು

ಈ ಹಿಂದೆ ಮೈಗ್ರಾಪ ವತಿಯಿಂದ ಪೀಪಲ್ಸ್ ಪಾರ್ಕ್‌ನಲ್ಲಿನ ಪರಿಸರ ಉಳಿಸಲು ಚಳವಳಿ ಆರಂಭಿಸಿದ ಮೇಲೆ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ವಾಸು ಸೇರಿದಂತೆ ಇತರೆ ರಾಜಕಾರಣಿಗಳು ಈ ಚಳವಳಿಯನ್ನು ಮುಂದುವರೆಸಿದರು. ರೈಲ್ವೆ ಬಡಾವಣೆ, ಎಸ್‌ಬಿಎಂ ಬಡಾವಣೆ, ರೂಪಾನಗರ ಸೇರಿದಂತೆ ನಾಲೆ ಇರುವ ಜಾಗದಲ್ಲಿ ಚಳವಳಿ ನಡೆಸಬೇಕು. ನಾಲಾ ಹಬ್ಬ ಆಚರಿಸುವ ಮೂಲಕ ನಾಲೆ ಉಳಿಸಿಕೊಳ್ಳಲು ಆ ಭಾಗದ ರಾಜಕಾರಣಿಗಳ ಬೆಂಬಲವೂ ಬೇಕು ಎಂದು ಭಾಮೀ ಶೆಣೈ ಸಭೆಗೆ ಸಲಹೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಸಾಧು : ಪ್ರಾಣಿಗಳಿಗೆ ದೃಷ್ಟಿದೋಷದ ಸಮಸ್ಯೆ ಕಂಡು ಬರುವುದಿಲ್ಲ ಅಲ್ಲವೇ?

ಸಂತು : ಇರಬಹುದು ಅನ್ನಿಸುತ್ತೆ. ಯಾಕೆಂದರೆ ಕನ್ನಡಕ ಧರಿಸಿದ ಯಾವ ಪ್ರಾಣಿಯನ್ನೂ ನಾನು ಈವರೆಗೆ ಕಂಡಿಲ್ಲ!!

ಮೈಸೂರು ಮಿತ್ರ

ಗುರುವಾರ, 7 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಎಲ್ಲಾ ಮಹಾನ್ ಸಾಧನೆಗಳು ದಿಢೀರ್ ಎಂದು ಆಗುವುದಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ. ತಾಳ್ಮೆ ಮುಖ್ಯ. – ಮಾಯಾ ಏಂಜೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗ ಸಣ್ಣವನಾದರೂ, ಮಾತು ಸಣ್ಣದಲ್ಲ

ನಿಮ್ಮ ಪತ್ರಗಳು

ಅರ್ಜುನ ಅಜರಾಮರ



ಮಾನ್ಯರೆ,

ದೇಶ ಕಾಯುವ ಸೈನಿಕ ಉಗ್ರರೊಂದಿಗೆ ಹೋರಾಟ ಮಾಡಿ ವೀರ ಮರಣ ಹೊಂದಿದ ರೀತಿಯಲ್ಲಿ ಎಂಟು ಬಾರಿ ನಾಡದೇವತೆ ತಾಯಿ ಚಾಮುಂಡೇಶ್ವರಿಯನ್ನು ದಸರಾದಲ್ಲಿ ಹೆಗಲ ಮೇಲೆ ಹೊತ್ತು ನಾಡಿನ ಜನರ ಮನಸ್ಸಿನಲ್ಲಿ ಹಚ್ಚ ಅಳಿಯದಂತೆ ಉಳಿದಿದ್ದ, ದಸರಾ ಆನೆ ಅರ್ಜುನ, ಪುಂಡಾನೆಯೊಂದಿಗೆ ಕಾದಾಡುತ್ತಲೇ ವೀರ ಮರಣ ಹೊಂದಿದ ವಿಷಯ ಕೇಳಿ ನಾಡಿನ ಜನರು ಕಂಬನಿ ಮಿಡಿದಿದ್ದಾರೆ. 22 ಬಾರಿ ದಸರಾ ಉತ್ಸವದಲ್ಲಿ ಭಾಗವಹಿಸಿ, ಮೈಸೂರಿನ ಆನೆ ಪ್ರಿಯರಿಗೆ ಅಚ್ಚು– ಮೆಚ್ಚಿನ ಆನೆಯಾಗಿದ್ದ ಅರ್ಜುನನ ಸಾವು ಪ್ರಾಣಿ ಪ್ರಿಯರಿಗೆ ಆಘಾತವನ್ನೇ ಉಂಟುಮಾಡಿದೆ.

ನಿನ್ನೆ ಅರ್ಜುನನ ಅಂತ್ಯ ಸಂಸ್ಕಾರ ಸಕಲೇಶಪುರದ ಬಾಳೆಕೆರೆ ಅರಣ್ಯ ಪ್ರದೇಶದಲ್ಲಿ ನಡೆಯುವ ವೇಳೆ ಅಲ್ಲಿ ಸೇರಿದ್ದ ಜನರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಿರುವುದನ್ನು ಗಮನಿಸಿದರೆ, ಅರ್ಜುನನಿಗೆ ಅದೆಷ್ಟು ಸಾವಿರಾರು ಮಂದಿ ಅಭಿಮಾನಿಗಳು ಇದ್ದರು ಎಂಬುದು ತಿಳಿಯುತ್ತದೆ.

ಪುಂಡಾನೆಗಳಿಗೆ ಅರವಳಿಕೆ ಚುಚ್ಚುಮದ್ದನ್ನು ಶೂಟ್ ಮಾಡುವ ವೇಳೆ ಆಕಸ್ಮಿಕವಾಗಿ ಅರ್ಜುನನಿಗೆ ತಗುಲಿ ಅದು ಪ್ರಜ್ಞಾಹೀನವಾಗಿ ಪುಂಡಾನೆಗಳ ದಾಳಿಗೆ ಸಿಲುಕಿ ಅಸುನೀಗಿದೆ ಎಂಬುದಾಗಿ ಸ್ಥಳೀಯ ಜನರು ಆರೋಪಿಸುತ್ತಿದ್ದಾರೆ ಎಂಬುದಾಗಿ ಮಾಧ್ಯಮಗಳು ವರದಿ ಮಾಡಿವೆ. ಇದು ನಿಜವೇ ಆಗಿದ್ದರೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಏನೇ ಆಗಲಿ ವೀರ ಅರ್ಜುನ ಹೆಸರು ಜನ ಮಾನಸದಲ್ಲಿ ಚಿರಕಾಲ ಉಳಿಯುವಂತಾದ್ದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಒಣಗಿದ ಮರ ತೆರವುಗೊಳಿಸಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹಾಗೂ ಕುಶಾಲನಗರ ರಾಜ್ಯ ಹೆದ್ದಾರಿಯ ತಾವರೆಕೆರೆ ಏರಿ ಮೇಲೆ ಬೃಹತ್ ಮರವೊಂದು ಒಣಗಿದ್ದು ಅನಾಹುತಕ್ಕೆ ಆಹ್ವಾನ ನೀಡುವಂತಿದೆ. ರಸ್ತೆ ಪಕ್ಕದಲ್ಲಿ 66 ಕೆ.ವಿ. ವಿದ್ಯುತ್ ಕಂಬವಿದ್ದು ಒಣಗಿದ ಮರ ಬಿದ್ದರೆ ಅಪಾಯ ಸಂಭವಿಸುವ ಸಾಧ್ಯತೆಗಳು ಹೆಚ್ಚಾಗಿದೆ. ಅಲ್ಲದೆ ಇಲ್ಲಿ ರಾಜ್ಯ ಹೆದ್ದಾರಿ ಹಾಗೂ ಸಾರ್ವಜನಿಕರ ಸ್ಮಶಾನವಿದ್ದು ನೂರಾರು ವಾಹನಗಳು ಸಂಚರಿಸುವುದರಿಂದ ಯಾವ ಸಮಯದಲ್ಲಿ ಒಣಗಿದ ಮರ ಬೀಳುತ್ತದೆ ಎಂಬುದು ಗೊತ್ತಿಲ್ಲ. ಆದ್ದರಿಂದ ತಕ್ಷಣವೇ ಸಂಬಂಧಪಟ್ಟ ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆ, ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಇತ್ತ ಗಮನಹರಿಸಿ ಒಣಗಿದ ಮರವನ್ನು ತೆರವುಗೊಳಿಸಬೇಕೆಂದು ರೈತರು ಹಾಗೂ ವಾಹನ ಚಾಲಕರ ಮನವಿ.

–ಬೆಟ್ಟದಪುರ ಗ್ರಾಮಸ್ಥರು, ಪಿರಿಯಾಪಟ್ಟಣ ತಾಲೂಕು

ಲೋಕಸಭಾ ಚುನಾವಣೆಗೆ ಸರ್ಕಾರದ ಗ್ಯಾರಂಟಿ ಏನು?

ಮಾನ್ಯರೆ,

ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಒಂದು ರಾಜ್ಯದಲ್ಲಿ ಮಾತ್ರ ಗೆದ್ದು ಬೀಗಿದೆ. ಆದರೆ ಈ ಚುನಾವಣೆಯ ಫಲಿತಾಂಶ ರಾಷ್ಟ್ರ ಹಾಗೂ ರಾಜ್ಯ ನಾಯಕರ ನಿದ್ದೆ ಕೆಡಿಸಿರುವುದಂತು ಸುಳ್ಳಲ್ಲ. ಏಕೆಂದರೆ ಇದು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರದ ಸ್ಥಿತಿ ಯಾವ ರೀತಿ ಇರುತ್ತದೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆಯಂತಿದೆ.

ಐದು ಗ್ಯಾರಂಟಿಗಳನ್ನು ಜನರ ಮುಂದಿಟ್ಟು ವಿಧಾನಸಭಾ ಚುನಾವಣೆ ಗೆದ್ದಂತೆ ಲೋಕಸಭಾ ಚುನಾವಣೆಯನ್ನು ಗೆಲ್ಲುತ್ತೇನೆ ಎಂದರೆ, ಇಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಗೆಲುವಿನ ಗ್ಯಾರಂಟಿಯೇ ಇಲ್ಲ ಎಂಬಂತಾಗಿದೆ. ಏಕೆಂದರೆ ಈ ಆರು ತಿಂಗಳ ಸರ್ಕಾರದ ಕೆಲಸಗಳನ್ನು ಹಾಗೂ ವಿಧಾನಸಭಾ ಚುನಾವಣೆಯ ನಂತರ ಅಧಿಕಾರಕ್ಕೆ ರಾಜ್ಯ ನಾಯಕರು ನಡೆಸಿದ ಹಗ್ಗ ಜಗ್ಗಾಟ ಜನರ ಕಣ್ಣ ಮುಂದಿದೆ.

ಇನ್ನು ಐದು ಗ್ಯಾರಂಟಿಗಳ ನೆಪದಲ್ಲಿ ಹೆಂಗಸರಿಗೆ ಭಾಗ್ಯಗಳನ್ನು ಕೊಟ್ಟು, ಗಂಡಸರಿಗೆ ದೌರ್ಭಾಗ್ಯ ಕರುಣಿಸಿದ ಸರ್ಕಾರದ ನಡೆಯನ್ನು ಯಾರು ಮರೆತಿಲ್ಲ. ಯುವನಿಧಿ ಎಂಬ ಹೆಸರಲ್ಲಿ ಯುವಜನತೆಗೆ ಉದ್ಯೋಗ ಸೃಷ್ಟಿಸಿ ಅವರನ್ನು ಸ್ವಾಭಿಮಾನಿಗಳನ್ನಾಗಿ ಮಾಡುವ ಬದಲು ಅವರಿಗೆ ತಿಂಗಳಿಗೆ ಎರಡು ಸಾವಿರ ಹಾಗೂ ಮೂರು ಸಾವಿರ ಎಂದು ಸೋಮಾರಿಗಳನಾಗಿ ಮಾಡುತ್ತಿರುವ ಸರ್ಕಾರದ ಯೋಚನೆ ಎಷ್ಟರ ಮಟ್ಟಿಗೆ ಸರಿ. ಇನ್ನು KSRTC ನೌಕರರಿಗೆ ಸಂಬಳದ ಬಾಕಿ ಪಾವತಿ ಉಳಿಸಿಕೊಂಡಿದ್ದರೂ ಶಕ್ತಿ ಯೋಜನೆ ಹೆಸರಲ್ಲಿ ರಾಜ್ಯದ ಹೆಣ್ಣು ಮಕ್ಕಳಿಗೆ ಉಚಿತ ಬಸ್ ಪ್ರಯಾಣವನ್ನು ಘೋಷಿಸಿದ್ದು ವಿಪರ್ಯಾಸವೇ ಸರಿ.

ಇನ್ನು ಅನ್ನಭಾಗ್ಯ ಯೋಚನೆಗೆ ಬಂದರೆ ಮೈಸೂರಿನಲ್ಲೇ ಅನ್ನಭಾಗ್ಯದ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ತೀವ್ರ ಮುಜುಗರಕ್ಕೀಡಾಗಿತ್ತು. ಒಟ್ಟಿನಲ್ಲಿ ಸರ್ಕಾರದ ಗ್ಯಾರಂಟಿಗಳು ಕೆಲವು ವರ್ಗದವರಿಗೆ ಬಲ ತಂದರೆ, ಇನ್ನು ಕೆಲವು ವರ್ಗದವರಿಗೆ ದುರ್ಬಲವಾಗಿ ಕಾಣುತ್ತಿದೆ.

ಇನ್ನು ಕಾವೇರಿ ನೀರಿನ ಹಂಚಿಕೆಯ ವಿಚಾರದಲ್ಲಿ ಸರ್ಕಾರ ತೋರಿದ ಸ್ವಾರ್ಥ ಧೋರಣೆ ರಾಜ್ಯದ ಜನತೆಗೆ ತಿಳಿದಿದೆ. ಕಾವೇರಿಯನ್ನು ದಕ್ಷಿಣ ಭಾರತದ ಆಸ್ತಿ ಎಂದ ನಾಯಕರು ಮುಂದೆ ಕರ್ನಾಟಕವನ್ನು ಕೂಡ ದಕ್ಷಿಣ ಭಾರತದ ಆಸ್ತಿ ಎಂದು ಹೊರರಾಜ್ಯದವರನ್ನು ಕರೆಸಿದರು ಆಶ್ಚರ್ಯ ಪಡಬೇಕಿಲ್ಲ.

ಇನ್ನು ಈ ವರ್ಷದ ರಾಜ್ಯ ಬಜೆಟ್‌ನಲ್ಲಿ ಒಂದು ಸಮುದಾಯದ ಎಲ್ಲಾ ಸೌಕರ್ಯವನ್ನು ಕಿತ್ತು ಇನ್ನೊಂದು ಸಮುದಾಯಕ್ಕೆ ಕೊಟ್ಟು ಅವರನ್ನು ಓಲೈಸುತ್ತಿರುವುದು ಎದ್ದು ಕಾಣುತ್ತಿದೆ ಹಾಗೂ ಆ ಸಮುದಾಯದ ತಪ್ಪುಗಳನ್ನು ಕಡೆಗಣಿಸುತ್ತಿರುವುದು ಕೂಡ ಹಲವರ ಕೆಂಗಣ್ಣಿಗೆ ಗುರಿಯಾಗಿದೆ.

ಒಟ್ಟಿನಲ್ಲಿ ಕೆಲವು ಅರ್ಥವಿಲ್ಲದೆ ಯೋಚನೆಗಳಿಗೆ ಹಣ ವ್ಯಯಿಸಿ ದವಸ ಧಾನ್ಯಗಳ ಬೆಲೆ ಏರಿಕೆ ಮಾಡುವ ಬದಲು, ಅದೇ ಹಣವನ್ನು ಉಪಯೋಗಿಸಿ ಧಾನ್ಯಗಳ ಬೆಲೆ ಇಳಿಸುವುದು ಎಷ್ಟೋ ಮೇಲು ಎಂಬ ಭಾವನೆ ನಾಡಿನ ಜನರದು. ಒಟ್ಟಿನಲ್ಲಿ ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಹಾಗೂ ಕೆಲವು ಸಚಿವರ ಸ್ಥಾನಗಳಿಗೆ ಗ್ಯಾರಂಟಿ ಇಲ್ಲದಂತೆ ಆಗಿದೆ. ಈಗಲೂ ಎಷ್ಟೋ ವಿಷಯಗಳಲ್ಲಿ ರಾಜ್ಯ ನಾಯಕರು ಅತಂತ್ರ ಮನಸ್ಥಿತಿ ಹೊಂದಿರುವುದು ಯಾರಿಗೂ ಗೊತ್ತಿಲ್ಲದ ವಿಷಯವೇನಲ್ಲ.

–ರವಿ.ಎಂ (MSW), ಮೈಸೂರು

ಈ ಜೀವನ...



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640



ಓ ಮುದ್ದು ಅವ್ವಾ...! ನನ್ನ ಬದುಕಿಸವ್ವಾ...!!



ಭ್ರೂಣಕ್ಕೆ ತನ್ನ ತಾಯಿಯ ಗರ್ಭಕೋಶವೇ ಜಗತ್ತು ಇದ್ದಂತೆ. ಒಂಬತ್ತು ತಿಂಗಳು ಆ ಪುಟ್ಟ ಜಗತ್ತಿನಲ್ಲಿ ಸಂತೋಷದಿಂದ ಕಾಲ ಕಳೆಯುವಂತಹ ಭ್ರೂಣಕ್ಕೆ ಈಗ ಭಯದ ವಾತಾವರಣ ನಿರ್ಮಿತವಾಗಿದೆ. ಏಕೆಂದರೆ ಆ ಭ್ರೂಣವನ್ನು ಚಿವುಟುವಂತಹ ಕರಿಯುಗುರು(ಕೆಟ್ಟ ಮನಸ್ಸುಗಳು–ತಿಳಿವು ಹೀನರು) ಬೆನ್ನಟ್ಟಿ ಬರುತ್ತಿರುವುದರಿಂದ ತನಗೆ ಅದೇ ದೊಡ್ಡ ಚಿಂತೆಯಾಗಿ ಕಾಡುತ್ತಿದೆ ಎಂದು ಭ್ರೂಣ ತನ್ನ ತಾಯಿಗೆ ತನ್ನ ಪ್ರಾಣಕ್ಕೆ ಒದಗಿರುವ ಅಪಾಯವನ್ನು ತಿಳಿಸುವ ಕೆಲಸವನ್ನು ಮಾಡುತ್ತಿದೆ. ಇಲ್ಲಿ ಭ್ರೂಣಕ್ಕೆ ಬದುಕೆಂಬ ಆಸೆ ಇರುವುದನ್ನು, ಆದರೆ ಅದಕ್ಕೆ ತಕ್ಕ ವಾತಾವರಣ ಇಲ್ಲದಿರುವ ಸ್ಥಿತಿಯನ್ನು ತಿಳಿಸಲಾಗಿದೆ.

ತಾನೂ ಹೆಣ್ಣಾಗಿ ಮಗು ಹೆಣ್ಣು ಎಂದು ಆ ಮಗುವನ್ನು ಹೊಟ್ಟೆಯಲ್ಲಿ ಕರಗಿಸುವಷ್ಟು ಕಲ್ಲುಮನಸ್ಸು ಆ ತಾಯಂದಿರಿಗೆ ಹೇಗೆ ತಾನೇ ಬಂತು? ಈ ವಿಚಾರಗಳನ್ನು ಚಿಂತಿಸುವಾಗ ಹೆಣ್ಣು ಭ್ರೂಣದ ಬಗ್ಗೆಯೇ ಇರುವ ಕವನವೊಂದು ನೆನಪಾಯಿತು.

ಮಹಿಳಾ ಸಾಹಿತಿಯಾಗಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿರುವ ಮಾಲತಿ ಪಟ್ಟಣಶೆಟ್ಟಿ ಅವರು ಕವನ ಸಂಕಲನ, ಕಥಾ ಸಂಕಲನ, ಮಕ್ಕಳ ಕವಿತೆ, ಮಕ್ಕಳ ನಾಟಕ, ವ್ಯಕ್ತಿ ಚಿತ್ರ, ಸಂಪಾದಿತ ಕೃತಿ... ಹೀಗೆ ಹತ್ತು ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿ ಪ್ರಸಿದ್ಧರಾಗಿದ್ದಾರೆ.

ಅವರ ಕವನಗಳಲ್ಲಿ ತುಂಬಾ ಕಾಡುವಂತಹ ಅಂದಿಗೂ, ಇಂದಿಗೂ ಪ್ರಸ್ತುತವಾಗಬಲ್ಲ ಕವನ ನಾ ಬರಿ ಭ್ರೂಣವಲ್ಲ. ಭ್ರೂಣಾವಸ್ಥೆಯಲ್ಲಿರುವ ಮಗುವೊಂದು ತನ್ನ ತಾಯಿಯೊಂದಿಗೆ ಸಂವಾದ ನಡೆಸಿದಂತೆ ಚಿತ್ರಿತವಾಗಿರುವ ಕವನ ಇದಾಗಿದ್ದು, ಹೆಣ್ಣು ಮಗು ಎಂದು ನಿರ್ಲಕ್ಷಿಸುವಂತಹ, ಅಸಡ್ಡೆ ತೋರುವಂತಹ ಜನರಲ್ಲಿಯೂ ಮರುಕವನ್ನುಂಟು ಮಾಡುವ ರೀತಿಯಲ್ಲಿ ರಚಿತವಾಗಿರುವ ಕವನ ಇದಾಗಿದೆ. ಭ್ರೂಣ ಹತ್ಯೆ ಮಾಡಬಾರದೆಂಬ ಸೂಚನೆಯೊಂದಿಗೆ ಹೆಣ್ಣು ಮಗು ತನ್ನ ತಾಯಿಯ ಮೇಲೆ ಇಟ್ಟಿರುವ ಮಮಕಾರವನ್ನು, ಪ್ರೀತಿಯನ್ನು ಭಾವನಾತ್ಮಕವಾಗಿ ಕಟ್ಟಿಕೊಡುವಂತಹ ಸಂಗತಿಗಳನ್ನು ಈ ಕವನ ಒಳಗೊಂಡಿದೆ.

ಅವ್ವಾ ನಾ
ನಿನ್ನ ಮಗಳು
ದೇಹದ ಮುಗುಳು
ನಿನ್ನ ಕನಸಿನ ಅರಳವ್ವಾ
ನಾ ಬರಿ ಭ್ರೂಣವಲ್ಲ

ಕವನದ ಮೊದಲಲ್ಲೇ ಭ್ರೂಣಾವಸ್ಥೆಯಲ್ಲಿರುವ ಮಗು ತನ್ನ ತಾಯಿಯ ಬಗ್ಗೆ ತನಗಿರುವ ಪ್ರೀತಿಯನ್ನು ವ್ಯಕ್ತಪಡಿಸುತ್ತಿದೆ. ಅವ್ವಾ... ಎಂಬ ಒಂದು ಪದವೇ ಮನಮುಟ್ಟುವಂತಿದೆ (ಸಾಮಾನ್ಯವಾಗಿ ತಾಯಿಯನ್ನು ಅಮ್ಮ ಎಂದು ಕರೆಯುವುದು ವಾಡಿಕೆಯಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಆಧುನಿಕ ತಾಯಂದಿರು ಅಮ್ಮ ಎನ್ನಬೇಡ ಮಮ್ಮಿ ಎಂದು ಕರೆಯಬೇಕೆಂಬ ವ್ಯಾಮೋಹದ ಒತ್ತಡವನ್ನು ಮಕ್ಕಳ ಮೇಲೆ ಹಾಕುವುದು ಸರ್ವೆಸಾಮಾನ್ಯವಾಗಿದೆ) ಇಲ್ಲಿಯ ಭ್ರೂಣ ತನ್ನ ತಾಯಿಯನ್ನು ಅವ್ವಾ ಎಂದು ಕರೆಯುವ ಮೂಲಕ ತಮ್ಮಿಬ್ಬರ ಬಾಂಧ್ಯವದ ಅನ್ಯೂನ್ಯತೆಯನ್ನು ತಿಳಿಸುತ್ತಾ ನಾನು ನಿನ್ನ ಮಗಳು, ದೇಹದ ಮುಗುಳು ಅಂದರೆ ಮೊಗ್ಗು, ನಿನ್ನ ಕನಸಿನ ಅರಳವ್ವಾ ಎನ್ನುವ ಮೂಲಕ ತಾಯಿಯ ಕನಸನ್ನು ನನಸಾಗಿಸುವ ಕಾಯಕ ಮಾಡುವವಳು ತಾನು ಕೇವಲ ಮೊಗ್ಗಲ್ಲ ಹೂವಾಗಿ ಅರಳಿ ನಿನ್ನ ಕನಸ್ಸನ್ನು ನನಸು ಮಾಡಬಲ್ಲೆ ಎಂಬ ಭರವಸೆಯನ್ನು ನೀಡುವುದರೊಂದಿಗೆ ನಾ ಬರಿ ಭ್ರೂಣವಲ್ಲ ಎಂಬ ಮಾತಿನ ಮೂಲಕ ಪರೋಕ್ಷವಾಗಿ ತಾಯಿಯ ಪ್ರೀತಿಯ ಸಾಕಾರ ಮೂರ್ತಿ ತಾನೆಂಬ ಸೂಚನೆಯನ್ನು ಹೊಟ್ಟೆಯೊಳಗಿನ ಭ್ರೂಣ ನೀಡುತ್ತಿದೆ.

ಕವನವನ್ನು ಪ್ರಾಯೋಗಿಕ ನೆಲೆಯಲ್ಲಿ ಚಿಂತಿಸದೆ (ಪ್ರಾಕ್ಟಿಕಲ್ ಆಗಿ) ಇದೆಲ್ಲಾ ನಡೆಯುವಂತದ್ದಾ? ಹೇಗೆ ಸಾಧ್ಯ? ಎಂಬಿತ್ಯಾದಿ ಪ್ರಶ್ನೆಗಳನ್ನು ಹಾಕದೇ ಭಾವನಾತ್ಮಕ ನೆಲೆಯಿಂದ ಆ ಹೆಣ್ಣು ಭ್ರೂಣದ ಸ್ಥಾನದಲ್ಲಿ ನಿಂತು ಆಲೋಚಿಸಿ ನೋಡಿದರೆ ಕವನ ಆಪ್ತವಾಗುತ್ತದೆ.

ಏ ಅವ್ವಾ
ಔಷಧಿಯೆಲ್ಲ ವಿಷವಾಗಿ
ಗುಳಿಗೆಗಳೆಲ್ಲ ನಶೆಯಾಗಿ
ಪಾಶವಾಗಿದೆಯವ್ವ ನನ್ನುಸಿರಿಗೆ !
ನಾ ಬರಿ ಭ್ರೂಣವಲ್ಲ

ಹೊಟ್ಟೆಯೊಳಗಿನ ಭ್ರೂಣಕ್ಕೆ ತನ್ನ ಅಸ್ತಿತ್ವದ ಬಗ್ಗೆ ಅನುಮಾನಗಳು ಬರುತ್ತಿದೆ. ಅದನ್ನು ತನ್ನ ತಾಯಿಯೊಂದಿಗೆ ಹಂಚಿಕೊಳ್ಳುವ ಬಗೆಯನ್ನು ಇಲ್ಲಿ ಕಾಣಬಹುದು. ಅವ್ವಾ ನೀನು ತೆಗೆದುಕೊಳ್ಳುತ್ತಿರುವ ಔಷಧಿಗಳೆಲ್ಲ ವಿಷವಾಗಿ, ಗುಳಿಗೆಗಳೆಲ್ಲ ನಶೆಯಾಗಿ, ಪಾಶವಾಗಿದೆಯವ್ವ ನನ್ನುಸಿರಿಗೆ ಎನ್ನುವ ಮೂಲಕ ತಾಯಿಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅವಳು ಸೇವಿಸುತ್ತಿರುವ ಔಷಧಿಗಳು, ತೆಗೆದುಕೊಳ್ಳುತ್ತಿರುವ ಗುಳಿಗೆಗಳು ತನ್ನ ಜೀವಕ್ಕೆ ಸಂಚಕಾರವನ್ನು ತರುವಂತಿದೆ ಎಂದು ಸೂಚನೆಯನ್ನು ನೀಡುತ್ತಿದೆ. ಇಲ್ಲಿ ಆ ಭ್ರೂಣಕ್ಕೆ ಬದುಕಬೇಕೆಂಬ ಆಸೆ ಇರುವುದನ್ನು ಆದರೆ ಅದಕ್ಕೆ ಅವಕಾಶಗಳು ದಿನೇ ದಿನೇ ಕಡಿಮೆಯಾಗುತ್ತಾ ಬಂದಿರುವ ಸನ್ನಿವೇಶವನ್ನು, ತಾನು ಸುರಕ್ಷಿತ ಎಂದು ಭಾವಿಸಿದ್ದ ತಾಯಿಯ ಕಾರಣದಿಂದಲೇ ತನ್ನ ಉಸಿರಿಗೆ ಅಪಾಯ ಬಂದೊದಗಿರುವ ದುಸ್ಥಿತಿಯನ್ನು ನೆನೆದು ತನ್ನ ತಾಯಿಗೆ ಈ ಸಂಗತಿ ತಿಳಿದಿಲ್ಲವೆಂದೇ ಭಾವಿಸಿ ಅವಳಿಗೆ ಸೂಚನೆ ನೀಡುವ ಮುಖಾಂತರ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಕೆಲಸವನ್ನು ಭ್ರೂಣ ಮಾಡುತ್ತಿದೆ.

ಏ ಅವ್ವಾ
ನನ್ನ ಜಗತ್ತೆ ಪುಟ್ಟದು
ಕರಿಯುಗುರು ಬೆನ್ನಟ್ಟಿಯಲ್ಲೆ?
ಚಿಂತಿಸಿ ನಾ ಕೆಟ್ಟನವ್ವ
ನಾ ಬರಿ ಭ್ರೂಣವಲ್ಲ

ಭ್ರೂಣಕ್ಕೆ ತನ್ನ ತಾಯಿಯ ಗರ್ಭಕೋಶವೇ ಜಗತ್ತು ಇದ್ದಂತೆ. ಒಂಬತ್ತು ತಿಂಗಳು ಆ ಪುಟ್ಟ ಜಗತ್ತಿನಲ್ಲಿ ಸಂತೋಷದಿಂದ ಕಾಲ ಕಳೆಯುವಂತಹ ಭ್ರೂಣಕ್ಕೆ ಈಗ ಭಯದ ವಾತಾವರಣ ನಿರ್ಮಿತವಾಗಿದೆ. ಏಕೆಂದರೆ ಆ ಭ್ರೂಣವನ್ನು ಚಿವುಟುವಂತಹ ಕರಿಯುಗುರು(ಕೆಟ್ಟ ಮನಸ್ಸುಗಳು–ತಿಳಿವು ಹೀನರು) ಬೆನ್ನಟ್ಟಿ ಬರುತ್ತಿರುವುದರಿಂದ ತನಗೆ ಅದೇ ದೊಡ್ಡ ಚಿಂತೆಯಾಗಿ ಕಾಡುತ್ತಿದೆ ಎಂದು ಭ್ರೂಣ ತನ್ನ ತಾಯಿಗೆ ತನ್ನ ಪ್ರಾಣಕ್ಕೆ ಒದಗಿರುವ ಅಪಾಯವನ್ನು ತಿಳಿಸುವ ಕೆಲಸವನ್ನು ಮಾಡುತ್ತಿದೆ. ಇಲ್ಲಿ ಭ್ರೂಣಕ್ಕೆ ಬದುಕೆಂಬ ಆಸೆ ಇರುವುದನ್ನು, ಆದರೆ ಅದಕ್ಕೆ ತಕ್ಕ ವಾತಾವರಣ ಇಲ್ಲದಿರುವ ಸ್ಥಿತಿಯನ್ನು ತಿಳಿಸಲಾಗಿದೆ.

ಕೇಳವ್ವ
ಕಂಡಿಲ್ಲ ನಾನಿನ್ನೂ
ಬದುಕಿನಾಗಸದ ನೀಲ
ಪಚ್ಚೆಯಂಥ ನೆಲ
ಗಾಳಿಯ ಮೃದು ಸ್ಪರ್ಶ
ನಾ ಬರಿ ಭ್ರೂಣವಲ್ಲ

ಬದುಕೆಂಬ ಅಭಿಲಾಷೆಯ ಹಂಬಲ, ಪ್ರಪಂಚವನ್ನು ನೋಡಬೇಕೆಂಬ ಕಾತುರತೆ ಕುತೂಹಲದ ಆಸೆಗಳನ್ನು ಹೊಟ್ಟೆಯೊಳಗೆ ಇರುವ ಭ್ರೂಣ ತಿಳಿಸುತ್ತಿದೆ. ತನ್ನ ತಾಯಿಗೆ ನಾನಿನ್ನೂ ಕಂಡಿಲ್ಲ ಬದುಕಿನಾಗಸದ ನೀಲ, ಪಚ್ಚೆಯಂಥ ನೆಲ ಎನ್ನುವ ಮೂಲಕ ಬದುಕು ಆಕಾಶದಷ್ಟು ವಿಶಾಲವಾದುದು, ಆ ಬದುಕನ್ನು ತಾನು ಇನ್ನೂ ನೋಡಿಲ್ಲ, ಹೊರಗೆ ಬೀಸುವ ಗಾಳಿಯ ಮೃದು ಸ್ಪರ್ಶವನ್ನು ನಾನಿನ್ನೂ ಅನುಭವಿಸಿಲ್ಲ ಎನ್ನುವ ಭ್ರೂಣ ತನಗೆ ಹೊರಪ್ರಪಂಚಕ್ಕೆ ಬರಬೇಕೆಂಬ ಉತ್ಕಟದ ಬಯಕೆಯನ್ನು ತಿಳಿಸುತ್ತಿದೆ. ಪ್ರಪಂಚಕ್ಕೆ ಕಣ್ಣು ಬಿಟ್ಟು ಬರುವ ಮೊದಲೇ ಚಿವುಟುವ ಪ್ರಯತ್ನ ತನಗೆ ಭಯವನ್ನುಂಟು ಮಾಡುವುದನ್ನು ಪರಿಪರಿಯಾಗಿ ತನ್ನ ತಾಯಿಯನ್ನು ಕೇಳಿಕೊಳ್ಳುವ ಮೂಲಕ ತನ್ನ ಆಗಮನಕ್ಕೆ ಅವಕಾಶ ನೀಡಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಿದೆ.

ಏಕವ್ವಾ
ಯಾರದ್ಯಾಕವ್ವಾ ಒತ್ತಾಸೆ
ಮೇಲೆ ನಿನ್ನ ನಿರಾಸೆ,
ಗಾಬರಿಗೊಂಡಿದ್ದೇನವ್ವಾ:
ನಾ ಬರಿ ಭ್ರೂಣವಲ್ಲ

ಇಲ್ಲಿ ಹೊಟ್ಟೆಯೊಳಗಿರುವ ಭ್ರೂಣಕ್ಕೆ ತನ್ನ ತಾಯಿಯ ಬಗ್ಗೆ ಗಾಬರಿ ಉಂಟಾಗಿದೆ. ಇಷ್ಟು ದಿನ ಹೊರಗಿನವರು ಉದಾಸೀನದಿಂದ ಈ ಮಗು ಬೇಡ ಎಂಬ ಒತ್ತಾಸೆಗಳ ಮಾತುಗಳನ್ನು ಕೇಳಿಸಿಕೊಂಡಿದ್ದ ಹೆಣ್ಣು ಭ್ರೂಣಕ್ಕೆ ಈಗ ತನ್ನ ತಾಯಿಯೂ ಕೂಡ ನಿರಾಸೆಯನ್ನು ಅನುಭವಿಸುತ್ತಾ ಇರುವುದನ್ನು ನೋಡಿ ಗಾಬರಿಯಾಗಿದೆ. ಅದನ್ನೇ ತನ್ನ ತಾಯಿಗೆ ಹೇಳುತ್ತಿದೆ.

ನಮ್ಮನ್ನು ರಕ್ಷಣೆ ಮಾಡಬೇಕಾದರೆ ನಿರ್ಲಕ್ಷ್ಯ ತೋರಿದರೆ ಏನು ಮಾಡುವುದು ಎಂಬ ಯಕ್ಷಪ್ರಶ್ನೆ ಹೊಟ್ಟೆಯೊಳಗಿರುವ ಹೆಣ್ಣು ಭ್ರೂಣಕ್ಕೆ ಉಂಟಾಗಿದೆ. ಬೇರೆಯವರ ಮಾತುಗಳನ್ನು ಕೇಳಿ ನಿರಾಶೆಗೊಂಡಿದ್ದ ಭ್ರೂಣಕ್ಕೆ ಈಗ ತನ್ನ ತಾಯಿಯೂ ನಿರಾಶೆಯಿಂದ ಇರುವುದನ್ನು ನೋಡಿ ಗಾಬರಿಯಾಗಿದೆ. ಯಾರು ಏನೇ ಅಂದರೂ ತನ್ನೊಂದಿಗೆ ತಾಯಿ ಇರುವಳೆಂಬ ನಂಬಿಕೆ ಇಟ್ಟುಕೊಂಡಿದ್ದ ಭ್ರೂಣಕ್ಕೆ ಅವಳ ನಿರಾಶೆ ಗಾಬರಿ ಉಂಟು ಮಾಡಿರುವುದರಿಂದ ಅದನ್ನು ಪ್ರಶ್ನಿಸುತ್ತಿದೆ.

ನನ್ನವ್ವ, ಗೊತ್ತಿಲ್ಲವೆ ಮಗಳ ರಕ್ತ
ರಕ್ತವಲ್ಲ, ಪ್ರೀತಿ ರಸವೆ
ನಿನ್ನವ್ವನಾಗಿಯೇ ಬರುವೆನೆ
ನಾ ಬರಿ ಭ್ರೂಣವಲ್ಲ

ಇಲ್ಲಿ ಹೆಣ್ಣು ಭ್ರೂಣ ತನ್ನ ತಾಯಿಯ ನಿರಾಶೆಯನ್ನು ಕಡಿಮೆ ಮಾಡುವುದರ ಜೊತೆಗೆ ತನ್ನ ಬರುವಿಕೆಗೆ ಅವಕಾಶ ಮಾಡಿಕೊಡಬೇಕೆಂಬ ಪ್ರೀತಿಯ ನುಡಿಗಳನ್ನಾಡುತ್ತಿದೆ.

ಹೆರಿಗೆಯಾಗುವಾಗ ಕೆಟ್ಟರಕ್ತವೆಲ್ಲಾ ಹೋಗುವುದು ಸರ್ವೆಸಾಮಾನ್ಯ. ಇಲ್ಲಿ ಭ್ರೂಣ ಮಗಳ ರಕ್ತ ರಕ್ತವಲ್ಲ ಅದು ಪ್ರೀತಿಯ ರಸ ಎಂದು ತಿಳಿ, ನಾನು ನಿನ್ನ ಅವ್ವನಾಗಿಯೇ ಬರುವೆನು ಎನ್ನುವ ಮೂಲಕ ಮಗಳಾಗಿ ಬರುವ ತಾನು ಮುಂದೆ ತಾಯಿಯಾಗಿ ನೋಡಿಕೊಳ್ಳುವೆ ಎನ್ನುವ ಮೂಲಕ ತನ್ನ ಬರುವಿಕೆಗೆ ಅವಕಾಶ ನೀಡು ಎಂಬ ಮನವಿಯನ್ನು ಮಾಡುತ್ತಿದೆ. ತಾಯಿಯ ಪ್ರೀತಿಯನ್ನು ಯಾರು ಕೂಡ ಕಾಪಿಟ್ಟು ಕೊಡಲು ಸಾಧ್ಯವಿಲ್ಲ, ನಾನು ತಾಯಿಯಂತೆ ನೋಡಿಕೊಂಡೆ ಎನ್ನಬಹುದೇ ವಿನಃ ತಾಯಿಯಾಗಲಾಗದು. ಆದರೆ ಇಲ್ಲಿಯ ಭ್ರೂಣ ತಾನು ನಿನ್ನವ್ವನಾಗಿಯೇ ಬರುವೆನು ಎನ್ನುವ ಮೂಲಕ ಅಮ್ಮನ ಪ್ರೀತಿಯನ್ನು ತಾನು ತುಂಬುವೆ ಎನ್ನುವ ಭರವಸೆಯ ನುಡಿಗಳನ್ನಾಡುತ್ತಿದೆ. ಈ ತರಹದ ಮಾತುಗಳಿಂದ ಅಮ್ಮನಿಗೆ ನನ್ನ ಮೇಲೆ ಭರವಸೆ ಮೂಡಬಹುದು, ಭೂಮಿಗೆ ಬರಲು ಅವಕಾಶ ನೀಡಬಹುದೆಂಬ ತುಡಿತ ಆ ಭ್ರೂಣಕ್ಕಿದೆ.

ನನ್ನ ಹಡೆದವ್ವ
ನಿನ್ನ ಮೈ ಗಂಧದಿಂದ
ಕಿತ್ತುಕೊಂಡರೆ ನಾ ಸತ್ತೆನವ್ವಾ
ಚೆಲ್ಲಬೇಕೆ ಉಡಿಯ ಮುತ್ತು
ನಾ ಬರಿ ಭ್ರೂಣವಲ್ಲ

ನಿನ್ನ ಮೈ ಗಂಧದಿಂದ ನನ್ನನ್ನು ಕಿತ್ತುಕೊಂಡರೆ ನಾನು ಖಂಡಿತವಾಗಿ ಉಳಿಯಲಾರೆನು, ಮಡಿಲ ಮುತ್ತನ್ನು ಚೆಲ್ಲಬೇಡ ಓ ಮುದ್ದು ಅವ್ವ ಎನ್ನುವ ಮೂಲಕ ಹೇಗಾದರೂ ಸರಿ ನನ್ನನ್ನು ಬದುಕಿಸವ್ವ ಎಂದು ಬೇಡಿಕೊಳ್ಳುವ ಕೆಲಸವನ್ನು ಭ್ರೂಣ ಮಾಡುತ್ತಿದೆ.

ಜೀವನದಲ್ಲಿ ಹುಟ್ಟಿ ಬಂದ ಬಳಿಕ ಜೀವನ ಸಾಗಿಸಲು ಹರಪ್ರಯತ್ನ ಮಾಡುವುದು ಸಾಮಾನ್ಯ. ಆದರೆ ಇಲ್ಲಿ ಕಂಡುಬರುವ ಭ್ರೂಣ ಬದುಕಿ ಬರಲು ಅವಕಾಶ ನೀಡಬೇಕೆಂದು ಪರಿತಪಿಸುವ ರೀತಿಯನ್ನು ನೋಡಿದರೆ ವ್ಯವಸ್ಥೆಯ ಘೋರ ಚಿತ್ರಣ ಎದುರಾಗುತ್ತದೆ.

ನನ್ನ ಮುದ್ದಿನವ್ವ
ವರವ ಕೊಡು ತಾಯಿ
ನನ್ನ ಉಸಿರಿಗೆ
ನಿನ್ನ ಬಾಳ ಹಸಿರಿಗೆ
ಹೂ ತರುವೆನೇ ನಿನ್ನ ಹೆಸರಿಗೆ
ನಾ ಬರಿ ಭ್ರೂಣವಲ್ಲ

ಇಡೀ ಕವನದುದ್ದಕ್ಕೂ ತನ್ನ ಬದುಕಿಗೆ, ಅಸ್ತಿತ್ವಕ್ಕೊಂದು ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಇಲ್ಲಿ ಭ್ರೂಣತನ್ನ ಉಸಿರಿಗೆ ವರವನ್ನು ನೀಡಿದರೆ ನಿನ್ನ ಬಾಳಿಗೆ ಹಸಿರನ್ನು ತರುವುದಾಗಿ, ನಿನ್ನ ಹೆಸರಿಗೆ ಹೂ ತರುವುದಾಗಿ ಹೇಳುತ್ತಿದೆ. ಹೂವಿನ ಆಯಸ್ಸು ಒಂದೇ ದಿನವಾದರೂ ಅದು ಇರುವಷ್ಟು ಹೊತ್ತು ಪರಿಮಳವನ್ನು ನೀಡಿ ಸುಗಂಧವನ್ನು ನೀಡುತ್ತದೆ, ಸಂತೋಷವನ್ನು ನೀಡುತ್ತದೆ. ಅದೇ ರೀತಿ ತನ್ನನ್ನು ಬದುಕಿಸಿದರೆ ನಿನ್ನ ಹೆಸರಿಗೆ ಹೂ ತರುವುದಾಗಿ ಹೇಳುವ ಮೂಲಕ ಏನೇ ಆದರೂ ನಾನು ಬದುಕಲು ಅವಕಾಶವನ್ನು ಮಾಡಿಕೊಡು ಎಂಬ ಹಂಬಲವನ್ನು ಭ್ರೂಣ ಹೇಳುತ್ತಿದೆ.

ಇಡೀ ಕವನದಲ್ಲಿ ತಾನು ಪ್ರಪಂಚವನ್ನು ನೋಡಬೇಕೆಂದು ಹಂಬಲಿಸಿ, ಅದಕ್ಕಾಗಿ ತನ್ನ ತಾಯಿಯನ್ನು ಒಪ್ಪಿಸಲು ಪರಿಪರಿಯಾಗಿ ಕೇಳುವ ಭ್ರೂಣದ ಚಿತ್ರಣವನ್ನು ಗಮನಿಸಬಹುದು. ಕವನವು ಜನ್ಮತಳೆದು ದಶಕಗಳೇ ಆಗಿದ್ದರೂ ಪ್ರಸ್ತುತ ಸಮಾಜದ ಪರಿಸ್ಥಿತಿ, ಜನರ ಮನಸ್ಥಿತಿ ಬದಲಾಗದೇ ಹೆಣ್ಣು ಮಗು ಎಂದರೆ ಮೂಗುಮುರಿಯುವ ಚಿತ್ರಣವನ್ನು ಗಮನಿಸಿದರೆ ನಿಜಕ್ಕೂ ಬೇಸರ ಉಂಟಾಗುತ್ತದೆ.

ಪಠ್ಯೇತರ ಚಟುವಟಿಕೆಯಲ್ಲೂ ತೊಡಗಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಗೀತ ರಚನೆಕಾರ ಡಾ.ವಿ.ನಾಗೇಂದ್ರ ಪ್ರಸಾದ್ ಕಿವಿಮಾತು

ಮೈಸೂರು,ಡಿ.6(ಪಿಎಂ)– ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳುವ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲೂ ಪಾಲ್ಗೊಂಡು ತಮ್ಮ ಪ್ರತಿಭೆ ಅನಾವರಣ ಮಾಡಬೇಕು ಎಂದು ಕನ್ನಡ ಚಲನಚಿತ್ರ ಗೀತ ರಚನೆಕಾರ ಡಾ.ವಿ.ನಾಗೇಂದ್ರ ಪ್ರಸಾದ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೂ ಇತ್ತೀಚೆಗಿನ ದಿನಗಳಲ್ಲಿ ಉತ್ತೇಜನ ದೊರೆಯುತ್ತಿದೆ. ಶಾಲೆಗಳು ಮಾತ್ರವಲ್ಲದೆ, ಪೋಷಕರಿಂದಲೂ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಿಸಿಕೊಳ್ಳಲು ಪ್ರೋತ್ಸಾಹ ದೊರೆಯುತ್ತಿದ್ದು, ಇದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು. ಶೈಕ್ಷಣಿಕ ಸಾಧನೆ ಮೂಲಕ ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಿರಬಹುದು. ಪಠ್ಯೇತರ ಚಟುವಟಿಕೆಗಳಲ್ಲಿ ಪ್ರತಿಭೆ ಅನಾವರಣಗೊಳಿಸುವ ಮೂಲಕವೂ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ. ಅದಕ್ಕೆ ನನ್ನಂತಹ ಎಷ್ಟೋ ಮಂದಿ ನಿರ್ದೇಶನ ಆಗಬಹುದು ಎಂದರು. ನನ್ನ ಶಾಲಾ–ಕಾಲೇಜು ದಿನಗಳಲ್ಲಿ ತರಗತಿಯಲ್ಲಿ ಕವಿತೆಗಳನ್ನು ಬರೆಯುತ್ತಾ ಕುಳಿತುಕೊಂಡಿರುತ್ತಿದೆ. ಇದನ್ನು ಗಮನಿಸಿದ ನನ್ನ ಶಿಕ್ಷಕರೊಬ್ಬರು ಪಾಠ ಮಾಡುವ ಸಮಯದಲ್ಲಿ ಬರೆಯದಂತೆ ಹಾಗೂ ಬಿಡುವಿನ ವೇಳೆಯಲ್ಲಿ ಬರೆಯುವಂತೆ ಸಲಹೆ ನೀಡಿದರು. ಅಲ್ಲದೆ, ಮತ್ತೊಬ್ಬ ಶಿಕ್ಷಕರು ನಾನು ಬರೆದ ಕವಿತೆಗಳನ್ನು ಪತ್ರಿಕೆಗಳಿಗೆ ಕಳುಹಿಸಲು ಉತ್ತೇಜನ ನೀಡಿದರು. ಹೀಗೆ ನಾನು ಸಾಹಿತ್ಯ ವಲಯದಲ್ಲಿ ಬೆಳೆದು ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು ಎಂದು ತಿಳಿಸಿದರು. ಬಳಿಕ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮೈಸೂರು ದಕ್ಷಿಣ ವಲಯದ ಬಿಇಓ ಸಿ.ಎನ್.ರಾಜು, ರೋಟರಿ ಪಶ್ಚಿಮದ ಅಧ್ಯಕ್ಷ ಡಾ.ಬಿ.ಚಂದ್ರ, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ಶಾಲೆಯ ಪ್ರಾಂಶುಪಾಲೆ ಕೆ.ಎಸ್.ಪೂರ್ಣಿಮಾ ಮತ್ತಿತರರು ಹಾಜರಿದ್ದರು.



ಬ್ರ್ಯಾಂಡ್ ಬೆಂಗಳೂರು ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗೆ ಇಲ್ಲ

ಬೆಳಗಾವಿ: ರಾಜ್ಯದಲ್ಲಿ ನಾಲ್ಕು ವರ್ಷಗಳ ಕಾಲ ತಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಬೆಂಗಳೂರಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡದ ಬಿಜೆಪಿಗೆ ಬ್ರ್ಯಾಂಡ್ ಬೆಂಗಳೂರು ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಬುಧವಾರ ಪ್ರತಿಪಕ್ಷವನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿಎಂ, ಆರು ತಿಂಗಳ ಹಿಂದೆಯಷ್ಟೇ ನಾವು ಅಧಿಕಾರಕ್ಕೆ ಬಂದಿದ್ದೇವೆ. ಅದಕ್ಕೂ ಮುನ್ನ ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿತ್ತು. ಬ್ರಾಂಡ್ ಬೆಂಗಳೂರು ಮಾಡಿದ್ದೀರಾ? ನಾಲ್ಕು ವರ್ಷದಲ್ಲಿ ಏನು ಮಾಡಿದ್ದೀರಿ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು. ಬಿಜೆಪಿ ಕಾಲದಲ್ಲಿ ಗುಂಡಿ ಮುಚ್ಚುವುದಕ್ಕೆ ಹೈಕೋರ್ಟ್ ಛೀಮಾರಿ ಹಾಕಿತ್ತು. ಬಿಜೆಪಿ ಅವರು ಬೆಂಗಳೂರಿಗೆ ಏನು ಮಾಡಿದ್ದಾರೆ? ಗುಂಡಿ ಮುಚ್ಚಲಿಕ್ಕೆ ಆಗಿಲ್ಲ ಅವರಿಗೆ ಎಂದು ಉಗಿದಿತ್ತು ಹೀಗಾಗಿ ಬ್ರ್ಯಾಂಡ್ ಬೆಂಗಳೂರು ಬಗ್ಗೆ ಮಾತಾಡುವ ನೈತಿಕತೆ ಬಿಜೆಪಿ ಅವರಿಗಿಲ್ಲ ಎಂದು ಸಿಎಂ ಕಿಡಿಕಾರಿದರು. ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರದ 'ಬ್ರ್ಯಾಂಡ್ ಬೆಂಗಳೂರು' ಎಂಬ ಉಪಕ್ರಮ ಜಾರಿಗೆ ತರುತ್ತಿದೆ ಎಂದರು. ತೆಲಂಗಾಣದಲ್ಲಿ (ಕಾಂಗ್ರೆಸ್‌ನ ಚುನಾವಣಾ ಸಂಬಂಧಿತ ಕೆಲಸಕ್ಕಾಗಿ) ಎಲ್ಲಾ ಸಚಿವರು ಬೀಡು ಬಿಟ್ಟಿದ್ದರಿಂದ ಆಡಳಿತಕ್ಕೆ ಹೊಡೆತ ಬಿದ್ದಿದೆ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಅಲ್ಲಿಗೆ ಹೋಗಿದ್ದು ಎಲ್ಲರೂ ಅಲ್ಲ. ಕೆಲವರು ಮಾತ್ರ ಎಂದು ಸ್ಪಷ್ಟಪಡಿಸಿದರು. ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಮುನಿಯಪ್ಪ ಮತ್ತು ಇಂಧನ ಸಚಿವ ಕೆ ಜೆ ಜಾರ್ಜ್ ಅವರು ತೆಲಂಗಾಣದಿಂದ ರಾಜ್ಯಕ್ಕೆ ಮರಳಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಮಾತ್ರ ಇನ್ನೂ ತೆಲಂಗಾಣದಲ್ಲಿದ್ದಾರೆ. ಅಲ್ಲಿ ಕಾಂಗ್ರೆಸ್ ಗೆದ್ದಿದೆ ಎಂದು ಸಿಎಂ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ
118 ಪ್ರಕರಣ ದಾಖಲಿಸಿ 12,800 ರೂ. ದಂಡ ವಸೂಲಿ



ಮೈಸೂರು, ಡಿ.6(ಆರ್‌ಕೆ)–ಆರೋಗ್ಯ, ಶಿಕ್ಷಣ, ಪೊಲೀಸ್ ಇಲಾಖೆ ಹಾಗೂ ನಗರಪಾಲಿಕೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿದ್ದು, ನಿಷೇಧಿತ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುವವರ ಹಾಗೂ ಸೂಚನಾ ಫಲಕ ಅಳವಡಿಸದೇ ಕಾಯ್ದೆ ಉಲ್ಲಂಘನೆ ಮಾಡಿದ ಅಂಗಡಿ ಮಾಲೀಕರ ವಿರುದ್ಧ ಇಂದು ಮೈಸೂರಲ್ಲಿ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಕೆ.ಆರ್.ಠಾಣಾ ವ್ಯಾಪ್ತಿಯ ಅಗ್ರಹಾರ ಸರ್ಕಲ್ ಮಹಾತ್ಮಗಾಂಧಿ ರಸ್ತೆ, ರಾಮಾನುಜ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ದಾಳಿ ನಡೆಸಿದ ಅಧಿಕಾರಿಗಳು, ಸಾರ್ವಜನಿಕ ಸ್ಥಳ, ಶಾಲಾ–ಕಾಲೇಜು, ಆಸ್ಪತ್ರೆಗಳ ಬಳಿ, ವೃದ್ಧರು, ಮಕ್ಕಳು, ಗರ್ಭಿಣಿ ಸ್ತ್ರೀಯರಿರುವೆಡೆ ಧೂಮಪಾನ ಮಾಡುವುದನ್ನು ನಿಷೇಧಿಸಿರುವೆಡೆ ಧೂಮಪಾನ ಮಾಡುತ್ತಿದ್ದವರಿಗೆ ತಲಾ 200 ರೂ. ದಂಡ ವಿಧಿಸಿದರು.

ಅದೇ ರೀತಿ ಅಂಗಡಿಗಳ ಮುಂದೆ 'ಧೂಮಪಾನ ನಿಷೇಧಿಸಿದೆ', 'ಧೂಮಪಾನ ಆರೋಗ್ಯಕ್ಕೆ ಹಾನಿಕಾರಕ' ಎಂಬಿತ್ಯಾದಿ ಸೂಚನಾ ಫಲಕ ಅಳವಡಿಸದೇ ಬೀಡಿ, ಸಿಗರೇಟ್ ಮಾರಾಟ ಮಾಡುತ್ತಿದ್ದ ಮಾಲೀಕರ ವಿರುದ್ಧವೂ ಎನ್‌ಟಿಸಿಪಿ ಕಾಯ್ದೆಯಡಿ ಪ್ರಕರಣ ದಾಖಲಿಸಿ ದಂಡ ವಸೂಲು ಮಾಡಿದ ಅಧಿಕಾರಿಗಳು, ಎಚ್ಚರಿಕೆ ನೀಡಿದ್ದಾರೆ.

ಒಟ್ಟು 118 ಪ್ರಕರಣ ದಾಖಲಿಸಿರುವ ಅಧಿಕಾರಿಗಳು, 12,800 ರೂ. ದಂಡ ವಸೂಲಿ ಮಾಡಲಾಯಿತು. ಸಾರ್ವಜನಿಕರು ನಿಷೇಧಿತ ಸ್ಥಳಗಳಲ್ಲಿ ಧೂಮಪಾನ ಮಾಡಬಾರದು ಹಾಗೂ ಆರೋಗ್ಯ ಸುರಕ್ಷತೆಗೆ ಸಹಕರಿಸಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಂಬಾಕು ನಿಯಂತ್ರಣ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ.



ಮೈಸೂರಿನ ವಿವಿ ಪುರಂ ಪೊಲೀಸ್ ಠಾಣೆಯ ನೂತನ ಇನ್ಸ್‌ಪೆಕ್ಟರ್ ವಿವೇಕ್ ಅವರನ್ನು ಜೆಡಿಎಸ್ ಮುಖಂಡರಾದ ಸೋಮು, ನಗರ ಪಾಲಿಕೆ ಮಾಜಿ ಸದಸ್ಯ ಶ್ರೀರಾಮ್, ಮುಖಂಡರಾದ ಅರುಣ್ ಕುಮಾರ್, ಡಾ. ಲೋಕೇಶ್, ಒಂಟಿಕೊಪ್ಪಲ್ ಗುರುರಾಜ್ ಆತ್ಮೀಯವಾಗಿ ಅಭಿನಂದಿಸಿದರು.

5ನೇ ದಿನವೂ ಮುಂದುವರೆದ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಮೈಸೂರು, ಡಿ.6(ಜಿಎ)–ಅತಿಥಿ ಉಪನ್ಯಾಸಕರ ಸೇವೆ ಕಾಯಂ ಮಾಡುವಂತೆ ಒತ್ತಾಯಿಸಿ ವಿವಿಧ ಕಾಲೇಜುಗಳ ಅತಿಥಿ ಉಪನ್ಯಾಸಕರು ಐದನೇ ದಿನವೂ ಪ್ರತಿಭಟನೆ ಮುಂದುವರೆಸಿದರು.

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನೇತೃತ್ವದಲ್ಲಿ ನಗರದ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಎದುರು ಪ್ರತಿಭಟನೆ ನಡೆಸಿದ ಅತಿಥಿ ಉಪನ್ಯಾಸಕರು, ತಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಸೆಳೆಯಲು ಬೆಳಗಾವಿ ಚಲೋಗೆ ಕರೆ ನೀಡಿದರು. ಇಂದು ರಾತ್ರಿ 8.30ಕ್ಕೆ ರೈಲಿನ ಮೂಲಕ ಬೆಳಗಾವಿಯ ಸುವರ್ಣ ಸೌಧಕ್ಕೆ ತೆರಳಿ 200ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ನಾಳೆ ಬೆಳಗ್ಗೆ ಪ್ರತಿಭಟನೆ ನಡೆಸಿ, ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲು ನಿರ್ಧರಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಜಿ.ವಿ.ರಮೇಶ್, ಕಾರ್ಯದರ್ಶಿ ಕೆಂಪನಂಜಪ್ಪ, ಡಾ.ವೆಂಕಟೇಶ್, ಎಂ.ವಿ.ವಿನಾಯಕ, ನಾಗಾರ್ಜುನ, ಕೆಂಪನಂಜಪ್ಪ ಹಲವರು ಭಾಗವಹಿಸಿದ್ದರು.



ಮೈಸೂರಿನ ಮಾನಸಗಂಗೋತ್ರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ವಿಶೇಷ ಚೇತನರ ದಿನ ಆಚರಿಸಲಾಯಿತು. ಈ ವೇಳೆ ರಾಜ್ಯ ಪ್ರಶಸ್ತಿ ವಿಜೇತ ಶಾಲೆಯ ವಿಶೇಷ ಸಂಪನ್ಮೂಲ ಶಿಕ್ಷಕ ಶಿವರಾಂ ಅವರನ್ನು ಸನ್ಮಾನಿಸಲಾಯಿತು. ಬಿಇಓ ಸಿ.ಎನ್.ರಾಜು, ಬಿಆರ್‌ಸಿ ಶ್ರೀಕಂಠಸ್ವಾಮಿ, ಬಿಐಆರ್‌ಟಿ ಶ್ರೀಮತಿ ಮಮತಾ, ಬಿಆರ್‌ಟಿ ಮೀನಾಕ್ಷಿ, ಮುಖ್ಯ ಶಿಕ್ಷಕಿ ಪದ್ಮ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಮೇಣದಬತ್ತಿ ಬೆಳಗಿಸಿ ದಸರಾ ಅಂಬಾರಿ ಆನೆ ಅರ್ಜುನನಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮಾಜಿ ಉಪ ಮೇಯರ್ ಶ್ರೀಮತಿ ಮಹದೇವಮ್ಮ, ಮಾಜಿ ಕಾರ್ಪೋರೇಟರ್ ಕೆ.ಜೆ.ರಮೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯೆ ಜ್ಯೋತಿ ರೇಚಣ್ಣ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಅಧ್ಯಕ್ಷ ಪುನೀತ್ ರಾಯಣ್ಣ, ಶ್ರೀಮತಿ ಪವಿತ್ರಾ, ಸಂಜು, ಮಹದೇವ್, ಮಂಜು, ಸಾಗರ್ ಇನ್ನಿತರರು ಉಪಸ್ಥಿತರಿದ್ದರು.

ಬಾಲಕಾರ್ಮಿಕತೆ ನಿರ್ಮೂಲನೆಗೆ ಜನರ ಸಹಕಾರ ಅವಶ್ಯ

- ಯಾವುದೇ ಕೆಲಸದಲ್ಲಿ ಬಾಲಕಾರ್ಮಿಕರ ನಿಯೋಜಿಸುವುದು ಅಪರಾಧ
- ಹೋಬಳಿ ಮಟ್ಟದಲ್ಲೂ ಹಠಾತ್ ದಾಳಿ ನಡೆಸಿ ಕ್ರಮ ಕೈಗೊಳ್ಳಲು ನಿರ್ಧಾರ

ಮೈಸೂರು, ಡಿ.6–ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವುದು, ವಿದ್ಯಾಭ್ಯಾಸ ಪಡೆಯುವ ಅವರ ಸಾಮರ್ಥ್ಯಕ್ಕೆ ಅಡ್ಡಿಪಡಿಸುವುದು. ಮಾನಸಿಕ, ದೈಹಿಕ, ಸಾಮಾಜಿಕವಾಗಿ ಮತ್ತು ನೈತಿಕವಾಗಿ ಹಾನಿಕಾರಕವಾದ ಯಾವುದೇ ರೀತಿಯ ಕೆಲಸದ ಮೂಲಕ ಮಕ್ಕಳನ್ನು ಶೋಷಣೆ ಮಾಡುವುದು ಕಾನೂನು ರೀತಿ ಅಪರಾಧ.

ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016ರನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. 14ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ಅಲ್ಲದೆ ನಿಷೇಧಿಸಿದೆ.

ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಇವರುಗಳ ನಿರ್ದೇಶನದಂತೆ ನಗರ ಪ್ರದೇಶಗಳಲ್ಲಿ, ತಾಲೂಕು ಮಟ್ಟದಲ್ಲಿ ಹಠಾತ್ ದಾಳಿಗಳನ್ನು ನಡೆಸಲಾಗುತ್ತಿದ್ದು, ಹಠಾತ್ ದಾಳಿ ನಡೆಸಿದ ಸಂದರ್ಭದಲ್ಲಿ ಬಾಲಕಾರ್ಮಿಕರು ಹಾಗೂ ಕಿಶೋರ ಕಾರ್ಮಿಕರು ಕಂಡು ಬಂದಲ್ಲಿ ಮಕ್ಕಳನ್ನು ರಕ್ಷಿಸಿ, ಕೆಲಸದಿಂದ ಬಿಡುಗಡೆಗೊಳಿಸಿ, ಅವರ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ಮಾಡಲಾಗುತ್ತಿದ್ದು, ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮವಹಿಸಲಾಗುತ್ತಿದೆ. 2023–24ನೇ ಸಾಲಿನಲ್ಲಿ 17 ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಿಸಿ ಪುನರ್ವಸತಿಗೊಳಿಸಲಾಗಿದೆ. ಕಾರ್ಮಿಕ ಇಲಾಖೆಯು ಬಾಲಕಾರ್ಮಿಕ ಪದ್ಧತಿಯ ತೊಡೆದು ಹಾಕುವಿಕೆಯ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ತಾಲೂಕು ಮಟ್ಟದಲ್ಲಿ ಹೋಬಳಿವಾರು ಕಲಂ 17ರ ಅಧಿಕಾರಿಗಳ ತಂಡ ರಚಿಸಿ, ಹೋಬಳಿವಾರು ಹಠಾತ್ ದಾಳಿ ನಡೆಸುವುದು, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರಿಗಳಿಗೆ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ನಿಷೇಧ ಹಾಗೂ ನಿಯಂತ್ರಣ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸುವುದು, ಕಾಯ್ದೆಯನ್ನು ಉಲ್ಲಂಘನೆ ಮಾಡಿದ್ದಲ್ಲಿ ಉಂಟಾಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಬಡಕಾರ್ಮಿಕರ ಮಕ್ಕಳು ಹೆಚ್ಚಾಗಿ ವ್ಯಾಸಂಗ ಮಾಡುವ ಶಾಲಾ ಕಾಲೇಜುಗಳನ್ನೇ ಪ್ರಮುಖವಾಗಿ ಆಯ್ಕೆ ಮಾಡಿ ಮಕ್ಕಳಿಗೆ ಹಾಗೂ ಪೋಷಕರಿಗೆ ಬಾಲಕಾರ್ಮಿಕತೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ನಮ್ಮ ಮುಂದಿನ ಪೀಳಿಗೆಯ ಉತ್ತಮ ಭವಿಷ್ಯಕ್ಕಾಗಿ ಹಾಗೂ ದೇಶದ ಅಭಿವೃದ್ಧಿಗಾಗಿ ಪಣತೊಟ್ಟು ಇನ್ನು ಮುಂದೆ ಸಾರ್ವಜನಿಕರು ತಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿ 14 ವರ್ಷದೊಳಗಿನ ಮಕ್ಕಳು ಯಾವುದೇ ಉದ್ಯೋಗ ಅಥವಾ ಪ್ರಕ್ರಿಯೆಗಳಲ್ಲಿ ಹಾಗೂ 18 ವರ್ಷ ವಯಸ್ಸಿನವರೆಗಿನ ಕಿಶೋರರು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸ ಮಾಡುವುದು ಕಂಡು ಬಂದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡುವುದು ಅಥವಾ ಪಕ್ಕದ ಪೊಲೀಸ್ ಠಾಣೆ ಹಾಗೂ ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಕಲಂ 17ರಡಿ ನೇಮಕಗೊಂಡ ಇಲಾಖಾ ಅಧಿಕಾರಿಗಳನ್ನು ಸಂಪರ್ಕಿಸಿ ದೂರು ನೀಡಬಹುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮಕ್ಕಳ ಕಲ್ಯಾಣ ಹಾಗೂ ಕ್ಷೇಮಾಭಿವೃದ್ಧಿಗಾಗಿ ಸರ್ಕಾರವು ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆದರೆ ಸರ್ಕಾರ ಹಾಗೂ ಇಲಾಖೆಯು ಮಾತ್ರ ಬಾಲಕಾರ್ಮಿಕತೆಯನ್ನು ತೊಡೆದು ಹಾಕಲು ಪಣತೊಟ್ಟರೆ ಸಾಲದು, ಬಾಲಕಾರ್ಮಿಕತೆ ನಿರ್ಮೂಲನೆ ಮಾಡುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಶಾಲಾ ಮಕ್ಕಳು ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡುವ ಮೂಲಕ ಬಾಲಕಾರ್ಮಿಕ ಮಕ್ಕಳ ಬಗ್ಗೆ ಮಾಹಿತಿ ನೀಡುತ್ತಿದ್ದು, ಇಂತಹ ಬೆಳವಣಿಗೆ ಸ್ವಾಗತಾರ್ಹ ಹಾಗೂ ಅಭಿನಂದನಾರ್ಹವು ಕೂಡ.

ಆಯರಹಳ್ಳಿ ಕಬ್ಬಿನ ಗದ್ದೆಯಲ್ಲಿ 3 ಚಿರತೆ ಮರಿ ರಕ್ಷಣೆ

ಮೈಸೂರು, ಡಿ.6 (ಎಂಟಿವೈ)–ಮೈಸೂರಿನ ಆಯರಹಳ್ಳಿಯ ಕಬ್ಬಿನ ಗದ್ದೆಯಲ್ಲಿ ಅಪರೂಪದ ಕಪ್ಪು ಬಣ್ಣದ ಮರಿ ಸೇರಿದಂತೆ ಮೂರು ಚಿರತೆ ಮರಿಗಳನ್ನು ರಕ್ಷಿಸಲಾಗಿದೆ.

ಗ್ರಾಮದ ದ್ಯಾವಣ್ಣನಾಯಕರ ಕಬ್ಬಿನ ಗದ್ದೆಯಲ್ಲಿ ಕಬ್ಬು ಕಟಾವು ಮಾಡುವ ಸಂದರ್ಭದಲ್ಲಿ ಮೂರು ಚಿರತೆ ಮರಿ ಪ್ರತ್ಯಕ್ಷವಾಗಿವೆ. ವಾರದ ಹಿಂದಷ್ಟೇ ಜನಿಸಿರುವ ಮೂರು ಮರಿಗಳು ಚೀರಾಡುತ್ತಿರುವುದನ್ನು ಗಮನಿಸಿದ ಕಬ್ಬು ಕಟಾವು ಮಾಡುವ ಕಾರ್ಮಿಕರು ಮರಿಗಳನ್ನು ಸುರಕ್ಷಿತ ಸ್ಥಳಕ್ಕೆ ತಂದಿದ್ದಾರೆ. ಕೂಡಲೇ ಗ್ರಾಮಸ್ಥರು ಮೂರು ಮರಿಗಳನ್ನು ಬಾಕ್ಸ್‌ನಲ್ಲಿಟ್ಟು ಅರಣ್ಯ ಸಿಬ್ಬಂದಿಗಳ ವಶಕ್ಕೆ ನೀಡಿದ್ದಾರೆ.

ನಾಗರಹೊಳೆಯ ಅಂತರಸಂತೆ ವಲಯದಲ್ಲಿ ಸಫಾರಿಗರಿಗೆ ಕಾಣಿಸಿಕೊಳ್ಳುತ್ತಿದ್ದ ಕಪ್ಪು ಚಿರತೆ ಎಲ್ಲರ ಮನೆ ಮಾತಾಗಿದೆ. ಆದರೆ, ಮೈಸೂರು ಸಮೀಪವೇ ಸಿಕ್ಕ ಮೂರು ಮರಿಗಳಲ್ಲಿ ಒಂದು ಮರಿ ಕಪ್ಪು ಬಣ್ಣದಾಗಿದ್ದು, ಅಚ್ಚರಿ ಮೂಡಿಸಿದೆ. ಮೂರು ಚಿರತೆ ಮರಿಗಳು ಹಾಲು ಕುಡಿಯುವ ಮರಿಗಳಾಗಿದ್ದು, ಅದನ್ನು ಅರಣ್ಯ ಸಿಬ್ಬಂದಿ ಆರೈಕೆ ಮಾಡುವುದು ಕಷ್ಟಕರವಾಗಿದೆ. ಈ ಹಿನ್ನೆಲೆಯಲ್ಲೆ ತಾಯಿಯ ಮಡಿಲಿಗೆ ಸೇರಿಸುವ ಪ್ರಯತ್ನ ಮಾಡಲಾಗಿದೆ. ಮರಿಗಳಿಗೆ ತಾಯಿ ಹಾಲು ಅವಶ್ಯಕತೆ ಇದೆ. ಹಾಗಾಗಿ ಮರಿ ಸಿಕ್ಕಿದ ಕಬ್ಬಿನ ಗದ್ದೆ ಸುತ್ತಲೂ ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ.



ತಾಯಿಯೊಂದಿಗೆ ಮರು ಸೇರಿಸಲು ಅರಣ್ಯ ಇಲಾಖೆ ಕ್ರಮ

ಅಲ್ಲದೆ, ಚಿರತೆ ಮರಿ ಇಟ್ಟಿರುವ ಸ್ಥಳವನ್ನು ಸೂಕ್ಷ್ಮವಾಗಿ ಗಮನಿಸಲು ದೂರದಲ್ಲಿ ಚಿರತೆ ರಕ್ಷಣಾ ಪಡೆ ಸಿಬ್ಬಂದಿಗಳ ತಂಡ ನಿಯೋಜಿಸಲಾಗಿದೆ. ಗ್ರಾಮಸ್ಥರ ಸಹಕಾರ ಪಡೆದು, ಅವರಿಗೆ ತಾಯಿಯೊಂದಿಗೆ ಮರಿ ಸೇರಿಸುವ ಅನಿವಾರ್ಯತೆಯನ್ನು ಮನವರಿಕೆ ಮಾಡಿಕೊಟ್ಟು ಕಾರ್ಯಾಚರಣೆ ನಡೆಸಲಾಗುತ್ತಿದೆ. ಇಂದು ರಾತ್ರಿ ಮರಿಯನ್ನು ತಾಯಿ ಸೇರಿಸಿಕೊಂಡರೆ, ಅದು ಮರಿಗಳನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಿದೆ. ಇಲ್ಲದಿದ್ದರೆ, ಆ ಮರಿಗಳನ್ನು ಅರಣ್ಯ ಸಿಬ್ಬಂದಿಗಳು ಆರೈಕೆ ಮಾಡಲು ಕ್ರಮ ಕೈಗೊಂಡಿದ್ದಾರೆ.

ಕಾಲುವೆ ಮೇಲೆ ನಿರ್ಮಿಸಿದ್ದ ಬೊಂಬು ಬಿರಿಯಾನಿ ಹೋಟೆಲ್ ತೆರವು



ಮೈಸೂರು,ಡಿ.6(ಆರ್‌ಕೆ)– ಮೈಸೂರಿನ ಗೋಕುಲಂ ಮುಖ್ಯ ರಸ್ತೆಯಲ್ಲಿ ರಾಜಕಾಲುವೆ ಮೇಲೆ ಅನಧಿಕೃತವಾಗಿ ಬೊಂಬುಗಳಿಂದ ನಿರ್ಮಿಸಿದ್ದ ಬಿರಿಯಾನಿ ಹೋಟೆಲ್ ಅನ್ನು ಕಡೆಗೂ ನಗರಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದರು.

ವಿಷಯ ತಿಳಿಯುತ್ತಿದ್ದಂತೆ ನಿನ್ನೆ (ಡಿ.5) ಸಂಜೆಯೇ ಪಾಲಿಕೆ ವಲಯ ಕಚೇರಿ–4ರ ವಲಯಾಧಿಕಾರಿ ಚಂದ್ರಮ್ಮ ಅವರು ಇಂಜಿನಿಯರ್‌ಗಳೊಂದಿಗೆ ಸ್ಥಳಕ್ಕೆ ತೆರಳಿ ರಾಜಕಾಲುವೆ ಮೇಲೆ ಬಿದಿರಿನ ಬೊಂಬಿನಿಂದ ಹೋಟೆಲ್ ನಿರ್ಮಿಸಿದ್ದವರಿಗೆ ನೋಟಿಸ್ ನೀಡಿ ತೆರವುಗೊಳಿಸುವಂತೆ ತಿಳುವಳಿಕೆ ನೀಡಿದ್ದರಾದರೂ ಕ್ರಮ ವಹಿಸಿರಲಿಲ್ಲ. ಇಂದು ಬೆಳಗ್ಗೆ ಜೆಸಿಬಿ, ಅಭಯ ತಂಡದೊಂದಿಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ನಿರ್ಮಾಣವನ್ನು ನೆಲಸಮಗೊಳಿಸಿದರು. ಆ ವೇಳೆ ಕೆಲವರು ಬೊಂಬಿನಿಂದ ತಾತ್ಕಾಲಿಕವಾಗಿ ಹೋಟೆಲ್ ನಿರ್ಮಿಸಲಾಗಿದೆ. ದೊಡ್ಡ ಮೋರಿ ಪಕ್ಕದಲ್ಲಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುವುದಿಲ್ಲ ಎಂದು ಮನವೊಲಿಸಲೆತ್ನಿಸಿದರಾದರೂ, ಚಂದ್ರಮ್ಮ ಹಾಗೂ ಇಂಜಿನಿಯರ್‌ಗಳು ಕಾರ್ಯಾಚರಣೆ ನಡೆಸಿ ಬೊಂಬಿನ ಬಿರಿಯಾನಿ ಹೋಟೆಲ್ ಅನ್ನು ನೆಲಕ್ಕುರುಳಿಸಿದರು.

ಕಾವೇರಿ ಕ್ರಿಯಾ ಸಮಿತಿ ಧರಣಿ ಮತ್ತೆ ಆರಂಭ



ಮೈಸೂರು, ಡಿ.6(ಜಿಎ)–ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದ ಧರಣಿಯನ್ನು ಬುಧವಾರದಿಂದ ಮತ್ತೆ ಆರಂಭಿಸಲಾಗಿದೆ.

ರಾಜ್ಯ ಸರ್ಕಾರವು ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರಿನ ಪುರಭವನದ ಮುಂಭಾಗ ನಡೆಸುತ್ತಿದ್ದ ಧರಣಿಯನ್ನು ದಸರಾ ಮಹೋತ್ಸವಕ್ಕೆ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ತೊಂದರೆಯುಂಟಾಗಬಾರದು ಎಂಬ ಉದ್ದೇಶದಿಂದ ತಾತ್ಕಾಲಿಕವಾಗಿ ಕೈಬಿಡಲಾಗಿತ್ತು. ಇಂದು ಮತ್ತೆ ಆರಂಭವಾದ ಧರಣಿಗೆ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಚಾಲನೆ ನೀಡಿದರು.

ಈ ವೇಳೆ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಮಾತನಾಡಿ, ತಾಯಿ ಚಾಮುಂಡೇಶ್ವರಿ ಪೂಜೆ ಕೈಂಕರ್ಯಗಳು ಉತ್ತಮವಾಗಿ ನಡೆದು ನಾಡಿನಲ್ಲಿ ಮಳೆ ಬೆಳೆ ಉತ್ತಮವಾಗಿ ನಡೆಯಲಿ ಮತ್ತು ದಸರಾ ಮಹೋತ್ಸವಕ್ಕೆ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಯಾವುದೇ ತೊಂದರೆಯಾಗಬಾರದೆಂದು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿತ್ತು. ಆದರೆ, ಇಂದಿನಿಂದ ಮತ್ತೆ ಧರಣಿಯನ್ನು ಆರಂಭಿಸಿದ್ದೇವೆ. ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ನಿಲ್ಲಿಸುವವರೆಗೂ ಈ ಧರಣಿ ಮುಂದುವರೆಯಲಿದೆ ಎಂದರು.

ತಮಿಳುನಾಡಿಗೆ ಮತ್ತೆ ನೀರು ಬಿಡಬೇಕೆಂದು ಕಾವೇರಿ ನ್ಯಾಯಮಂಡಳಿ ಆದೇಶ ನೀಡಿರುವುದು ಖಂಡನೀಯ. ರಾಜ್ಯದಲ್ಲಿ ಸೂಕ್ತ ಮಳೆಯಾಗದೆ ಜಲಾಶಯಗಳು ಬರಿದಾಗಿದ್ದು, ಕುಡಿಯಲು ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರೈತರ ಬೆಳೆಗೇ ನೀರು ಬಿಟ್ಟಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡಬೇಕೆಂದು ಆದೇಶ ನೀಡುವುದು ಎಷ್ಟರ ಮಟ್ಟಿಗೆ ಸರಿ. ಪ್ರವಾಹದಿಂದ ತಮಿಳುನಾಡು ಮುಳುಗಿದ್ದರೂ ಅವರ ನೀರಿನ ಹಾಹಾಕಾರ ನಿಂತಿಲ್ಲ. ಅಲ್ಲದೆ ನಮ್ಮ ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡನೆ ಮಾಡಲು ವಿಫಲವಾಗಿದೆ. ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಲು ಸಾಧ್ಯವಾಗಿಲ್ಲ. ಇದರಿಂದ ರಾಜ್ಯದ ಜನತೆ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಹೀಗಾಗಿ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ ಎಂದರು.

ಈಗಾಗಲೇ ಸಮಿತಿ ವತಿಯಿಂದ ಈ ವಿಚಾರವಾಗಿ ರಾಷ್ಟ್ರಪತಿಗಳು ಮಧ್ಯಸ್ಥಿಕೆ ವಹಿಸಬೇಕೆಂದು ಪತ್ರ ಬರೆಯಲಾಗಿದೆ. ಪ್ರಧಾನ ಮಂತ್ರಿಗಳ ಭೇಟಿಗೂ ಅವಕಾಶ ಕೋರಲಾಗಿದೆ. ಈ ಹೋರಾಟಕ್ಕೆ ರಾಜ್ಯದ ವಿವಿಧ ಸಂಘ–ಸಂಸ್ಥೆಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಸಾಥ್ ನೀಡಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಬಸವರಾಜು, ಮಹದೇವಪ್ಪ, ಮೆಲ್ಲಹಳ್ಳಿ ಮಹದೇವಸ್ವಾಮಿ, ಚಿನ್ನ ಸ್ವಾಮಿ, ಶಿವಪ್ಪ ದೇವರು, ಪ್ರಭಾ, ಅಲ್ಲಮ್ಮ, ವಿಷ್ಣು ಸೇರಿದಂತೆ ಹಲವರು ಭಾಗವಹಿಸಿದ್ದರು.

ಬಿಳಿಕೆರೆಯಲ್ಲಿ ರಕ್ತದಾನ ಶಿಬಿರ



ಮೈಸೂರು, ಡಿ.6(ಎಂಟಿವೈ)– ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಅನುಕೂಲಕ್ಕಾಗಿ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 37 ಮಂದಿ ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ರಕ್ತದಾನ ಮಾಡಿ ಗಮನ ಸೆಳೆದರು.

ವಿಶ್ವ ಏಡ್ಸ್ ದಿನದ ಅಂಗವಾಗಿ ಕಾಲೇಜಿನ ಯುವ ರೆಡ್ ಕ್ರಾಸ್ ಸಂಸ್ಥೆ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಐಕ್ಯುಎಸಿ ಸಮಿತಿಯು ಮೈಸೂರಿನ ಲಯನ್ ಬ್ಲಡ್ ಸಂಸ್ಥೆ, ಜೀವಧಾರ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ರಕ್ತ ಗುಂಪಿನ ಪರೀಕ್ಷೆ ಮತ್ತು ರಕ್ತದಾನ ಶಿಬಿರದಲ್ಲಿ ಕಾಲೇಜಿನ 280 ವಿದ್ಯಾರ್ಥಿಗಳಲ್ಲಿ 200 ವಿದ್ಯಾರ್ಥಿಗಳು ತಪಾಸಣೆಗೊಳಪಟ್ಟರು. ಅವರಲ್ಲಿ 37 ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಇದೇ ವೇಳೆ ಲಯನ್ ಬ್ಲಡ್ ಸಂಸ್ಥೆ ಜೀವಧಾರ ಮುಖ್ಯಸ್ಥ ಸುರೇಶ್ ರಕ್ತದಾನದ ಮಹತ್ವವನ್ನು ಹಾಗೂ ಏಡ್ಸ್ ತಡೆಗಟ್ಟುವ ವಿಧಾನಗಳನ್ನು ತಿಳಿಸಿದರು. ಒಬ್ಬರು ರಕ್ತದಾನ ಮಾಡು ವುದರಿಂದ ಮೂರು ಜೀವಗಳನ್ನು ಉಳಿಸಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಎಂ.ಕೆ.ರಮೇಶ್, ಯುವ ರೆಡ್ ಕ್ರಾಸ್ ಸಂಸ್ಥೆಯ ಸಂಚಾಲಕಿ ಡಿ.ದೀಪಿಕಾ, ರಾಷ್ಟ್ರೀಯ ಸೇವಾ ಯೋಜನೆಯ ಸಮಿತಿ ಸಂಚಾಲಕಿ ಎಸ್.ವಿ.ಆಶಾರಾಣಿ, ಐಕ್ಯುಎಸಿ ಘಟಕದ ಸಂಚಾಲಕಿ ಡಾ. ಬಿ.ಜಯಲಕ್ಷ್ಮಿ, ಕಾರ್ಯಕ್ರಮದ ಸಂಘಟಕ, ಗ್ರಂಥಪಾಲಕ ಹೆಚ್.ಸಿ.ಗಂಗಾಧರ, ಸಹಾಯಕ ಪ್ರಾಧ್ಯಾಪಕ ಡಾ.ಎಂ.ಎಸ್.ಪ್ರಸನ್ನ, ಕಾಲೇಜಿನ ಇತರ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗ ಹಾಜರಿದ್ದರು.

ಜಲ ಜೀವನ್ ಮಿಷನ್ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಡಿಎಂಜಿ ಹಳ್ಳಿ ಗ್ರಾಪಂ ಅಧಿಕಾರಿಗಳಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚನೆ



ಮೈಸೂರು, ಡಿ.6(ಆರ್‌ಕೆ)–ಸರ್ಕಾರದ ಜಲ ಜೀವನ್ ಮಿಷನ್ (JJM) ಯೋಜನೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ದೊಡ್ಡ ಮಾರನಹಳ್ಳಿ (ಡಿಎಂಜಿ ಹಳ್ಳಿ) ಗ್ರಾಮ ಪಂಚಾಯ್ತಿ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೂಚನೆ ನೀಡಿದ್ದಾರೆ.

ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಗತಿ ಪರಿಶೀಲಿಸಿದ ಅವರು, ಜಲ ಜೀವನ್ ಮಿಷನ್ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವಂತೆ ಸರ್ಕಾರದ ಸ್ಪಷ್ಟ ನಿರ್ದೇಶನವಿದ್ದರೂ ಬಾಕಿ ಉಳಿಸಿಕೊಂಡಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಅದಕ್ಕಾಗಿ ಗ್ರಾಮ ಪಂಚಾಯ್ತಿ ಅಧ್ಯಕ್ಷರ ನೇತೃತ್ವದಲ್ಲಿ ಜಲ ಸಮಿತಿ ರಚಿಸಲಾಗಿದೆ. ಸಮಿತಿಯು ಡಿಪಿಆರ್ ಪ್ರಕಾರ ಕಾಮಗಾರಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪೂರ್ಣಗೊಳಿಸಬೇಕು. ಈ ಬಗ್ಗೆ ತಮಗೆ ಅನುಪಾಲನಾ ವರದಿ ಸಲ್ಲಿಸುವಂತೆ ಅವರು ಸಲಹೆ ನೀಡಿದರು.

ಸ್ವಚ್ಛ ಭಾರತ್ ಮಿಷನ್ ಅಡಿ ಘನತ್ಯಾಜ್ಯ ವಿಲೇವಾರಿಗೆ ಜಾಗ ಗುರ್ತಿಸಬೇಕು. ಕಟ್ಟಡ ನಿರ್ಮಿಸುವಂತೆ ಹಾಗೂ ನರೇಗಾ ಯೋಜನೆಯಡಿ ನಿಗದಿಪಡಿಸಿರುವ ಮಾನದ ದಿನಗಳ ಗುರಿ ಸಾಧಿಸಬೇಕು. ಸಮುದಾಯಕ್ಕೆ ಅನುಕೂಲವಾಗುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆಯೂ ಗಾಯಿತ್ರಿ ಅವರು ಇದೇ ವೇಳೆ ಸೂಚನೆ ನೀಡಿದರು. ನರೇಗಾ ಕಾಮಗಾರಿಗಳನ್ನು ಕೈಗೊಂಡರೆ ಉದ್ಯೋಗ ನೀಡಿದಂತಾಗಿ, ಕೆಲಸಕ್ಕಾಗಿ ಜನರು ಗುಳೆ ಹೋಗುವುದನ್ನು ತಡೆಯಬಹುದು. ಗ್ರಂಥಾಲಯದಲ್ಲಿ ಮೂಲ ಸೌಲಭ್ಯ ಕಲ್ಪಿಸಿ ದಿನ ಪತ್ರಿಕೆಗಳನ್ನು ಪೂರೈಸುವಂತೆ ಸಲಹೆ ನೀಡಿದ ಅವರು, ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಗ್ರಾಮ ಪಂಚಾಯ್ತಿ ವತಿಯಿಂದ ನಡೆಸುವ ಮಕ್ಕಳ ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಬೇಕೆಂದು ತಿಳಿಸಿದರು. ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್.ಗಿರಿಧರ್, ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಂ.ಎಸ್.ಪ್ರಭಾ, ಸದಸ್ಯರಾದ ಟಿ.ಕೃಷ್ಣಪ್ಪ, ಡಿ.ಬಿ.ಶಂಕರ್, ಭಗವಾನ್ ಸ್ವಾಮಿ, ಡಿಪಿಓ ಕೆ.ರುಕ್ಮಾಂಗದ, ಕಾರ್ಯದರ್ಶಿ ಎಸ್.ಸೌಮ್ಯ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಗುರುವಾರ 7 ಡಿಸೆಂಬರ್ 2023

ಮಳವಳ್ಳಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ತಹಸೀಲ್ದಾರ್ ದಿಢೀರ್ ಭೇಟಿ



ಪಟ್ಟಣದ ಗಂಗಾ, ದಯಾನಂದ, ಮಂದಾರ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ ಅಲ್ಲಿನ ಕಡತಗಳು ಮತ್ತು ಬಾಣಂತಿಯರನ್ನು ವಿಚಾರಿಸಿದರು. ಸ್ಕ್ಯಾನಿಂಗ್ ಸೆಂಟರ್‌ಗಳ ಮುಂದೆ ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಸೂಚನಾ ಫಲಕಗಳನ್ನು

ಮಳವಳ್ಳಿ, ಡಿ.6– ಪಟ್ಟಣದ ಸ್ಕ್ಯಾನಿಂಗ್ ಮತ್ತು ಲ್ಯಾಬ್ ಸೆಂಟರ್‌ಗಳಿಗೆ ತಹಸೀಲ್ದಾರ್ ಕೆ.ಎನ್.ಲೋಕೇಶ್ ನೇತೃತ್ವ ತಂಡ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿರುವ ಘಟನೆ ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಾಲೂಕಿನಲ್ಲಿ ಜಾಗೃತ ದಳ ತಂಡ ಮಾಡಿಕೊಂಡು ತಾಲೂಕಿನ ಯಾವ ಸ್ಕ್ಯಾನಿಂಗ್ ಸೆಂಟರ್‌ಗಳು ಯಾವ ಮಟ್ಟದಲ್ಲಿ ಕೆಲಸ ಕಾರ್ಯ ಮಾಡುತ್ತಿದೆ ಎಂದು ಪರಿಶೀಲನೆ ಮಾಡಲಾಗಿದೆ ಎಂದರು.

ಅಂಟಿಸಬೇಕು, ಹೆಣ್ಣು– ಗಂಡು ಎಂಬುದನ್ನು ಕಂಡುಹಿಡಿಯುವ ಕಾನೂನು ಬಾಹಿರ ಚಟುವಟಿಕೆ ಮಾಡಬಾರದು ಎಂದರು.

ಜ್ಯೋತಿ ರಕ್ತ ಪರೀಕ್ಷೆ ಕೇಂದ್ರ, ದಯಾನಂದ ನರ್ಸಿಂಗ್ ಹೋಂ, ಮಹಾಲಕ್ಷ್ಮಿ ರಕ್ತ ಪರೀಕ್ಷೆ ಸೆಂಟರ್‌ಗಳು ಸರಿಯಾದ ಕ್ರಮವನ್ನು ವಹಿಸಿಲ್ಲ ಎಂದು ನೋಟಿಸ್ ಅನ್ನು ಜಾರಿ ಮಾಡುವಂತೆ ಆರೋಗ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ದಾಳಿಯಲ್ಲಿ ತಾಲೂಕು ಪಂಚಾಯಿತಿ ಇಓ ಮಮತಾ, ಟಿಎಚ್‌ಓ ವೀರಭದ್ರಪ್ಪ ಸಿಡಿಪಿಓ ದೀಪ, ಪಿಎಸ್‌ಐ ಶರವಣ ಇದ್ದರು.

ಸುಪ್ರೀಂಕೋರ್ಟ್‌ನಿಂದ ಕಾವೇರಿ ಸಮಸ್ಯೆಗೆ ಪರಿಹಾರ ದೊರಕಲ್ಲ

ಜಲ ಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿ ಕ್ಯಾ.ರಾಜಾರಾವ್ ಅಭಿಮತ

ಮಂಡ್ಯ, ಡಿ.6– ಪ್ರತಿ ಬಾರಿ ಕಾವೇರಿ ವಿವಾದ ಭುಗಿಲೆದ್ದ ಸಂದರ್ಭದಲ್ಲಿ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುವುದರಿಂದ ನಿರೀಕ್ಷಿತ ವೇಳೆಯಲ್ಲಿ ಪರಿಹಾರ ದೊರಕುವುದಿಲ್ಲ. ಆದ್ದರಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಮಿತಿಯ ಪ್ರದತ್ತ ಅಧಿಕಾರದಲ್ಲಿ ವಿವಾದವನ್ನು ಏಕೆ ಬಗೆಹರಿಸಬಾರದು ಎಂದು ಜಲಸಂಪನ್ಮೂಲ ಮತ್ತು ಪರಿಸರ ಇಲಾಖೆಯ ನಿವೃತ್ತ ಕಾರ್ಯದರ್ಶಿ ಕ್ಯಾ.ರಾಜಾರಾವ್ ಪ್ರಶ್ನಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಎಸ್.ಬಿ.ಎಜುಕೇಷನ್ ಟ್ರಸ್ಟ್, ಮಾಂಡವ್ಯ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ 'ಕಾವೇರಿ:ಪ್ರಕೃತಿಯ ಪ್ರಸಾದ–ಮನುಷ್ಯರ ವಿವಾದ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಈ ಬಗ್ಗೆ ಆಧ್ಯ ಗಮನ ನೀಡಿ ಪ್ರಯತ್ನಿಸಿದರೆ ಸಂಕಷ್ಟ ಕಾಲದಲ್ಲಿ ಕಾವೇರಿ ಸಮಸ್ಯೆಯನ್ನು ಬಗೆಹರಿಸಿ ಎರಡೂ ರಾಜ್ಯಗಳ ರೈತರಿಗೆ ಅನುಕೂಲ ಮಾಡಿಕೊಡಬಹುದು ಎಂದು ಅಭಿಪ್ರಾಯಪಟ್ಟರು.

1983 ರಲ್ಲಿ ಸುಪ್ರೀಂ ಕೋರ್ಟಿಗೆ ಕಾವೇರಿ ವಿವಾದ



ಪ್ರವೇಶಿಸಿದ ನಂತರ 1990ರಲ್ಲಿ ವಿಚಾರಣೆ ನಡೆದು ಮುಖ್ಯ ನ್ಯಾಯಮೂರ್ತಿ ಜಗನ್ನಾಥ್ ಮಿಶ್ರಾ ಅವರು ಈ ಕೂಡಲೇ ಪ್ರಾಧಿಕಾರ ರಚಿಸಿ ಎಂದು ಆದೇಶವನ್ನೇ ಹೊರಡಿಸಿದರು. ಅದಾದ 17 ವರ್ಷಗಳ ಸಮಯ ವ್ಯರ್ಥವಾಗಿ ಹೋಯಿತು. ಇದು ನಮ್ಮ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾವೇರಿ ನದಿ ನೀರಿನ ಸಮಸ್ಯೆ ಮಾತ್ರವಲ್ಲ, ದೇಶದ ಅಂತರ ರಾಜ್ಯ ನದಿ ನೀರಿನ ಸಮಸ್ಯೆಗೆ ನದಿಗಳ ಜೋಡಣೆಯೊಂದೇ ಭವಿಷ್ಯದ ಪರಿಹಾರದ ಮಾರ್ಗೋಪಾಯ ಆಗಿದೆ. ಮಾತ್ರವಲ್ಲ, ಇನ್ನು ಮುಂದೆ ಕಾಲುವೆಗಳ ಮೂಲಕ ನೀರು ಹರಿಸುವಷ್ಟು ಸಂಪತ್ತನ್ನು ಪ್ರಕೃತಿ ಕರುಣಿಸುವುದಿಲ್ಲ. ಏನಿದ್ದರೂ ಪೈಪುಗಳ ಮೂಲಕವೇ ನೀರಾವರಿ ಮಾಡಬೇಕಾದ ಸನ್ನಿವೇಶ ಬಹಳ ದೂರ ವೇನೂ ಇಲ್ಲ. ನಮ್ಮ ರಾಜ್ಯದಲ್ಲೇ ಬೀಳುವ ಸರಾಸರಿ 2 ಸಾವಿರ ಟಿಎಂಸಿ ನೀರು ವ್ಯರ್ಥವಾಗಿ ಹರಿದು ಬಂಗಾಳಕೊಲ್ಲಿ ಸೇರುತ್ತದೆ. ಇದನ್ನು ಹಿಡಿದಿಟ್ಟು ಕೊಂಡು ಬಳಸಿಕೊಳ್ಳುವ ಸಾಮರ್ಥ್ಯ ತಮಿಳುನಾಡಿನಲ್ಲಿ ಇಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ತಮಿಳುನಾಡಿಗೆ ಯಾವುದೇ ನಿರ್ದೇಶನ ನೀಡದಿರುವುದು ದುರ್ದೈವ. ಮುಂದೆ ಕಾವೇರಿ ನದಿ ನೀರಿನ 2ನೇ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದರೆ ಉಳಿದ ಶೇ. 50ರಷ್ಟು ನೀರನ್ನು ಹಂಚಿಕೆ ಮಾಡಬೇಕಾದ ಅನಿವಾರ್ಯತೆ ಎದುರಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಂ. ಕೃಷ್ಣೇಗೌಡ, ನಿವೃತ್ತ ಕುಲಪತಿ ಡಾ.ಚಂದ್ರಶೇಖರ್, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಪ್ರೊ.ಬಿ.ಶಿವಲಿಂಗಯ್ಯ, ವಿಶ್ಲೇಷಕ ಅರ್ಜುನಹಳ್ಳಿ ಪ್ರಸನ್ನಕುಮಾರ್, ರೈತ ಹೋರಾಟಗಾರ್ತಿ ಸುನಂದಾ ಜಯರಾಂ, ಪ್ರೊ.ಕೆ.ಸಿ. ಬಸವರಾಜು, ಎಸ್.ಬಿ.ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಇತರರಿದ್ದರು.

ಕೆ.ಆರ್.ಪೇಟೆ: ದಲಿತ ಸಂಘಟನೆಗಳಿಂದ ಡಾ. ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ



ಕೆ.ಆರ್.ಪೇಟೆ, ಡಿ.6– ಪಟ್ಟಣದ ಎಂ.ಕೆ.ಬೊಮ್ಮೇಗೌಡ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿ ನಿಬ್ಬಾಣ ಕಾರ್ಯಕ್ರಮವನ್ನು ತಾಲೂಕು ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಹಮ್ಮಿಕೊಂಡು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷರು ಹಾಗೂ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸುವ ಅಂಬೇಡ್ಕರ್ ಪರಿನಿಬ್ಬಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇಡೀ ವಿಶ್ವದಲ್ಲೇ ಅತಿ ಹೆಚ್ಚು ಪದವಿ ಪಡೆದು ಭಾರತ ದೇಶಕ್ಕೆ ಉತ್ತಮ ಸಂವಿಧಾನವನ್ನು ಬರೆದುಕೊಟ್ಟಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರು ವಿಶ್ವಜ್ಞಾನಿ ಎಂದು ಬಣ್ಣಿಸಲಾಗಿದ್ದು ಅಂಬೇಡ್ಕರ್ ಅವರು ಹುಟ್ಟಿದ ಏ.14ರ ದಿನವನ್ನು ಅಮೆರಿಕಾ ವಿಶ್ವಜ್ಞಾನಿ ದಿನವೆಂದು ಘೋಷಿಸಿ, ಅಂಬೇಡ್ಕರ್ ಅವರ ಪುತ್ಥಳಿಯನ್ನು ಅಮೇರಿಕಾ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಿದೆ. ಇಂತಹ ಮಹಾ ಜ್ಞಾನಿಯನ್ನು ಜಾತಿಯ ಸಂಕೋಲೆಯೊಳಗೆ ಬಂಧಿಸಬಾರದು. ಎಲ್ಲಾ ವರ್ಗದವರಿಗೂ ಅನುಕೂಲವಾಗುವಂತಹ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ರಚಿಸುವ ಮೂಲಕ ದೇಶಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಒಂದು ಉತ್ತಮ ಸಮಾಜ ನಿರ್ಮಾಣಕ್ಕೆ ಶಿಕ್ಷಣ, ಸಂಘಟನೆ, ಹೋರಾಟ ಅಗತ್ಯವಿದೆ ಎಂಬುದು ಅಂಬೇಡ್ಕರ್ ಸಿದ್ಧಾಂತವಾಗಿತ್ತು. ಅಂಬೇಡ್ಕರ್ ಅವರ ಆದರ್ಶ ಗುಣಗಳನ್ನು ಎಲ್ಲರೂ ರೂಢಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ದಲಿತ ಪರ ಹೋರಾಟಗಾರ ಮಾಂಬಹಳ್ಳಿ ಜಯರಾಂ, ಡಿ.ಎಸ್.ಎಸ್. ಜಿಲ್ಲಾ ಸಂಘಟನಾ ಸಂಚಾಲಕ ಲಕ್ಷ್ಮೀಪುರ ರಂಗಸ್ವಾಮಿ, ಅಖಿಲ ಕರ್ನಾಟಕ ಮಾತಂಗಿ ಮಾದಿಗ ಸಂಘಟನೆಯ ಮಂಡ್ಯ ಜಿಲ್ಲಾಧ್ಯಕ್ಷ ಹೊಸಹೊಳಲು ಕುಮಾರ್, ಡಿ.ಎಸ್.ಎಸ್ ವಿಭಾಗೀಯ ಸಂಚಾಲಕ ಕತ್ತರಘಟ್ಟ ರಾಜೇಶ್, ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ರಾಜಯ್ಯ, ತಾಲೂಕು ಡಿಎಸ್‌ಎಸ್ ಸಂಚಾಲಕ ಬಸ್ತಿ ವೆಂಕಟಗಿರಿ, ತಾಲೂಕು ಸಂವಿಧಾನ ಬಳಗದ ತಾಲೂಕು ಅಧ್ಯಕ್ಷ ಮುದುಗೆರೆ ಮಹೇಂದ್ರ, ಗೌರವಾಧ್ಯಕ್ಷ ಬಿ.ಬಿ.ಕಾವಲು ನಿಂಗಯ್ಯ, ರಾಯಸಮುದ್ರ ವೆಂಕಟೇಶ್, ಕೀರ್ತಿಕ್, ಜಕ್ಕನಹಳ್ಳಿ ರಾಜೇಶ್, ಚಿಕ್ಕಗಾಡಿಗನಹಳ್ಳಿ ಬಸವೇಶ್, ಕ್ಯಾತನಹಳ್ಳಿ ರಾಜಯ್ಯ, ಆಲೇನಹಳ್ಳಿ ಚೆಲುವರಾಜು, ಹೊಸಹೊಳಲು ವಿಷ್ಣುರಾಜು, ಹರೀನಹಳ್ಳಿ ಪೂಜಾರಿ ಯಾಲಕ್ಕಯ್ಯ, ಹಿರಿಯ ದಲಿತ ಮುಖಂಡ ಬನ್ನಾರಿ, ಕರವೇ ಸ್ವಾಭಿಮಾನಿ ಸೇನೆಯ ತಾಲೂಕು ಅಧ್ಯಕ್ಷ ಸಮೀರ್ ಮತ್ತಿತರರು ಉಪಸ್ಥಿತರಿದ್ದರು.

ಡಿ.23ಕ್ಕೆ ಪಾಂಡವಪುರ ಪುರಸಭೆಯ 2 ವಾರ್ಡ್‌ಗಳ ಉಪಚುನಾವಣೆ

ಪಾಂಡವಪುರ, ಡಿ.6– ಪುರಸಭೆ ಸದಸ್ಯರು ಅಕಾಲಿಕ ಮರಣ ಹೊಂದಿದ ಹಿನ್ನೆಲೆ ತೆರವಾದ ಪುರಸಭೆಯ ಎರಡು ವಾರ್ಡ್‌ಗಳ ಸದಸ್ಯ ಸ್ಥಾನಕ್ಕೆ ಡಿ.23 ರಂದು ಉಪ ಚುನಾವಣೆ ನಡೆಯಲಿದೆ.

2ನೇ ವಾರ್ಡ್‌ನ ಜೆಡಿಎಸ್ ಸದಸ್ಯ ಚಿಕ್ಕತಮ್ಮೇಗೌಡ ಹಾಗೂ 9ನೇ ವಾರ್ಡ್‌ನ ಜೆಡಿಎಸ್ ಸದಸ್ಯ ಬಿ.ವೈ. ಬಾಬು ನಿಧನರಾದ ಕಾರಣ ತೆರವುಗೊಂಡಿರುವ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಡಿ.8ರಂದು ಅಧಿಸೂಚನೆ ಹೊರಡಿಸಲಿದ್ದು, ಡಿ.18 ರಂದು ನಾಮಪತ್ರ ವಾಪಸ್ಸು ಪಡೆಯಲು ಅವಕಾಶ ನೀಡಿಲಾಗಿದೆ. ಡಿ.27ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯ ವರೆಗೆ ಮತದಾನ ನಡೆಯಲಿದೆ. ಡಿ.30ರಂದು ತಾಲೂಕು ಕೇಂದ್ರದಲ್ಲಿ ಮತ ಎಣಿಕೆ ನಡೆಯಲಿದೆ.

ಮಂಡ್ಯದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ



ಮಂಡ್ಯ ಡಿ.6– ಡಾ.ಬಿ.ಆರ್ ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನದ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಜಿಲ್ಲಾಡಳಿತದ ವತಿಯಿಂದ ಮಾಲಾರ್ಪಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಭಾರತ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ. ಭಾರತ ದೇಶಕ್ಕೆ ಸಂವಿಧಾನ ನೀಡಿದ ಅಂಬೇಡ್ಕರ್ ಅವರ ಪರಿನಿಬ್ಬಾಣದ ಅಂಗವಾಗಿ ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಅರ್ಪಿಸಿ ಗೌರವ ನಮನ ಸಲ್ಲಿಸಿದ್ದೇವೆ ಎಂದರು. ಅಂಬೇಡ್ಕರ್ ಅವರು ಭಾರತ ದೇಶದ ಜನರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಟ್ಟಿದ್ದಾರೆ. ಈ ಮೂಲಕ ಭಾರತದಲ್ಲಿ ಶೋಷಣೆ ಮುಕ್ತವಾಗಿ ಇರುವುದಕ್ಕೆ ಅವಕಾಶ ಮಾಡಿಕೊಟ್ಟು ದೇಶದ ಜನರ ಕಣ್ಣಾಗಿದ್ದಾರೆ. ಅಂಬೇಡ್ಕರ್ ಅವರ ಮೌಲ್ಯ, ಚಿಂತನೆಗಳನ್ನು ಅಳವಡಿಸಿಕೊಂಡು ಅವರ ದಾರಿಯಲ್ಲಿ ನಡೆಯಬೇಕು. ಜೊತೆಗೆ ನಮ್ಮ ಮುಂದಿನ ಪೀಳಿಗೆಗೂ ಕೂಡ ಅವರ ಚಿಂತನೆಯನ್ನು ತಿಳಿಸಿ ಮಾದರಿಯಾಗೋಣ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸಿಫ್ ಅಪರ ಜಿಲ್ಲಾಧಿಕಾರಿ ನಾಗರಾಜ್ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಸಿದ್ದಲಿಂಗೇಶ್ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಡಿ.6– ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಾದ, ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆ ಹಾಗೂ ಉದ್ಯೋಗಿನಿ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಹತ್ತಿರದ ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ onlineನಲ್ಲಿ (https://sevasindhu.karnataka.gov.in) ಅರ್ಜಿ ಸಲ್ಲಿಸಬಹುದಾಗಿದೆ, ಅರ್ಜಿ ಸಲ್ಲಿಸಲು ಡಿ.22 ಕೊನೆ ದಿನ ಮಾಹಿತಿಗೆ ದೂ:08232–221315 ಸಂಪರ್ಕಿಸಬಹುದಾಗಿದೆ

ನಂಜಮ್ಮ ನಿಧನ



ಕೆ.ಆರ್.ಪೇಟೆ, ಡಿ.6– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷರಾದ ನಂಜಮ್ಮ(80) ಬುಧವಾರ ಸಂಜೆ ನಿಧನರಾದರು. ಮೃತರು ಶಿಕ್ಷಕ ಎ.ಜೆ.ಧನೇಂದ್ರೇಗೌಡ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಡಿ.7) ಮಧ್ಯಾಹ್ನ ಅಗ್ರಹಾರಬಾಚಹಳ್ಳಿಯಲ್ಲಿರುವ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಡಾ. ಬಿ.ಆರ್ ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣದ ಅಂಗವಾಗಿ ಸಂಸದರಾದ ವಿ. ಶ್ರೀನಿವಾಸ ಪ್ರಸಾದ್ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ದಂಪತಿ ತಮ್ಮ ಭೀಮಸದನ ನಿವಾಸದಲ್ಲಿ ಸಂವಿಧಾನ ಶಿಲ್ಪಿಯ ಭಾವಚಿತ್ರಕ್ಕೆ ಕ್ಯಾಂಡಲ್ ಬೆಳಗಿಸಿ, ಪುಷ್ಪಾರ್ಚನೆ ಸಲ್ಲಿಸಿ, ನಮಿಸಿದರು. ಈ ಸಂದರ್ಭದಲ್ಲಿ ಡಾ. ಕಲ್ಯಾಣಸಿರಿ ಭಂತೇಜಿ, ಪಿ.ನಂದಕುಮಾರ್, ಪ್ರಕಾಶಕ ಭರತ್ ರಾಮಸ್ವಾಮಿ, ಡಾ. ಮುಳ್ಳೂರು ನಂಜುಂಡಸ್ವಾಮಿ, ಸಿ.ಜಿ ಶಿವಕುಮಾರ್, ಸಿ.ಎ. ಗಿರೀಶ್, ಸಂಸದರ ಆಪ್ತ ಸಹಾಯಕ ಹೆಚ್.ಜಿ. ರಮೇಶ್, ಗಂಗೋತ್ರಿ ಮಹೇಶ್, ಶಾಂತಾರಾಮ್ ಶೆಟ್ಟಿ ಮತ್ತಿತರರು ಹಾಜರಿದ್ದರು.

ಬರ ಪರಿಹಾರ ಹಣ ವಾರದೊಳಗೆ ರೈತರ ಖಾತೆಗೆ ಜಮೆ ಮಾಡಲು ಸಿಎಂ ಸೂಚನೆ

ಬೆಳಗಾವಿ, ಡಿ.6– ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ಕಾರಣಕ್ಕೆ ಬೆಳೆ ನಾಶದಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಈಗಾಗಲೇ ಸರ್ಕಾರ ಘೋಷಿಸಿರುವ ಎರಡು ಸಾವಿರ ರೂ. ವರೆಗಿನ ಮೊದಲ ಹಂತದ ಪರಿಹಾರವನ್ನು ಮುಂದಿನ ವಾರದೊಳಗೆ ರೈತರ ಖಾತೆಗೆ ಜಮೆ ಮಾಡಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.



ಬುಧವಾರ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ನಡೆಸಿ ಎಲ್ಲರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಿ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

ರೈತರಿಗೆ ಮೊದಲ ಹಂತದಲ್ಲಿ 2,000 ರೂ. ವರೆಗೆ ಪರಿಹಾರ ಘೋಷಿಸಲಾಗಿದ್ದು, ಈ ಪರಿಹಾರವನ್ನು ತ್ವರಿತವಾಗಿ ವಿತರಿಸಲು ಮಾರ್ಗಸೂಚಿಗಳನ್ನು ರೂಪಿಸಿ, ಡಿ.ಬಿ.ಟಿ. ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.


ಸರ್ಕಾರ ಸಮರ್ಪಕವಾಗಿ ನಡೆಯಲು ನಿಮ್ಮ ಪಾತ್ರ ಬಹುಮುಖ್ಯ. ನೀವು ಸರ್ಕಾರದ ಕಣ್ಣು, ಕಿವಿ ಇದ್ದಹಾಗೆ ಎಂದು ತಿಳಿಸಿದ ಮುಖ್ಯಮಂತ್ರಿಗಳು, ರಾಜಕಾರಣಿಗಳು, ಅಧಿಕಾರಿಗಳು– ನಾವೆಲ್ಲರೂ ಜನರಿಗೋಸ್ಕರ ಇರುವುದು. ಜನರ ಕೆಲಸವನ್ನು ವೇಗವಾಗಿ ಮಾಡಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯದಲ್ಲಿ ತಲೆದೋರಿರುವ ತೀವ್ರ ಬರಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಧಿಕಾರಿಗಳು ಮತ್ತಷ್ಟು ಯುದ್ಧೋಪಾದಿಯಲ್ಲಿ ಕೆಲಸ ಮುಂದುವರೆಬೇಕು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗಳು ಜಿಲ್ಲೆಗಳಿಗೆ ಭೇಟಿ ನೀಡಿರುವ, ಪರಿಶೀಲನೆ ನಡೆಸಿರುವ ಕುರಿತಾದ ಸಮಗ್ರ ಮಾಹಿತಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಂಕಿ–ಅಂಶಗಳ ಸಹಿತ ಒದಗಿಸಬೇಕು ಎಂದು ಸೂಚನೆ ನೀಡಿದರು.

ಅರ್ಜುನ ಆನೆ ಸಾವು ಪ್ರಕರಣ

ಅರಣ್ಯಾಧಿಕಾರಿಗಳ ಅಮಾನತುಗೊಳಿಸಿ

ಮೈಸೂರು,ಡಿ.6(ಪಿಎಂ)– ದಸರಾ ಆನೆ ಅರ್ಜುನನ ಸಾವಿನ ಪ್ರಕರಣ ಸಂಬಂಧ ಸತ್ಯಾಸತ್ಯತೆ ಹೊರಬರುವವರೆಗೂ



ಹಾಸನ ಜಿಲ್ಲೆ ಡಿಸಿಎಫ್, ಎಸಿಎಫ್ ಹಾಗೂ ಆರ್‌ಎಫ್‌ಓ ಅವರನ್ನು ಅಮಾನತ್ತಿನಲ್ಲಿಡಬೇಕೆಂದು ಮಾಜಿ ಶಾಸಕ ಎಲ್. ನಾಗೇಂದ್ರಅರ್ಹ್ಯ ಸಚಿವರನ್ನು ಒತ್ತಾಯಿಸಿದ್ದಾರೆ.

ಅರ್ಜುನ ಆನೆ ಸಾವಿನ ಸುತ್ತ ಹಲವು ಅನುಮಾನಗಳಿವೆ. ಆನೆಗಳ ಕಾಳಗದಲ್ಲಿ ಅರ್ಜುನ ಮೃತಪಟ್ಟಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಸತ್ಯ ಹೊರಬರಬೇಕಾದರೆ ಪ್ರಾಮಾಣಿಕವಾಗಿ ತನಿಖೆ ನಡೆಸಬೇಕಿದೆ. ಅರಣ್ಯ ಇಲಾಖೆ ಸಿಬ್ಬಂದಿ ಅಚಾತುರ್ಯದಿಂದ ಆನೆ ಮೃತಪಟ್ಟಿದೆ ಎಂದು ಮಾವುತ ಹೇಳಿಕೆ ನೀಡಿದ್ದು, ವನ್ಯ ಜೀವಿಗಳ ವಿಚಾರದಲ್ಲಿ ಅಧಿಕಾರಿಗಳು ತಮ್ಮಿಷ್ಟದಂತೆ ವರ್ತಿಸುತ್ತಿದ್ದು, ಇದು ಕೊನೆಗೊಳ್ಳಬೇಕಾದರೆ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಪ್ರತಿಪಾದಿಸಿದ್ದಾರೆ.

ಅರ್ಜುನನ ಸಾವಿಗೆ ನ್ಯಾಯ ದೊರಕುವಂತಾಗಬೇಕು. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸಾರ್ವಜನಿಕರ ಜತೆಗೂಡಿ ಪ್ರತಿಭಟನೆ ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ಅವರು ಎಚ್ಚರಿಸಿದ್ದಾರೆ.

ಕೆ.ಆರ್.ನಗರದಲ್ಲಿ ವಕೀಲರ ಪ್ರತಿಭಟನೆ



ಕೆ.ಆರ್.ನಗರ, ಡಿ.6– ಕೇವಲ ಹೆಲ್ಮೆಟ್ ಧರಿಸಿಲ್ಲ ಎಂಬ ಕಾರಣಕ್ಕೆ ಹಲ್ಲೆ ನಡೆಸಿರುವ ಪೊಲೀಸ್ ವಿರುದ್ಧ ಕ್ರಮ ಕೈಗೊಳ್ಳಬೇಕು. ವಕೀಲರಿಗೆ ರಕ್ಷಣೆ ನೀಡಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಹೆಚ್.ಕೆ. ಹರೀಶ್ ಸರ್ಕಾರವನ್ನು ಎಚ್ಚರಿಸಿದರು.

ಪಟ್ಟಣದ ನ್ಯಾಯಾಲಯದ ಕಲಾಪ'ದಿಂದ ಹೊರಗುಳಿದು ಅಧ್ಯಕ್ಷ ಚಂದ್ರಮೌಳಿ ಮತ್ತು ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ಹರೀಶ್ ನೇತೃತ್ವದಲ್ಲಿ ಸಾಂಕೇತಿಕ ಧರಣಿ ನಡೆಸಿ ತಹಸಿಲ್ದಾರ್ ಪೂರ್ಣಿಮಾ ಅವರಿಗೆ ಮನವಿ ಪತ್ರ ಸಲ್ಲಿಸಿ ನಂತರ ಮಾತನಾಡಿದ ಅವರು, ಇತ್ತೀಚೆಗೆ ವಕೀಲರಿಗೆ ರಕ್ಷಣೆ ಇಲ್ಲದಂತಾಗಿದ್ದು ನಿರ್ಭಯದಿಂದ ಕೆಲಸ ಮಾಡಲು ಆಗದಂತಾಗಿದೆ ಆದ್ದರಿಂದ ಸರ್ಕಾರ ಈ ಕೂಡಲೇ ವಕೀಲರಿಗೆ ರಕ್ಷಣಾತ್ಮಕ ಕಾನೂನನ್ನು ಜಾರಿಗೆ ತರುವ ಮೂಲಕ ವಕೀಲರಿಗೆ ರಕ್ಷಣೆ ನೀಡಬೇಕೆಂದು ಒತ್ತಾಯಿಸಿದರು.

ರಕ್ಷಣೆ ನೀಡಬೇಕಾದ ಪೊಲೀಸರು ಹಲ್ಲೆ ನಡೆಸಿದ್ದಲ್ಲದೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ವಿರೋಧಿ ಕೆಲಸ ಮಾಡಿರುವುದು ಖಂಡನೀಯ. ಆದ್ದರಿಂದ ರಾಜ್ಯಪಾಲರು ಮಧ್ಯ ಪ್ರವೇಶ ಮಾಡಿ ಹಲ್ಲೆ ನಡೆಸಿದ ಪೊಲೀಸರನ್ನು ಸೇವೆಯಿಂದ ವಜಾ ಮಾಡುವ ಜೊತೆಗೆ ವಕೀಲರಿಗೆ ರಕ್ಷಣೆ ನೀಡಬೇಕು ಮುಂದೆ ಇನ್ನೆಂದು ಕೂಡ ಇಂತಹ ಕೆಲಸವಾಗದಂತೆ ಎಚ್ಚರಿಕೆ ವಹಿಸುವಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ವಕೀಲರುಗಳೆಲ್ಲರೂ ಒಮ್ಮತದಿಂದ ನ್ಯಾಯ ಬೇಕು ವಕೀಲರಿಗೆ ರಕ್ಷಣೆ ಬೇಕು ಪೊಲೀಸರಿಗೆ ಧಿಕ್ಕಾರ ಎಂಬ ಘೋಷಣೆಗಳನ್ನು ನಡೆಸುವ ಜೊತೆಗೆ ಕೆಲ ಕಾಲ ಧರಣಿ ನಡೆಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ವಕೀಲರ ಸಂಘದ ಅಧ್ಯಕ್ಷ ಚಂದ್ರಮೌಳಿ ಮಾಜಿ ಅಧ್ಯಕ್ಷ ಎಸ್. ಎಸ್. ಗಾಂಧಿ ತಿಮ್ಮೇಗೌಡ, ದಿಲೀಪ್, ಕೆ.ಪಿ.ಮಂಜುನಾಥ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿರಿಯಾ ವಕೀಲರುಗಳಾದ ವಿಜಯ್ ಕುಮಾರ್ ದುರ್ಗೇಶ್ ಪ್ರಸಾದ್ ಎಲ್.ವಿ. ರವಿಶಂಕರ್, ಹರೀಶ್, ಉದಯಶಂಕರ್, ಪ್ರದೀಪ್, ಡಿ.ಆರ್. ರಮೇಶ್, ಸಿ.ಕೆ.ಮಂಜುನಾಥ್, ಪ್ರಭಾವತಿ, ಅಶ್ವಿನ್, ಸುನಿಲ್, ಜಗದೀಶ್, ಸಂದೀಪ್, ಅರುಣ್, ವಿಶ್ವನಾಥ್, ದಿನೇಶ್, ಮಹೇಶ್, ಸತೀಶ್, ಶಿವರಾಜ್, ನಾಗೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಡಾ.ಅಂಬೇಡ್ಕರ್ ಬದುಕಿರುವವರೆಗೂ ಸಂವಿಧಾನದಲ್ಲಿ 'ಜಾತ್ಯಾತೀತ' ಪದ ಸೇರಿಸಲು ಬಿಟ್ಟಿರಲಿಲ್ಲ

● ಮುಕ್ತ ವಿವಿ ಪ್ರಾಧ್ಯಾಪಕ ಡಾ.ಸುಧಾಕರ್ ಹೊಸಳ್ಳಿ ಅಭಿಮತ ● ಅಂಬೇಡ್ಕರ್ ಆರ್‌ಎಸ್‌ಎಸ್ ಬಗ್ಗೆಯೂ ಅಭಿಮಾನ ಹೊಂದಿದ್ದರು; ಹೆಡಗೇವಾರ್ ಜೊತೆಯು ಉತ್ತಮ ಸಂಬಂಧವಿತ್ತು

ಮೈಸೂರು, ಡಿ.6(ಎಸ್‌ಪಿಎನ್)–ಡಾ.ಬಿ.ಆರ್.ಅಂಬೇಡ್ಕರ್ ಅವರು ಜೀವಿತಾವಧಿಯವರೆಗೆ ಸಂವಿಧಾನ ಪರಿವಿಡಿಯಲ್ಲಿ 'ಜಾತ್ಯಾತೀತ' ಪದ ಸೇರಿಸಲು ಬಿಟ್ಟಿರಲಿಲ್ಲ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾಧ್ಯಾಪಕ ಡಾ.ಸುಧಾಕರ್ ಹೊಸಳ್ಳಿ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಮಾಧವಾಕೃಪಾದಲ್ಲಿ ಸಾವರಸ್ಯ ವೇದಿಕೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನದ ಪ್ರಯುಕ್ತ 'ಡಾ.ಬಿ.ಆರ್.ಅಂಬೇಡ್ಕರ್ ರವರ ಅಂತರಂಗದ ಅನಾವರಣ'ದ ವಿಶೇಷ ಉಪನ್ಯಾಸದಲ್ಲಿ ಅವರು ತಿಳಿಸಿದರು. ಜಗತ್ತಿನ ಎಲ್ಲಾ ವಿದ್ಯಮಾನಗಳನ್ನು ಸಂವಿಧಾನ ಕರಡು ಪ್ರತಿಯನ್ನು ರೂಪಿಸಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಅವರು ಉತ್ತಮ ಸಂವಿಧಾನ ರಚಿಸಿ, ಜಗತ್ತಿಗೆ ಮಾದರಿಯಾಗಿದ್ದಾರೆ. ಜಗತ್ತು ಮೆಚ್ಚುವ ಸಂವಿಧಾನ ತಜ್ಞರಲ್ಲಿ ಅವರು ಮೊದಲಿಗರು.

ನಾವು–ನೀವೆಲ್ಲ ಸಂವಿಧಾನ ಶಿಲ್ಪಿ ಎಂದೂ ಪೂಜಿಸಲ್ಪಡುವ ಅಂಬೇಡ್ಕರ್ ಅವರಿಗೆ ಸ್ವತಂತ್ರವಾಗಿ ಸಂವಿಧಾನ ಕರಡು ಪ್ರತಿ ರಚಿಸಲು ಅಂದಿನ ಸರ್ಕಾರ ಅವಕಾಶ ನೀಡಿರಲಿಲ್ಲ. ಅಲ್ಲದೆ, ಅವರಿಗೆ ಲೋಕಸಭೆಯಲ್ಲಿ ತಾವು ರಚಿಸಿದ ಸಂವಿಧಾನ ಕರಡು ಪ್ರತಿಯನ್ನು ಮಂಡಿಸುವ ಅವಕಾಶವನ್ನೂ ಅಂದಿನ ಸರ್ಕಾರ ನಿರಾಕರಿಸಿತ್ತು. ಆದ್ಯಾಗ್ಯೂ ಜಗತ್ತು ಮೆಚ್ಚುವ ಸಂವಿಧಾನ ರಚಿಸಿ, ಇಂದು 140 ಕೋಟಿ ಭಾರತೀಯರ ಹೃದಯದಲ್ಲಿ ಸ್ಥಾನ ಪಡೆದಿದ್ದಾರೆ ಎಂದು ಕೊಂಡಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು,



ತಮ್ಮ ಜೀವಿತ ಅವಧಿಯಲ್ಲಿ 'ಸೆಕ್ಯೂಲರ್' ಎಂಬ ಪದವನ್ನು ಸಂವಿಧಾನ ಪರಿವಿಡಿಯಲ್ಲಿ ಸೇರಿಸಲು ಅವಕಾಶ ನೀಡಿರಲಿಲ್ಲ. ಅವರ ನಿಧನದ ನಂತರ ಸಂವಿಧಾನದ ಪರಿವಿಡಿಯಲ್ಲಿ ತಮಗೆ ಬೇಕಾದಂತೆ, ಓಲೈಕೆ ರಾಜಕಾರಣದ ಅವಶ್ಯಕತೆಗೆ ತಕ್ಕಂತೆ ತಿದ್ದುಪಡಿ ಮಾಡಿದ ಸಂದರ್ಭವನ್ನು ಎಳೆಎಳೆಯಾಗಿ ಬಿಚ್ಚಿಟ್ಟರಲ್ಲದೆ, ಪ್ರಸ್ತುತ ಅಂಬೇಡ್ಕರ್ ಅವರನ್ನು ಹಿಂದುತ್ವವನ್ನು ಬಲವಾಗಿ ವಿರೋಧಿಸುವ ವ್ಯಕ್ತಿ ಎಂದು ಕೆಲವರು ಬಿಂಬಿಸುತ್ತಿದ್ದಾರೆ. ಆದರೆ, ಅವರು ಹಿಂದೂ ಧರ್ಮದಲ್ಲಿನ ಹಲವು ಅಂಶಗಳನ್ನು ಮೆಚ್ಚಿದ್ದಾರೆ. ಸಾಫ್ಟ್ ಹಿಂದುತ್ವವನ್ನು ಸಂವಿಧಾನದಲ್ಲಿ ಅಳವಡಿಸಿರುವ ಬಗ್ಗೆ ಯಾರೂ ಬೆಳಕು ಚೆಲ್ಲುತ್ತಿಲ್ಲ ಯಾಕೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ ವೀರ ಸಾವರ್ಕರ್ ಅವರನ್ನು ಹೇಡಿಯಂತೆ ಬಿಂಬಿಸುತ್ತಿದೆ. ಆದರೆ, ಅಂಬೇಡ್ಕರ್ ಅವರು ಸಾವರ್ಕರ್ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಅದೇ ರೀತಿ ಸಾವರ್ಕರ್ ಪ್ರತಿಪಾದಿಸುತ್ತಿದ್ದ ಹಿಂದುತ್ವದ ತೀವ್ರವಾದವನ್ನೂ ಒಪ್ಪಿಲ್ಲ. ಆದರೆ, ಅವರು ಅನುಸರಿಸಿದ ಕೆಲವು ಒಳ್ಳೆಯ ಅಂಶಗಳ ಬಗ್ಗೆ ಮೆಚ್ಚುಗೆಯ ಮಾತಗಳನ್ನಾಡಿರುವುದೂ ಅಷ್ಟೇ ಸತ್ಯ ಎಂದರು.

ಇತ್ತೀಚೆಗೆ ಆರ್ಯ–ಅನಾರ್ಯ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ, ಅಂಬೇಡ್ಕರ್ ಅವರು,ಸಂವಿಧಾನ ರಚನಾ ಸಂದರ್ಭದಲ್ಲಿ ವೇದ, ರಾಮಾಯಣ, ಮಹಾಭಾರತದ ಉಲ್ಲೇಖಗಳನ್ನು ನೀಡುತ್ತಾ, ಅವರು ಈ ವಾದವನ್ನು ತಿರಸ್ಕರಿಸಿದ್ದಾರೆ. ಆದರೂ ಈ ವಾದವನ್ನು ಎಡಪಂಥೀಯರು ಇಂದಿಗೂ ಜೀವಂತವಾಗಿಸುವ ಕೆಲಸ ಮಾಡುತ್ತಿರುವುದಕ್ಕೆ ಬೇಸರ ಹೊರಹಾಕಿದರು.

ಆರ್‌ಎಸ್‌ಎಸ್ ಬಗ್ಗೆ ಅಂಬೇಡ್ಕರ್ ಅಭಿಮಾನ ಹೊಂದಿದ್ದರು. ಹೆಡಗೇವಾರ್ ಮತ್ತು ಅಂಬೇಡ್ಕರ್ ಅವರ ನಡುವೆ ಉತ್ತಮ ಸಂಬಂಧವಿತ್ತು. ಜಮ್ಮು–ಕಾಶ್ಮೀರಕ್ಕೆ ನೆಹರು ಅವರು ನೀಡಿದ್ದ ಕಲಂ 370, 35ಎ ರದ್ದಾಗಲು ಅಂಬೇಡ್ಕರ್ ಪ್ರತ್ಯೇಕ ಕಲಂ ಸೃಜಿಸಿದ್ದರು. ಹಾಗಾಗಿ ಇಂದಿನ ಕೇಂದ್ರ ಸರ್ಕಾರ ಸುಲಭವಾಗಿ ಅದನ್ನು ರದ್ದುಗೊಳಿಸಲು ಸಾಧ್ಯವಾದ ಅಂಶಗಳನ್ನು ತಿಳಿಸಿಕೊಟ್ಟರು. ಅಂಬೇಡ್ಕರ್ ಒಬ್ಬ ಶ್ರೇಷ್ಠ ಸಂತ. ಮೀಸಲಾತಿಯನ್ನು ಅಲ್ಪಕಾಲ ಉಳಿಸಿಕೊಂಡು ತದನಂತರ ಇದು ಯಾವುದೇ ಕಾರಣಕ್ಕೂ ಇರಬಾರದು ಎಂದು ಪ್ರತಿಪಾದಿಸಿದ್ದರು ಎಂದರು.

ಅಂಗಾಂಗ ದಾನ ಮಾಡಿ ಹಲವರ ಬಾಳಿಗೆ ಬೆಳಕಾದ ಕುಟುಂಬ

ಹ್ಯಾಂಡ್ ಪೋಸ್ಟ್‌ನಲ್ಲಿ ರಂಗಸ್ವಾಮಿಗೆ ನುಡಿನಮನ

ಹೆಚ್.ಡಿ.ಕೋಟೆ, ಡಿ.6– ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ರಂಗಸ್ವಾಮಿ(ಪಾಪಣ್ಣ) ಅವರ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಹಲವರ ಪಾಲಿಗೆ ಬೆಳಕು ನೀಡಿ ನೋವಿನಲ್ಲೂ ಅವರ ಕುಟುಂಬ ಸಾರ್ಥಕತೆ ಮೆರೆದಿದೆ ಎಂದು ಹೆಚ್.ಡಿ. ಕೋಟೆ, ಸರಗೂರು 24 ಮನೆ ತೆಲುಗು ಶೆಟ್ಟರ ಸಂಘದ ತಾಲೂಕು ಅಧ್ಯಕ್ಷ ಆಟೋ ಪಾರ್ಟ್ಸ್ ಮಂಜುನಾಥ್ ತಿಳಿಸಿದರು.

ಪಟ್ಟಣ ಹ್ಯಾಂಡ್‌ಪೋಸ್ಟ್ ಹರೀಶ್ ಟ್ರೇಡರ್ಸ್ ಮಾಲೀಕರು, ವರ್ತಕರ ಸಂಘದ ಮಾಜಿ ಅಧ್ಯಕ್ಷರು, 24 ಮನೆ ತೆಲುಗು ಶೆಟ್ಟರ ಸಮಾಜದ ಹಿರಿಯ ಮುಖಂಡರಾದ ರಂಗಸ್ವಾಮಿ (ಪಾಪಣ್ಣ) ಅವರ ಸ್ವಗ್ರಾಮ ಹೆಬ್ಬಲಗುಪ್ಪೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಬಳಿಕ ಮಾತನಾಡಿದರು.

ರಂಗಸ್ವಾಮಿಯವರು ಹೆಬ್ಬಲಗುಪ್ಪೆ ಗ್ರಾಮದಲ್ಲಿರುವ ತಮ್ಮ ತೋಟದಿಂದ ಹಾಲನ್ನು ಬೈಕಿನಲ್ಲಿ ತರುತ್ತಿದ್ದಾಗ ಹ್ಯಾಂಡ್‌ಪೋಸ್ಟ್‌ನ



ಮನೆ ಬಳಿ ತಿರುವಿನಲ್ಲಿ ಬಿದ್ದು ಅಪಘಾತವಾಗಿ ತಲೆಗೆ ಪೆಟ್ಟಾಗಿತ್ತು. ತಕ್ಷಣ ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ತಕ್ಷಣ ಅವರ ಕುಟುಂಬದವರು ರಂಗಸ್ವಾಮಿಯ ಆಸೆಯನ್ನು ನೆರವೇರಿಸುವ ಮೂಲಕ ಅನೇಕರಿಗೆ ಮರು ಜನ್ಮ ಕಲ್ಪಿಸಿದ್ದಾರೆ ಎಂದರು.

24 ಮನೆ ತೆಲುಗು ಶೆಟ್ಟರ ವಿದ್ಯಾರ್ಥಿ ನಿಲಯದ ರಾಜ್ಯ ಅಧ್ಯಕ್ಷ ಮಂಜುನಾಥ್, ಕೋಟೆ ತಾಲೂಕು ಅಧ್ಯಕ್ಷ ಆಟೋ ಪಾರ್ಟ್ಸ್ ಮಂಜುನಾಥ್, 24 ಮನೆ ತೆಲುಗು ಶೆಟ್ಟರ ನೌಕರರ ಸಂಘದ ಮೈಸೂರು ಜಿಲ್ಲಾ ಅಧ್ಯಕ್ಷ ರಂಗಸ್ವಾಮಿ, ನಂಜನಗೂಡು ತಾಲೂಕು ಅಧ್ಯಕ್ಷ ಕಳಲೆ ಮಾದೇವ್, ವೈದ್ಯರಾದ ಡಾ.ಪ್ರದೀಪ್, ಡಾ.ಪ್ರಶಾಂತ್, ಚಂದನ್, ದಿಲೀಪ್, ಹ್ಯಾಂಡ್ ಪೋಸ್ಟ್ ವರ್ತಕರ ಸಂಘದ ಅಧ್ಯಕ್ಷ ಲಕ್ಷ್ಮೀ ನರಸಿಂಹ, ನರೇಂದ್ರಶೆಟ್ಟಿ, ವೆಂಕಟೇಶ್ ಶೆಟ್ಟಿ, ಇಂದ್ರಶೆಟ್ಟಿ, ಬಿಳಿಕೆರೆ ಸುಂದ್ರೇಶ್, ನಾಗರಾಜಶೆಟ್ಟಿ ಮುರಳಿಶೆಟ್ಟಿ, ಸುಬ್ಬಪ್ಪ ಹೆಬ್ಬಗುಪ್ಪೆ ಶಿವಪ್ಪ ಶೆಟ್ಟಿ, ಮೃತುಂಜಯಶೆಟ್ಟಿ, ಶಿವನಾಗಶೆಟ್ಟಿ, ವೀರಭದ್ರಶೆಟ್ಟರು, ಬಾಸ್ಕರ್ ಶೆಟ್ಟಿ ಕೊಳ್ಳೇಗಾಲದ ವೇಮಕುಟಸ್ವಾಮಿ, ಜನಾಂಗದ ಮುಖಂಡರು ಭಾಗವಹಿಸಿದ್ದರು.

ಮೈಸೂರು ಮಿತ್ರ ಗುರುವಾರ 7 ಡಿಸೆಂಬರ್ 2023

ಅಲ್ಪಸಂಖ್ಯಾತರ ಓಲೈಕೆ ಮಾಡ್ತಿರೋದು ಸರಿಯಲ್ಲ



ಶಿವಮೊಗ್ಗ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಲ್ಪಸಂಖ್ಯಾತರಿಗೆ ಹಣ ಕೊಡಲು ನಮ್ಮ ಅಭ್ಯಂತರ ಇಲ್ಲ. 10 ಸಾವಿರ ಕೋಟಿ ಕೊಡುತ್ತೇನೆ ಎಂದು ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿರುವುದು ಶೋಭೆ ತರುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ತಿಳಿಸಿದರು.

ಶಿವಮೊಗ್ಗದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅಲ್ಪಸಂಖ್ಯಾತರ ಪರ ಹೇಳಿಕೆ ಹಿಂದೂಗಳ ಆಕ್ರೋಶಕ್ಕೆ ಅವಕಾಶ ಆಗುತ್ತದೆ. ಈ ರೀತಿಯ ಮಾತುಗಳನ್ನು ಮುಖ್ಯಮಂತ್ರಿ ಅವರಿಂದ ನಿರೀಕ್ಷೆ ಮಾಡಿರಲಿಲ್ಲ. ಈಗಾಗಲೇ ಅವರ ಹೇಳಿಕೆಯನ್ನು ಮಠಾಧಿಪತಿಗಳು ಸೇರಿದಂತೆ ಎಲ್ಲರೂ ಖಂಡಿಸಿದ್ದಾರೆ. ಏನಾದರೂ ಮಾತನಾಡಬೇಕಾದರೆ ಎಚ್ಚರಿಕೆ ವಹಿಸಿ ಮಾತನಾಡಬೇಕು ಎಂಬುದು ನನ್ನ ಸಲಹೆ ಎಂದರು.

ಲೋಕಸಭೆ ಚುನಾವಣೆಯಲ್ಲಿ ಮೋದಿ ಹೆಸರಿನಲ್ಲಿ ನೂರಕ್ಕೆ ನೂರು ಗೆಲ್ಲುವುದರಲ್ಲಿ ಯಾವುದೇ ಅನುಮಾನ ಬೇಡ. ಓಲೈಕೆ ರಾಜಕಾರಣದಲ್ಲಿ ಗೆಲ್ಲುತ್ತೇವೆ ಎಂಬ ಭ್ರಮೆಯಲ್ಲಿದ್ದರೆ ಅದು ಸಾಧ್ಯವಿಲ್ಲ. ಬಿಜೆಪಿ ಪರವಾದ, ಮೋದಿ ಪರವಾದ ವಾತಾವರಣದಿಂದ ನಾವು ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಗೆಲ್ಲಲು ಪ್ರಯತ್ನಿಸುತ್ತಿದ್ದೇವೆ. ಇದರಲ್ಲಿ ನೂರಕ್ಕೆ ನೂರರಷ್ಟು ಯಶಸ್ವಿಯಾಗುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಜಾಸ್ತಿ ಆಗುತ್ತಿದೆ. ಬಹಳ ಜನ ಇದರಲ್ಲಿ ಭಾಗಿಯಾಗಿದ್ದಾರೆ. ಇದು ಅಕ್ಷಮ್ಯ ಅಪರಾಧ. ಇದು ನಿಲ್ಲಬೇಕು. ಈ ಬಗ್ಗೆ ಏನೇನು ಕಾನೂನು ಕ್ರಮ ಕೈಗೊಳ್ಳಬಹುದೋ ಆ ರೀತಿ ಕ್ರಮ ಕೈಗೊಳ್ಳಬೇಕು ಎಂದರು. ಇನ್ನು ಮಾಜಿ ಸಚಿವ ವಿ. ಸೋಮಣ್ಣ ಅವರು ಯಾವುದೇ ಪಕ್ಷಕ್ಕೆ ಹೋಗುವುದಿಲ್ಲ. ಅವರು ನಮ್ಮ ಜೊತೆಯಲ್ಲೇ ಇರುತ್ತಾರೆ. ನಾನು ಅವರ ಜೊತೆ ಮಾತನಾಡುತ್ತೇನೆ ಎಂದರು.

ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿರುವ ಬಗ್ಗೆ ಈಗಾಗಲೇ ನಮ್ಮ ಮುಖಂಡರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ರಾಜ್ಯ ಸರ್ಕಾರ ಕೇಂದ್ರದ ಕಡೆ ಬೆರಳು ಮಾಡಿ ತೋರಿಸದೇ, ರಾಜ್ಯ ಸರ್ಕಾರದಿಂದ ಯಾವ ಯಾವ ರೀತಿ ಪರಿಹಾರ ಕೊಡಬಹುದೋ ಅದನ್ನು ಮೊದಲು ಕೊಡಲಿ ಎಂದು ಆಗ್ರಹಿಸಿದರು.

ಒಂದನೇ ಪುಟದಿಂದ

ಪ್ರತ್ಯೇಕ ವಿಭಾಗ ಸ್ಥಾಪನೆ

ಬರಪೀಡಿತವೆಂದು ಘೋಷಿಸಲಾಗಿದೆ, 18,200 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೂ ಪತ್ರ ಬರೆಯಲಾಗಿದೆ, ಕೇಂದ್ರದಿಂದ ಇದುವರೆಗೂ ಹಣ ಬಿಡುಗಡೆಯಾಗಿಲ್ಲ.

ರೈತರ ಸಂಕಷ್ಟಕ್ಕೆ ಕೂಡಲೇ ನೆರವಾಗುವಲ್ಲಿ ರಾಜ್ಯ ಸರ್ಕಾರವೇ ಭಾಗಶಃ ಪರಿಹಾರವಾಗಿ ರೈತರಿಗೆ ತಲಾ 2,000 ರೂ. ಪರಿಹಾರ ಘೋಷಿಸಿದೆ. ಈ ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಸಿದ್ಧತೆ ನಡೆಸಲಾಗುತ್ತಿದೆ. ಸಂಕಷ್ಟದಲ್ಲಿರುವ ರೈತರಿಗೆ ಈ ಮೊತ್ತ ಸಾಲದು ಎಂಬ ವಿಚಾರ ನಮಗೂ ಗೊತ್ತಿದೆ, ಜವಾಬ್ದಾರಿಯುತ ಸರ್ಕಾರವಾಗಿ ರೈತರ ಸಂಕಷ್ಟಕ್ಕೆ ಎಲ್ಲಾ ರೀತಿಯಲ್ಲೂ ನೆರವಾಗಲು ಬದ್ಧರಾಗಿದ್ದೇವೆ.

ಕೇಂದ್ರ ಸರ್ಕಾರದ ಪರಿಹಾರ ಹಣ ಬಂದ ಕೂಡಲೇ ಆ ಹಣವನ್ನೂ ನೇರವಾಗಿ ರೈತರ ಖಾತೆಗೆ ವರ್ಗಾಯಿಸಲಾಗುವುದು ಎಂದರು.

20 ಲಕ್ಷ ರೈತರಿಂದ ಬೆಳೆ ವಿಮೆ ನೋಂದಣಿ: ರಾಜ್ಯದಲ್ಲಿ 20 ಲಕ್ಷ ರೈತರು ಬೆಳೆ ವಿಮೆ ಮಾಡಿಸಿದ್ದಾರೆ, ವಿಮಾ ಕಂಪೆನಿಗಳು ಈಗಾಗಲೇ 460 ಕೋಟಿ ರೂ. ಬಿಡುಗಡೆಗೊಳಿಸಿವೆ. ಶೀಘ್ರದಲ್ಲಿ 2,000 ಕೋಟಿ ರೂ. ಬೆಳೆ ವಿಮೆ ಬರಲಿದೆ.

ಇದರ ಜೊತೆಗೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಫಂಡ್‌ನಿಂದಲೂ ಹಣ ಕ್ರೋಢೀಕರಿಸಿ ರೈತರಿಗೆ 4,000 ಕೋಟಿ ರೂ. ವರೆಗೆ ಬರ ಪರಿಹಾರ ನೀಡಲು ಚಿಂತನೆ ನಡೆಸಲಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ನಮಗಿಂತ ಭೀಕರ ಬರ ಇದೆ, 12 ರಾಜ್ಯಗಳಲ್ಲಿ ಮುಂಗಾರು ಅವಧಿಯ ಹಾಗೂ 18 ರಾಜ್ಯಗಳಲ್ಲಿ ಹಿಂಗಾರಿನ ಬರ ಇದೆ. ಕರ್ನಾಟಕದಲ್ಲಿ ಕಳೆದ ಸೆಪ್ಟೆಂಬರ್ 13ರಂದು ಬರ ರಾಜ್ಯವಾಗಿ ಮೊದಲು ಘೋಷಿಸಲಾಯಿತು, ಸೆಪ್ಟೆಂಬರ್ 22ಕ್ಕೆ 18,200 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೆ ಮೊದಲ ಮನವಿ ಸಲ್ಲಿಸಲಾಯಿತು. ಎರಡನೇ ಮನವಿಯನ್ನೂ ಸಲ್ಲಿಸಲಾಗಿದೆ. ಆದರೂ, ಬರ ಪರಿಹಾರದ ಹಣ ಬಂದಿಲ್ಲ ಎಂದು ವಿಷಾಧಿಸಿದರು.

ರಾಜ್ಯಕ್ಕೆ ಬರ ಪರಿಹಾರದ ಹಣ ತರುವ ಹಾಗೂ ಕೇಂದ್ರ ನಾಯಕರಿಗೆ ರಾಜ್ಯದ ಸಮಸ್ಯೆ ಅರ್ಥ ಮಾಡಿಸಲು ಕೇಂದ್ರ ಗೃಹ ಮತ್ತು ಕೃಷಿ ಸಚಿವರ ಭೇಟಿಗೆ ಸಮಯ ಕೋರಿ ಪತ್ರ ಬರೆಯಲಾಗಿತ್ತು. ಆ ಪತ್ರಕ್ಕೆ ಉತ್ತರ ಸಿಗದ ಕಾರಣ ಎರಡೂ ಇಲಾಖೆಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ರಾಜ್ಯದ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಅವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೂ ಈವರೆಗೆ ರಾಜ್ಯಕ್ಕೆ ಪರಿಹಾರ ಮೊತ್ತ ಬಂದಿಲ್ಲ ಎಂದರು.

ಪಶುಗಳಿಗೆ ಮೇವಿನ ಕೊರತೆ ಆಗದಿರಲು 7 ಲಕ್ಷ ಮೇವಿನ ಕಿಟ್‌ಗಳನ್ನು ರೈತರಿಗೆ ಉಚಿತವಾಗಿ ನೀಡಲಾಗಿದೆ. ಪಕ್ಕದ ರಾಜ್ಯಗಳಿಗೆ ಮೇವು ಕಳ್ಳಸಾಗಣೆ ಆಗದಂತೆ ಕ್ರಮ ಜರುಗಿಸಲಾಗಿದೆ. ರಾಜ್ಯದ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದ 24 ಗಂಟೆಗಳಲ್ಲಿ ನೀರು ಪೂರೈಕೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಲಾಗಿದೆ. ಪ್ರಸ್ತುತ 90 ವಸತಿ ಪ್ರದೇಶದಲ್ಲಿ ನೀರಿನ ಸಮಸ್ಯೆ ಕಂಡು ಬಂದಿದ್ದು, 60 ಕಡೆ ಖಾಸಗಿ ಕೊಳವೆಬಾವಿಗಳ ಮೂಲಕ ಹಾಗೂ ಉಳಿದ ಭಾಗಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರರ ಖಾತೆಯಲ್ಲಿ 894 ಕೋಟಿ ರೂ. ಇದ್ದು, ಕುಡಿಯುವ ನೀರಿನ ಪೂರೈಕೆಗೆ ಈ ಮೊತ್ತ ಬಳಸಿಕೊಳ್ಳಲು ಸೂಚಿಸಲಾಗಿದೆ. ಗೋಶಾಲೆಗಳ ಅಗತ್ಯವಿದ್ದರೆ ಅವನ್ನೂ ತೆರೆಯಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಅರ್ಜುನನ ಸಾವಿನ ಸಮಗ್ರ ತನಿಖೆ

ವಿಧಾನಸೌಧದ ಮಂದೆ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರ್ಜುನ ಪ್ರಾಣ ಕಳೆದುಕೊಂಡ ಸ್ಥಳದಲ್ಲಿಯೇ ಸ್ಮಾರಕ ನಿರ್ಮಾಣ ಮಾಡಲಾಗುವುದು. ಜೊತೆಗೆ ಹೆಗ್ಗಡ ದೇವನಕೋಟೆಯಲ್ಲಿಯೂ ಸ್ಮಾರಕ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಭ್ರೂಣ ಹತ್ಯೆ ಸಿಐಡಿ ತನಿಖೆ: ಮಂಡ್ಯ, ಮೈಸೂರು ನಗರಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ವ್ಯಾಪಕವಾಗಿ ನಡೆದಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿ ಅವರು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡುವ ಉದ್ದೇಶದಿಂದ ಸಿಐಡಿ ತನಿಖೆಗೆ ಆದೇಶಿಸಲಾಗಿದೆ.

ರೇವಂತ ರೆಡ್ಡಿ ಆಂಧ್ರ ಸಿಎಂ: ತೆಲಂಗಾಣದಲ್ಲಿ ಕಾಂಗ್ರೆಸ್ ಜನರಿಗೆ ನೀಡಿದ್ದ ಆರು ಗ್ಯಾರಂಟಿಗಳ ಭರವಸೆ ಮೇಲೆ ಮೊದಲ ಬಾರಿಗೆ ಪಕ್ಷ ಅಧಿಕಾರಕ್ಕೆ ಬಂದಿದೆ. ರೇವಂತ ರೆಡ್ಡಿ ನಿಯೋಜಿತ ಮುಖ್ಯಮಂತ್ರಿಯಾಗಿದ್ದು ನಾಳೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಡಿಕೆಶಿ, ಜಮೀರ್ ಅಷ್ಟೇ ಸಂಭ್ರಮದಲ್ಲಿದ್ದಾರೆ: ರಾಜ್ಯದ ಬಹುತೇಕ ಸಚಿವರು ತೆಲಂಗಾಣದಲ್ಲೇ ಉಳಿದಿದ್ದಾರೆ ಎಂಬ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ ಮುಖ್ಯಮಂತ್ರಿ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಮೀರ್ ಅಹಮದ್ ಖಾನ್ ಮಾತ್ರ ಅಲ್ಲಿಯೇ ಉಳಿದಿದ್ದಾರೆ. ನಾವೂ ರಾಜಕೀಯ ಮಾಡಬೇಕು, ಚುನಾವಣಾ ಪ್ರಚಾರಕ್ಕೆ ತೆರಳಿದ್ದ ನಾಗೇಂದ್ರ, ಎನ್.ಎಸ್ ಬೋಸರಾಜ್ ಸೇರಿದಂತೆ ಉಳಿದ ಎಲ್ಲಾ ಸಚಿವರು ಹಿಂತಿರುಗಿ ಸದನದ ಕಲಾಪದಲ್ಲಿ ಪಾಲ್ಗೊಂಡಿದ್ದಾರೆ ಎಂದರು.

ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ

ಕಾರ್ಡ್ ಸೃಜನೆ ಮತ್ತು ವಿತರಣಾ ಗುರಿಯನ್ನು ಹೊಂದಲಾಗಿದೆ. ಯೋಜನೆಯ ಒಟ್ಟು ಅನುದಾನದ ಪಾಲಿನಲ್ಲಿ ರಾಜ್ಯ ಸರ್ಕಾರವು ಶೇ 66 ರಷ್ಟು ನೀಡುತ್ತಿದ್ದರೆ, ಕೇಂದ್ರ ಸರ್ಕಾರವು 34% ನೀಡುತ್ತಿದೆ. ಯೋಜನೆಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಬಡ ಕುಟುಂಬಗಳು ವಾರ್ಷಿಕ 5 ಲಕ್ಷ ಮೌಲ್ಯದ ಚಿಕಿತ್ಸೆಯನ್ನು ಕುಟುಂಬದ ಒಬ್ಬರು ಅಥವಾ ಹಲವರು ಆದ್ಯತೆ ಆಧಾರದ ಮೇಲೆ ಬಳಸಿಕೊಳ್ಳಬಹುದು.

ಎಪಿಎಲ್ ಕುಟುಂಬದವರಿಗೂ ಸಹ ಯೋಜನೆಯಲ್ಲಿ ಅವಕಾಶ ಕಲ್ಪಿಸಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ. ಎಪಿಎಲ್ ಕುಟುಂಬಗಳಿಗೆ 5 ಲಕ್ಷದ ಮೌಲ್ಯದ ಚಿಕಿತ್ಸೆಯಲ್ಲಿ ಗರಿಷ್ಠ ರೂ.1.5 ಲಕ್ಷ ವೆಚ್ಚವನ್ನು ರಾಜ್ಯ ಸರ್ಕಾರ ಪಾವತಿಸಲಿದೆ. ಎಪಿಎಲ್ ಕಾರ್ಡು ದಾರರು ಶೇ.70 ರಷ್ಟು ಚಿಕಿತ್ಸಾ ವೆಚ್ಚವನ್ನು ಪಾವತಿಸಿದರೆ, ಶೇ 30 ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ. ಪ್ರಸ್ತುತ ರಾಜ್ಯದಲ್ಲಿ 3450 ಕ್ಕೂ ಹೆಚ್ಚಿನ ಆರೋಗ್ಯ ಸಂಸ್ಥೆಗಳು"ಆಯುಷ್ಮಾನ್ ಭಾರತ್– ಪ್ರಧಾನ ಮಂತ್ರಿ ಜನಾರೋಗ್ಯ – ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ" ಯೋಜನೆಯಲ್ಲಿ ಸೇವೆ ನೀಡಲು ನೊಂದಾಯಿಸಿಕೊಂಡಿರುತ್ತಾರೆ. ಸುಮಾರು 1650 ಚಿಕಿತ್ಸಾ ಪ್ಯಾಕೇಜ್‌ಗಳು ರಾಜ್ಯದ ಎಲ್ಲಾ ಸಾರ್ವಜನಿಕ ಆಸ್ಪತ್ರೆ ಮತ್ತು 540 ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಾಗಲಿದೆ. 171 ಅತ್ಯಂತ ತುರ್ತು ಚಿಕಿತ್ಸೆಯ ಮತ್ತು ಜೀವ ಉಳಿಸುವ ಪ್ಯಾಕೇಜ್‌ಗಳನ್ನು ಒಳಗೊಂಡಿದೆ. ರಾಜ್ಯದಲ್ಲಿ 1.15 ಕೋಟಿ ಬಿಪಿಎಲ್ ಕುಟುಂಬಗಳಿದ್ದು, ಇದರಲ್ಲಿ 69 ಲಕ್ಷ ಕುಟುಂಬಗಳು 2011 ಸಮೀಕ್ಷೆಯಂತೆ ಬಡತನ ರೇಖೆಗಿಂತ ಕೆಳಗಿವೆ. ಕೇಂದ್ರ ಸರ್ಕಾರ ಈ ಕುಟುಂಬಗಳಿಗೆ 60:40 ಅನುಪಾತದಲ್ಲಿ ಅನುದಾನ ಒದಗಿಸುತ್ತಿದೆ. ರಾಜ್ಯ ಸರ್ಕಾರವು ಉಳಿದ 46 ಲಕ್ಷ ಬಿಪಿಎಲ್ ಹಾಗೂ 19 ಲಕ್ಷ ಎಪಿಲ್ ಕುಟುಂಬಗಳಿಗೆ 100% ಅನುದಾನ ಒದಗಿಸುತ್ತಿದೆ. ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನಾರೋಗ್ಯ ಯೋಜನಾ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ Co-branded ಗುರುತಿನ ಚೀಟಿಗಳಾಗಿದ್ದು, Co-branded ಗುರುತಿನ ಚೀಟಿಗಳನ್ನು ಉಚಿತವಾಗಿ ನೀಡಲಾಗುವುದು.

ಈ ಗುರುತಿನ ಚೀಟಿಗಳನ್ನು ರಾಷ್ಟ್ರೀಯ ಆರೋಗ್ಯ ಐಡಿ (ABHA ID) ಯೊಂದಿಗೆ ಜೋಡಿಸಲಾಗಿರುತ್ತದೆ. ಇದರಿಂದ ಫಲಾನುಭವಿಗಳ ವೈದ್ಯಕೀಯ ದಾಖಲೆಗಳನ್ನು ಸಂರಕ್ಷಿಸಿ ಸುಲಭ ಮತ್ತು ಪರಿಣಾಮಕಾರಿ ಚಿಕಿತ್ಸೆ ನೀಡಲು ನೆರವಾಗುತ್ತದೆ.

ಕಾರ್ಡ್ ಪಡೆಯುವುದೇಗೆ: ಪಡಿತರ ಚೀಟಿಯೊಂದಿಗೆ ಜೋಡಿಸಲಾದ ಮೂಲ ಆಧಾರ್ ಗುರುತಿನ ಚೀಟಿಯ ಸಹಾಯದಿಂದ ಹತ್ತಿರದ ಗ್ರಾಮ–1 ಕೇಂದ್ರಗಳು ಅಥವಾ ನಾಗರೀಕ ಸೇವಾ "ಆಯುಷ್ಮಾನ್ ಭಾರತ್ – ಪ್ರಧಾನ ಮಂತ್ರಿ ಜನಾರೋಗ್ಯ – ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ" ಗುರುತಿನ ಚೀಟಿಗಳನ್ನು ಸುಲಭವಾಗಿ ನೊಂದಾಯಿಸಿ ಪಡೆಯಬಹುದಾಗಿರುತ್ತದೆ.

ಮೈಸೂರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪರಿ ನಿರ್ವಾಣ ದಿನಾಚರಣೆ



ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಡಳಿತದ ವತಿಯಿಂದ ಡಿಸಿ ಡಾ.ಕೆ.ವಿ.ರಾಜೇಂದ್ರ ಮಾಲಾರ್ಪಣೆ ಮಾಡಿ ಪರಿ ನಿರ್ವಾಣದ ದಿನದ ಗೌರವ ಸಮರ್ಪಿಸಿದರು.



ಪರಿ ನಿರ್ವಾಣ ದಿನದ ಅಂಗವಾಗಿ ಬುದ್ಧನ ವಿಗ್ರಹಕ್ಕೆ ತಿ.ನರಸೀಪುರದ ಬೋಧಿರತ್ನ ರತ್ನ ಬಂತೇಜಿ, ಮೈಸೂರಿನ ಕಲ್ಯಾಣ ಸಿರಿ ಬಂತೇಜಿ ಮುಖಂಡರೊಂದಿಗೆ ಪುಷ್ಪ ನಮನ ಸಲ್ಲಿಸಿ ಬುದ್ಧ, ಧಮ್ಮ ಸಂಘ ವಂದನೆ ಸಲ್ಲಿಸಿದರು.

ಮೈಸೂರು,ಡಿ.6(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿ ನಿರ್ವಾಣ ದಿನವನ್ನು ಮೈಸೂರು ಜಿಲ್ಲಾಡಳಿತದ ವತಿಯಿಂದ ಶ್ರದ್ಧಾಭಕ್ತಿ ಹಾಗೂ ಗೌರವಯುತವಾಗಿ ಆಚರಿಸಲಾಯಿತು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಬುಧವಾರ ಜಿಲ್ಲಾಡಳಿತ, ಜಿ.ಪಂ, ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ವರ್ಷದ ಪರಿ ನಿರ್ವಾಣ ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಎಸ್ಪಿ ಸೀಮಾ ಲಾಟ್ಕರ್, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಭಂತೇಜಿಗಳಾದ ಬೋಧಿರತ್ನ ರತ್ನ ಭಂತೇಜಿ, ಕಲ್ಯಾಣ ಸಿರಿ ಭಂತೇಜಿ, ಮಾಜಿ ಮೇಯರ್ ಪುರುಷೋತ್ತಮ, ಕೆ.ಆರ್.ಬ್ಯಾಂಕ್ ಮಾಜಿ ಅಧ್ಯಕ್ಷ ವಾಸು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿದರು.

ಈ ವೇಳೆ ಪೊಲೀಸ್ ಬ್ಯಾಂಡ್ ವಾದನ ತಂಡ ಬ್ಯಾಂಡ್ ವಾದನ ನುಡಿಸಿ ಗೌರವ ವಂದನೆ ಸಲ್ಲಿಸಿತು. ಈ ಸಂದರ್ಭದಲ್ಲಿ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಉಪ ಕಾರ್ಯದರ್ಶಿ ಎಂ.ಕೃಷ್ಣರಾಜು, ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ಜಿ.ಎಸ್.ಸೋಮಶೇಖರ್, ಎಂ.ರೂಪಾ, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ಮುಡಾ ನಗರ ಯೋಜನೆ ಸದಸ್ಯ ಆರ್.ಶೇಷ, ಡಿಸಿಪಿ ಎಸ್.ಜಾನವಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಪರಿಶಿಷ್ಟ ವರ್ಗಗಳ ಕಲ್ಯಾಣ ಯೋಜನಾಧಿಕಾರಿ ಎಂ. ಮುನಿರಾಜು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪಿ.ಎಸ್.ಕುಮಾರಸ್ವಾಮಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಗರ ಪಾಲಿಕೆ ವಲಯ ಆಯುಕ್ತರಾದ ದೀಪ್ತಿ, ಅಭಿವೃದ್ಧಿ ಅಧಿಕಾರಿ ಸೋಮಶೇಖರ, ಎಸಿಪಿ ಶಾಂತಮಲ್ಲಪ್ಪ, ಕಾಂಗ್ರೆಸ್ ಮುಖಂಡ ರಾಜು, ಮುಖಂಡರಾದ ಪುಟ್ಟಸ್ವಾಮಿ,ರಾಜಣ್ಣ, ಸೋಮಯ್ಯ ಮಲೆಯೂರು ಸೇರಿದಂತೆ ಇನ್ನಿತರರು ಪುಷ್ಪನಮನ ಸಲ್ಲಿಸಿದರು.

ಸಂಘ ವಂದನೆ ಸಮರ್ಪಣೆ: ಡಾ. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಅಂಬೇಡ್ಕರ್ ಪ್ರತಿಮೆ ಪಕ್ಕದ ಉದ್ಯಾನದಲ್ಲಿ ಪ್ರಾರ್ಥನಾ ಸಭೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಬುದ್ಧನ ವಿಗ್ರಹದ ಮುಂದೆ ತಿ.ನರಸೀಪುರದ ಬೋಧಿರತ್ನ ರತ್ನ ಭಂತೇಜಿ, ಮೈಸೂರಿನ ಕಲ್ಯಾಣ ಸಿರಿ ಭಂತೇಜಿ ಅವರಿಂದ ಬುದ್ಧ, ಧಮ್ಮ ಸಂಘ ವಂದನೆ ಸಲ್ಲಿಸಲಾಯಿತು. ಅಮ್ಮ ರಾಮಚಂದ್ರ ತಂಡದಿಂದ ಬುದ್ಧ ಗೀತೆಗಳನ್ನು ಹಾಕಲಾಯಿತು.

ಈ ವೇಳೆ ಬೋಧಿ ರತ್ನ ಭಂತೇಜಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಆಶಯಗಳಂತೆ ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು ಸಿಗಬೇಕು. ಜ್ಞಾನಕ್ಕೆ ಶರಣಾಗಬೇಕು. ಮೋಸ, ಜೀವಹತ್ಯೆ, ಕಳ್ಳತನ ಮಾಡಲ್ಲ. ಮಾದಕ ವಸ್ತುಗಳನ್ನು ಬಳಸಲ್ಲ. ಸುಳ್ಳು ಹೇಳಲ್ಲ. ಮಹಾಮಾರ್ಗವನ್ನು ಅನುಸರಿಸಿ ಅದೇ ದಾರಿಯಲ್ಲಿ ಸಾಗಬೇಕು. ದೇಶದಲ್ಲಿ ಜಾತಿ ವಿನಾಶವಾಗಿ ಸಮಾನತೆ ಬರಬೇಕು. ಅಸ್ಪೃಶ್ಯತೆ ತೊಲಗಿಸಿದರೆ ಭಾರತ ವಿಶ್ವಗುರುವಾಗಲಿದೆ. ಬುದ್ಧ ಮತ್ತು ಅಂಬೇಡ್ಕರ್ ಚಿಂತನೆಗಳು ಪ್ರಭುತ್ವದ ಆಶಯವಾಗಿದೆ ಎಂದರು.

ತಂಡೋಪತಂಡವಾಗಿ ಆಗಮಿಸಿ ಮಾಲಾರ್ಪಣೆ: ಅಂಬೇಡ್ಕರ್ ಪರಿನಿರ್ವಾಣ ಅಂಗವಾಗಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಂಘಟನೆಗಳ ಪದಾಧಿಕಾರಿಗಳು, ಅಭಿಮಾನಿಗಳು ಪ್ರತ್ಯೇಕವಾಗಿ ಆಗಮಿಸಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಸಮಾಜ ಕಲ್ಯಾಣ ಇಲಾಖೆಯ ವಾರ್ಡನ್‌ಗಳು, ವಿವಿಧ ಹಾಸ್ಟೆಲ್ ವಿದ್ಯಾರ್ಥಿಗಳ ತಂಡ, ಡಿ ಗ್ರೂಪ್ ನೌಕರರು ಸೇರಿದಂತೆ ಅನೇಕರು ಮಾಲಾರ್ಪಣೆಮಾಡಿದರು.

ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ 10 ಬಿಜೆಪಿ ಸಂಸದರಿಂದ ರಾಜೀನಾಮೆ

ನವದೆಹಲಿ: ಇತ್ತೀಚಿಗೆ ನಡೆದ ಹಿಂದಿಯ ಹೃದಯಭಾಗದ ಮೂರು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ್ದು, ಈ ಚುನಾವಣೆಯಲ್ಲಿ ಕೇಸರಿ ಪಕ್ಷದಿಂದ ಕಣಕ್ಕಿಳಿದು ಗೆಲುವು ಸಾಧಿಸಿದ ಸಂಸದರು ಬುಧವಾರ ಸಂಸತ್ತಿಗೆ ರಾಜೀನಾಮೆ ನೀಡಿದ್ದಾರೆ. ಸದ್ಯಕ್ಕೆ ಒಟ್ಟು 10 ಸಂಸದರು ರಾಜೀನಾಮೆ ನೀಡಿದ್ದಾರೆ. ಮತ್ತಿಬ್ಬರು ಸಂಸದರಾದ ಬಾಬಾ ಬಾಲಕನಾಥ್ ಮತ್ತು ರೇಣುಕಾ ಸಿಂಗ್ ಇಂದು ಸದನಕ್ಕೆಬಂದಿರಲಿಲ್ಲ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದ ಸಂಸದರ ನಿಯೋಗ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದೆ.

ಪಕ್ಷದ ಅಧ್ಯಕ್ಷ ಜೆಪಿ ನಡ್ಡಾ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಸಭೆಯ ನಂತರ 10 ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಧ್ಯಪ್ರದೇಶದ ನರಸಿಂಗ್‌ಪುರ ವಿಧಾನ ಸಭಾ ಕ್ಷೇತ್ರದಿಂದ ಗೆದ್ದಿರುವ ಬಿಜೆಪಿ ನಾಯಕ ಪ್ರಹ್ಲಾದ್ ಸಿಂಗ್ ಪಟೇಲ್, ನಾನು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಮತ್ತು ಶೀಘ್ರದಲ್ಲೇ ಕೇಂದ್ರ ಸಚಿವ ಸ್ಥಾನಕ್ಕೂ ರಾಜೀನಾಮೆ ನೀಡುತ್ತೇನೆ ಎಂದು ಎಎನ್‌ಐಗೆ ತಿಳಿಸಿದ್ದಾರೆ.

ಮಾಜಿ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಭಾರತದ ಆಹಾರ ಸಂಸ್ಕರಣಾ ಕೈಗಾರಿಕೆಗಳ ರಾಜ್ಯ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್, ಲೋಕಸಭಾ ಸಂಸದರಾದ ರಾಕೇಶ್ ಸಿಂಗ್, ಉದಯ್ ಪ್ರತಾಪ್ ಮತ್ತು ರಿತಿ ಪಾಠಕ್ ಅವರು ಮಧ್ಯ ಪ್ರದೇಶ ಶಾಸಕರಾಗಿ ಆಯ್ಕೆಯಾದ ನಂತರ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಗೌತಮ ಬುದ್ಧನ ನಂತರ ಬೋಧಿಸತ್ವ ಗೌರವಕ್ಕೆ ಭಾಜನರಾದವರು ಡಾ.ಬಿ.ಆರ್.ಅಂಬೇಡ್ಕರ್

ನಳಂದ ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯದರ್ಶಿ ಭಂತೇ ಬೋಧಿದತ್ತ ಅಭಿಮತ

ಮೈಸೂರು,ಡಿ.6(ಎಂಟಿವೈ)– ಗೌತಮ ಬುದ್ಧನ ನಂತರ ಆಧುನಿಕ ಯುಗದಲ್ಲಿ ಪರಮಪೂಜ್ಯ ಬೋಧಿಸತ್ವ ಗೌರವಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಭಾಜನರಾಗಿದ್ದಾರೆ ಎಂದು ಚಾಮರಾಜನಗರದ ನಳಂದ ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯದರ್ಶಿ ಭಂತೇ ಬೋಧಿದತ್ತ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಆಯೋಜಿಸಿದ್ದ 67ನೇ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನ ಪರ್ಯಂತ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ತ್ಯಾಗ ಮಾಡಿ ಧಮ್ಮದ ಮಾರ್ಗದಲ್ಲಿ ಸಾಗುವವರಿಗೆ ಬೋಧಿಸತ್ವ ನೀಡಿ ಗೌರವಿಸಲಾಗುತ್ತದೆ. ಅನಾರೋಗ್ಯದ ನಡುವೆಯೂ ಜನರ ಒತ್ತಾಯಕ್ಕೆ ಮಣಿದು 1954ರಲ್ಲಿ ನೇಪಾಳದ ಕಠ್ಮಂಡುವಿನಲ್ಲಿ ನಡೆದ ಬೌದ್ಧ ಬಿಕ್ಕುಗಳ ಸಮಾವೇಶಕ್ಕೆ ಸಾವಿರಾರು ಬೆಂಬಲಿಗರೊಂದಿಗೆ ಬಂದ ಡಾ.ಅಂಬೇಡ್ಕರ್ ಅವರನ್ನು ಬೌದ್ಧ ಬಿಕ್ಕುಗಳು ಬೋಧಿಸತ್ವವೆಂದು ಘೋಷಿಸಿ ಗೌರವಿಸಿದರು. ಗೌತಮ ಬುದ್ಧನ ನಂತರ 2500 ವರ್ಷಗಳ ಬಳಿಕ ಡಾ.ಅಂಬೇಡ್ಕರ್ ಬೋಧಿಸತ್ವ ಸ್ವೀಕರಿಸಿದ ಮಹಾನ್ ನಾಯಕರಾಗಿದ್ದಾರೆ ಎಂದರು.

ಡಾ.ಅಂಬೇಡ್ಕರ್ ಅವರು ಮೇಣದ ಬತ್ತಿಯಂತೆ ತಾನು ಉರಿದು ಬೇರೆಯವರಿಗೆ ಬೆಳಕು ನೀಡಿದ ಮಹಾನ್ ಚೇತನ. ಅಪರಿಮಿತ ಪರಿಶ್ರಮದಿಂದ ಸಂಪಾದಿಸಿದ ವಿದ್ವತ್ತಿನ ಸಾಸಿವೆ ಕಾಳಿನಷ್ಟು ಗಾತ್ರದ ಅನುಕೂಲವನ್ನೂ ಅವರು ಪಡೆದುಕೊಳ್ಳಲಿಲ್ಲ. ಮೂವರು ಮಕ್ಕಳು ಮೃತಪಟ್ಟಾಗ ಮನೆಗೆ ಹೋಗಲಿಲ್ಲ. ಪತ್ನಿಗೆ ಸವಲತ್ತು ಕೊಡಲಾಗದಿದ್ದರೂ ಇಡೀ ಸಮಾಜದ ರಕ್ಷಣೆಗೆ ದುಡಿದರು. ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾನಿಲಯ ಹೆಚ್ಚು ಓದಿರುವ 100 ವಿದ್ಯಾರ್ಥಿಗಳನ್ನು ಪಟ್ಟಿ ಮಾಡಿತ್ತು. ಆ ಪಟ್ಟಿಯಲ್ಲಿ ವಿವಿಧ ರಾಷ್ಟ್ರಗಳ ಅಧ್ಯಕ್ಷರು, ವಿಜ್ಞಾನಿಗಳು, ವಿದ್ವಾಂಸರು ಸೇರಿದ್ದರು. ಆದರೆ ಅವರೆಲ್ಲರಿಗಿಂತ ಡಾ.ಅಂಬೇಡ್ಕರ್ ಮೊದಲನೇ ಸ್ಥಾನ ಪಡೆದಿದ್ದರು. ಮಹಿಳೆಯರಿಗೆ ನ್ಯಾಯ ಸಿಗಲಿಲ್ಲ ಎಂಬ ಕಾರಣಕ್ಕೆ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಪ್ರಪ್ರಥಮ ಮತ್ತು ಕೊನೆಯ ಮಂತ್ರಿ ಅಂಬೇಡ್ಕರ್ ಆಗಿದ್ದಾರೆ ಎಂದು ಹೇಳಿದರು.

ನಾವೆಲ್ಲರೂ ಶಾಂತಿ, ನೆಮದಿಯಿಂದ ಸುಖವಾಗಿರುವುದಕ್ಕೆ ಸಂವಿಧಾನ ಕಾರಣ. ಆ ಸಂವಿಧಾನವನ್ನು ಕಾಪಾಡಿ ಬೆಳೆಸುವ ಜವಾಬ್ದಾರಿ ನಮೆಲ್ಲರ ಮೇಲಿದೆ. ಸಹೋದರತೆ, ಭ್ರಾತೃತ್ವವನ್ನು ಅನುಷ್ಠಾನಗೊಳಿಸಿದರೆ ಭಾರತ ಮುಂದೊಂದು ದಿನ ಜಾತಿ ವ್ಯವಸ್ಥೆ, ತಾರತಮ್ಯವಿಲ್ಲದ ದೇಶವಾಗಿ ಮಾರ್ಪಾಡಾಗಲಿದೆ. ಈ ಆಶಯಕ್ಕೆ ನಾವೆಲ್ಲರೂ ಶ್ರಮಿಸಬೇಕು. ಡಾ.ಅಂಬೇಡ್ಕರ್ ಅವರು ಕಾಲವಾಗುವ ಮುನ್ನ ದುಃಖಿತರಾಗಿ ಕಣ್ಣೀರಿಟ್ಟಿದರು. ನನ್ನ ಪರಿಶ್ರಮದ ಫಲವನ್ನು ಅನುಭವಿಸಿ ನೌಕರಿ ಪಡೆದವರು ತಮ್ಮ ಗ್ರಾಮಗಳಿಗೆ ಹೋಗಿ, ಅಲ್ಲಿನ ಸಂಕಷ್ಟದಲ್ಲಿದ್ದ ಸಹೋದರರಿಗೆ ನೆರವಾಗಿ, ಅವರ ಬೆಳವಣಿಗೆ ಸಹಕರಿಸದೇ ಸ್ವಾರ್ಥಿಗಳಾದರೂ ಎಂದು ದುಃಖಿಸಿದ್ದರು. ಅವರು ಮುನ್ನಡೆಸಿದ ಪರಿವರ್ತನ ರಥವನ್ನು ಮುನ್ನಡೆಸಲು ಎದೆಕೊಟ್ಟು ನಿಲ್ಲುವ ಒಬ್ಬ ನಾಯಕರೂ ಇಲ್ಲದಿರುವುದು ಅವರ ಕಣ್ಣೀರಿಗೆ ಕಾರಣವಾಗಿತ್ತು. ಡಾ.ಅಂಬೇಡ್ಕರ್ ಮೃತ ದೇಹವನ್ನು ಮುಂಬೈಗೆ ತರುವಷ್ಟು ಹಣವಿಲ್ಲದಷ್ಟು ಬಡತನ ಅವರಿಗಿತ್ತು. ಮುಂಬೈನಲ್ಲಿ 5 ಲಕ್ಷ ಜನರು ಅವರ ಅಂತಿಮ ದರ್ಶನ ಪಡೆದ ದಾಖಲೆ ಇದೆ. 193 ರಾಷ್ಟ್ರಗಳು ತಮ ಧ್ವಜವನ್ನು ಅರ್ಧ ಕೆಳಗಿಳಿಸಿ ಗೌರವ ಸಲ್ಲಿಸಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಮಾಜಿ ಸಂಸದ ಕಾಗಲವಾಡಿ ಎಂ. ಶಿವಣ್ಣ, ಮಾಜಿ ಮೇಯರ್ ಮೋದಾಮಣಿ, ಮುಖಂಡರಾದ ಎಂ. ಶಿವಣ್ಣ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾಲತಾ ಚಿಕ್ಕಣ್ಣ, ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮುಖಂಡರಾದ ಡಾ.ಸುಶ್ರುತ್‌ಗೌಡ, ಜೆ.ಜೆ. ಆನಂದ್, ಶಿವಪ್ರಸಾದ್, ಈಶ್ವರ್ ಚಕ್ಕಡಿ, ಬಿ.ಸಿ. ನಾಗೇಶ್, ಜೆ.ಜೆ.ಆನಂದ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮೇಲೆ ಹಲ್ಲೆ ಪ್ರಕರಣ

ಇಂಡಲಗುಪ್ಪೆ ಕೃಷ್ಣೇಗೌಡರ ಗಡಿಪಾರಿಗೆ ಆಗ್ರಹಿಸಿ ರೈತರ ಪ್ರತಿಭಟನೆ



ಮೈಸೂರು, ಡಿ.6–ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರ ಮೇಲೆ ಮಂಡ್ಯದಲ್ಲಿ ಹಲ್ಲೆ ನಡೆಸಿದ ಇಂಡಲಗುಪ್ಪೆ ಕೃಷ್ಣೇಗೌಡ ಅವರನ್ನು ಗಡೀಪಾರು ಮಾಡಬೇಕು ಎಂದು ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟಿಸಿದರು.

ಕೃಷ್ಣೇಗೌಡ ನಕಲಿ ಹೋರಾಟಗಾರರಾಗಿದ್ದು, ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿ ಯಾಗಿದ್ದಾರೆ. ಅವರ ವಿರುದ್ಧ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಇವರು ತಮ್ಮ ಹಗರಣಗಳಿಂದ ರಕ್ಷಣೆ ಪಡೆಯುವ ಸಲುವಾಗಿ ರೈತ ಸಂಘದ ಅಧ್ಯಕ್ಷ ರೆಂದು ಹೇಳಿಕೊಂಡು ಓಡಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೃಷ್ಣೇಗೌಡ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬಡಗಲಪುರ ನಾಗೇಂದ್ರ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ ಕಚೇರಿ ಹಾಗೂ ಡಿಜಿಪಿ ಅವರಿಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಪೊಲೀಸರು ಕ್ರಮ ಕೈಗೊಂಡ ಕಾರಣ ಬಡಗಲಪುರ ನಾಗೇಂದ್ರ ವಿರುದ್ಧ ಕೃಷ್ಣೇಗೌಡ ಹಾಗೂ ಅವರ ಬೆಂಬಲಿಗರು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾರೆ. ಹೀಗಾಗಿ ನಕಲಿ ರೈತ ಹೋರಾಟಗಾರರಾದ ಕೃಷ್ಣೇಗೌಡ ಮತ್ತು ಅವರ ಬೆಂಬಲಿಗರನ್ನು ಗಡೀಪಾರು ಮಾಡುವಂತೆ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಿಗೆ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಪ್ರತಿಭಟನಾಕಾರರು ಮನವಿ ಸಲ್ಲಿಸಿದ್ದಾರೆ. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಂಡ್ಯ ಜಿಲ್ಲಾಧ್ಯಕ್ಷ ಕೆಂಪೂಗೌಡ, ಕೊಡಗು ಜಿಲ್ಲಾಧ್ಯಕ್ಷ ಮನು ಸೋಮಯ್ಯ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ರೈತ ಯುವ ಮುಖಂಡ ಪ್ರಸನ್ನ ಎನ್.ಗೌಡ ಇತರರಿದ್ದರು.

ನಾಳೆ ಮೈಸೂರಿನ ಹಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು,ಡಿ.6(ಪಿಎಂ)–ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬೆಳಗೊಳ 8.00 ಎಂಜಿಡಿ ಯಂತ್ರಾಗಾರದಲ್ಲಿ ಡಿ.8ರಂದು ತುರ್ತು ಕಾಮಗಾರಿ ಕೈಗೆತ್ತಿಕೊಳ್ಳುವ ಕಾರಣ ಅಂದು ಮೈಸೂರು ನಗರದ ಹಲವೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ,ಬಿ,ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇ ಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ ಪ್ರದೇಶ, ನಜರ್‌ಬಾದ್, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ 8, 17, 18, 19, 23ರಿಂದ 27ರವರೆಗೆ, 40, 41, 55, 60, 61, 62 ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ಅಂದು ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಮುಂಜಾಗ್ರತಾ ಕ್ರಮವಾಗಿ ನೀರನ್ನು ಸಂಗ್ರಹ ಮಾಡಿಕೊಂಡು ನಗರಪಾಲಿಕೆಯೊಂದಿಗೆ ಸಹಕರಿಸಬೇಕೆಂದು ಪಾಲಿಕೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಅಂಬೇಡ್ಕರ್ ಬರಹದಿಂದ ರಾಷ್ಟ್ರ ಅಭಿವೃದ್ಧಿ

● ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಭಿಮತ ● ಮಡಿಕೇರಿಯಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ



ಮಡಿಕೇರಿ, ಡಿ.6–ಡಾ.ಬಿ.ಆರ್. ಅಂಬೇಡ್ಕರ್ ಅವರ ಬರಹ ಮತ್ತು ಭಾಷಣ ಗಳಿಂದ ಭವಿಷ್ಯದಲ್ಲಿ ರಾಷ್ಟ್ರವನ್ನು ಯಾವ ರೀತಿ ಅಭಿವೃದ್ಧಿಯತ್ತ ಕೊಂಡೊಯ್ಯ ಬಹುದು ಎಂಬುದನ್ನು ತಿಳಿಯಬಹುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನಾಚರಣೆ ಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ದೂರ ದೃಷ್ಟಿಯ ಚಿಂತನೆಗಳು ಇಂದಿಗೂ ಪ್ರಸ್ತುತ. ಅವರು ರಾಷ್ಟ್ರಕ್ಕೆ ನೀಡಿರುವ ಕೊಡುಗೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಅಂಬೇಡ್ಕರ್ ಅವರ ಅಧ್ಯಯನಶೀಲತೆ, ಚಲನಶೀಲತೆ ಮತ್ತು ಕ್ರಿಯಾಶೀಲತೆಯ ಸ್ವಲ್ಪವನ್ನಾದರೂ ಅನುಸರಿಸಿದರೆ ಪ್ರತಿಯೊಬ್ಬರೂ ಬದಲಾವಣೆ ಕಾಣಬಹುದು. ಆ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಪುಸ್ತಕಗಳನ್ನು ಅಧ್ಯಯನ ಮಾಡಬೇಕು ಎಂದು ತಿಳಿಸಿದರು. ಅಂಬೇಡ್ಕರ್ ಅವರು ಇಡೀ ವಿಶ್ವದ ಜ್ಞಾನಿಯಾಗಿದ್ದಾರೆ. ಆಕ್ಸ್‌ಫರ್ಡ್ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ಅಧ್ಯಯನ ಕೇಂದ್ರ ಆರಂಭಿಸಿರುವುದು ಅವರ ವ್ಯಕ್ತಿತ್ವವನ್ನು ತಿಳಿಸುತ್ತದೆ. ಅಂತಹ ಮಹಾನ್ ಜ್ಞಾನಿಯ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಪದವಿ, ಸ್ನಾತಕೋತ್ತರ ಪದವಿ, ಡಿ.ಲಿಟ್, ಪಿಎಚ್‌ಡಿ ಹೀಗೆ ಹಲವು ಪದವಿ ಪಡೆದು ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳ ಬಗ್ಗೆ ಅಧ್ಯಯನ ಮಾಡಿ ರಾಷ್ಟ್ರದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಶಿಕ್ಷಣದಿಂದ ಮಾತ್ರ ಬದಲಾವಣೆ ಸಾಧ್ಯ ಎಂಬುದನ್ನು ಅಂಬೇಡ್ಕರ್ ಅವರು ಒತ್ತಿ ಹೇಳಿದ್ದಾರೆ ಎಂದು ಸ್ಮರಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಮಾತನಾಡಿ, ಸಮಾನತೆಯ ಸಮಾಜ ನಿರ್ಮಾಣಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ. ಶೋಷಿತ ಸಮಾಜಗಳು ಇತರರಂತೆ ಬದುಕು ಕಟ್ಟಿಕೊಳ್ಳಲು ಹಾಗೂ ಸಂವಿಧಾನ ರಚಿಸುವಲ್ಲಿ ಹಗಲಿರುಳು ಶ್ರಮಿಸಿದ್ದಾರೆ. ದೇಶದ ಎಲ್ಲಾ ವರ್ಗದ ಕಟ್ಟಕಡೆಯ ಜನರಿಗೂ ಸಂವಿಧಾನದ ಸೌಲಭ್ಯಗಳು ತಲುಪಲು ಹಾಗೂ ಅವರ ಆರ್ಥಿಕ ಚಿಂತನೆಯ ಫಲವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಕಾರಣೀಭೂತರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಒ ವರ್ಣಿತ್ ನೇಗಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್, ಬಿಸಿಎಂ ಇಲಾಖೆ ಅಧಿಕಾರಿ ಎನ್.ಮಂಜುನಾಥ್, ಐಟಿಡಿಪಿ ಅಧಿಕಾರಿ ಎಸ್.ಹೊನ್ನೇಗೌಡ, ಜಿಲ್ಲಾ ಖಜಾನೆ ಅಧಿಕಾರಿ ಬಿ.ಎನ್.ರಘುನಾಥ್, ಪೌರಾಯುಕ್ತ ವಿಜಯ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಟ್ಟರಾಜು, ತಹಸೀಲ್ದಾರ್ ಪ್ರವೀಣ್ ಕುಮಾರ್, ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ಅರಣ್ಯ ಉಪಸಂರಕ್ಷಣಾಧಿಕಾರಿ ಶರಣಬಸಪ್ಪ, ಲೋಕೋಪಯೋಗಿ ಇಲಾಖೆಯ ಇಇ ಸಿದ್ದೇಗೌಡ, ಜಿಲ್ಲಾ ನೋಂದಣಾಧಿಕಾರಿ ಸಿದ್ದೇಶ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ನಾರಾಯಣ, ಪಶುಪಾಲನೆ ಇಲಾಖೆಯ ಉಪ ನಿರ್ದೇಶಕ ಲಿಂಗರಾಜು ದೊಡ್ಡಮನಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಬಸವರಾಜ, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಸಣ್ಣ ನೀರಾವರಿ ಇಲಾಖೆಯ ಎಇಇ ಕುಮಾರಸ್ವಾಮಿ, ಅಲ್ಪಸಂಖ್ಯಾತರ ಇಲಾಖೆ ಅಧಿಕಾರಿ ದಿವಾಕರ, ಸಹಕಾರ ಇಲಾಖೆಯ ಉಪನಿಬಂಧಕ ಕೃಷ್ಣಪ್ರಸಾದ್ ಹಾಜರಿದ್ದರು.

ಇಂದು, ನಾಳೆ ದೈವಗಳ ನೇಮೋತ್ಸವ

ಮಡಿಕೇರಿ, ಡಿ.6– ಉಡೋತ್ ಮೊಟ್ಟೆಯ ಶ್ರೀ ಕೊರಗಜ್ಜಸ್ವಾಮಿ ಸಾನಿಧ್ಯದಲ್ಲಿ ಡಿ.7 ಮತ್ತು 8ರಂದು ಕೊರಗಜ್ಜ ಹಾಗೂ ಪರಿವಾರ ಸತ್ಯ ದೈವಗಳ ನೇಮೋತ್ಸವ ಜರುಗಲಿದೆ.

ಡಿ.7ರಂದು ಬೆಳಗ್ಗೆ 7.30 ಗಂಟೆಗೆ ಗಣಪತಿ ಹೋಮ ಮತ್ತು ಪ್ರಸಾದ ವಿತರಣೆ ನಡೆಯಲಿದ್ದು, ಸಂಜೆ 5 ಗಂಟೆಗೆ ದೈವಗಳ ಭಂಡಾರ ಇಳಿಸಲಾಗುವುದು. ಡಿ.8ರ ಸಂಜೆ ವರೆಗೆ ಮಂತ್ರವಾದಿ ಗುಳಿಗ, ಕಲ್ಲುರ್ಟಿ ದೈವ, ಧರ್ಮ ದೈವ, ಪಂಜುರ್ಲಿ ದೈವ ಹಾಗೂ ಕೊರಗಜ್ಜ ದೈವದ ನೇಮೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ದಸಂಸ ಕಾರ್ಯಕರ್ತರ ಉಪವಾಸ ಸತ್ಯಾಗ್ರಹ



ಗೋಣಿಕೊಪ್ಪ, ಡಿ.6–ಹೈಸೊಡ್ಲೂರು ಗ್ರಾಮದ ಆದಿವಾಸಿಗಳಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಬುಧವಾರ ಪೊನ್ನಂಪೇಟೆಯ ತಹಸೀಲ್ದಾರ್ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸಿದರು.

ದಲಿತ ಸಂಘರ್ಷ ಸಮಿತಿ ವಿಭಾಗೀಯ ಸಂಚಾಲಕ ಎಚ್.ಎಸ್.ಕೃಷ್ಣಪ್ಪ ಮಾತನಾಡಿ, 6 ವರ್ಷಗಳಿಂದ ಹೈಸೊಡ್ಲೂರು ಗ್ರಾಮದಲ್ಲಿ ಶೆಡ್ ನಿರ್ಮಿಸಿಕೊಂಡು ಬದುಕುತ್ತಿರುವ ಆದಿವಾಸಿಗಳಿಗೆ ನಿವೇಶನ ಸೇರಿದಂತೆ ಮೂಲಸೌಕರ್ಯ ನೀಡಿಲ್ಲ. ಈ ಬಗ್ಗೆ ಸಾಕಷ್ಟು ಬಾರಿ ಹೋರಾಟ, ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ನಿಟ್ಟಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನದಂದು ಸರ್ಕಾರವನ್ನು ಎಚ್ಚರಿಸುವ ಕಾರ್ಯ ಮಾಡಲಾಗುತ್ತಿದೆ. ಶಾಸಕರು ಸೋಲಾರ್ ದೀಪ ಅಳವಡಿಸಲು ಸೂಚಿಸಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಬಳಿಕ ತಹಸೀಲ್ದಾರ್‌ಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು. ದಸಂಸ ಜಿಲ್ಲಾ ಸಂಚಾಲಕ ರಜಿನಿಕಾಂತ್, ಸಂಘಟನಾ ಸಂಚಾಲಕ ಯೋಗೇಶ್ ಕುಮಾರ್, ತಾಲೂಕು ಸಂಚಾಲಕರಾದ ನಾಗೇಶ್, ರಾಜಣ್ಣ, ವಸಂತ, ಕರ್ಪು, ಸುರೇಶ್, ಚಂದ್ರು, ಮಾರ ಇತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ವಿದ್ಯಾರ್ಥಿಗಳ ಒತ್ತಾಯ



ಕುಶಾಲನಗರ, ಡಿ.6–ಉಪನ್ಯಾಸಕರ ಕೊರತೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಕಾಲೇಜಿನ ಮುಂಭಾಗ ಜಮಾಯಿಸಿದ ವಿದ್ಯಾರ್ಥಿಗಳು, ಉಪನ್ಯಾಸಕರ ಕೊರತೆಯಿಂದ ಶೈಕ್ಷಣಿಕ ವ್ಯವಸ್ಥೆ ಕುಂಠಿತಗೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೂಡಲೇ ಉಪನ್ಯಾಸಕರ ನೇಮಕ ಮಾಡಬೇಕು. ಕೆಲ ವಿಷಯಗಳಿಗೆ ಉಪನ್ಯಾಸಕರಿಲ್ಲ, ಕಳೆದ ಹಲವು ವರ್ಷಗಳಿಂದಲೂ ಬಿಸಿಎಗೆ ಉಪನ್ಯಾಸಕರ ಕೊರತೆಯಿದೆ. ಆದ್ದರಿಂದ ಕಾಯಂ ಉಪನ್ಯಾಸಕರನ್ನು ನೇಮಿಸಬೇಕು ಎಂದು ಒತ್ತಾಯಿಸಿದರು.

ತರಗತಿಗಳು ಸರಿಯಾಗಿ ನಡೆಯದೆ ನಾವೇ ಸ್ವತಃ ಅಭ್ಯಸಿಸಿ ಪರೀಕ್ಷೆ ಎಸುರಿಸಬೇಕಿದೆ. ಪರೀಕ್ಷೆಯ ವೇಳಾಪಟ್ಟಿಯಲ್ಲೂ ಕಲಿಕೆಗೆ ಬಿಡುವು ಕಲ್ಪಿಸಿಲ್ಲ. ಮಂಗಳೂರು ವಿವಿಯಿಂದ ಪ್ರಕಟಿಸುವ ಫಲಿತಾಂಶ ಗೊಂದಲಮಯವಾಗಿದೆ. ಅಂಕಪಟ್ಟಿಯನ್ನು ಸರಿಯಾಗಿ ವಿತರಿಸುತ್ತಿಲ್ಲ ಎಂದು ಪ್ರತಿಭಟನಾ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಸಮಸ್ಯೆಗಳನ್ನು ಸರಿಪಡಿಸಬೇಕಾದ ಪ್ರಾಂಶುಪಾಲರು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸುವಂತೆ ವಿದ್ಯಾರ್ಥಿಗಳು ಪಟ್ಟು ಹಿಡಿದರು. ನಂತರ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಕಿರಣ್ ಗೌರಯ್ಯ, ವಿದ್ಯಾರ್ಥಿಗಳ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿದರು. ಇದೇ ವೇಳೆ ಕಾಲೇಜಿನ ಪ್ರಾಂಶುಪಾಲ ಪ್ರವೀಣ್ ಕುಮಾರ್, ಉಪನ್ಯಾಸಕರಾದ ರಮೇಶ್, ಚಂದ್ರಣ್ಣ, ಸುಧಾಕರ್ ಮತ್ತಿತರರು ಇದ್ದರು.

ದಲಿತ ಸಂಘಟನೆಗಳಿಂದ ಪರಿನಿರ್ವಾಣ ದಿನಾಚರಣೆ



ಮಡಿಕೇರಿ, ಡಿ.6–ಕೊಡ್ಲಿಪೇಟೆಯ ಬಸ್ ನಿಲ್ದಾಣದಲ್ಲಿ ಬುಧವಾರ ದಲಿತ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಡಾ.ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನವನ್ನು ಆಚರಿಸಿದರು.

ದಲಿತ ಸಂಘಟನೆ ಮುಖಂಡ ಜೆ.ಎಲ್. ಜನಾರ್ಧನ ಮಾತನಾಡಿ, ಅಂಬೇಡ್ಕರ್ ಅವರ ಆದರ್ಶ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದ ಅವರು ಸಂವಿಧಾನ ರಚನೆಯ ಮೂಲಕ ದೇಶಕ್ಕೆ ಸಮಾನತೆಯ ಪಾಠ ತಿಳಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಸಂಘಟನೆಯ ಪ್ರಮುಖರಾದ ಡಿ.ಸಿ.ಸೋಮಣ್ಣ, ವೀರಭದ್ರ, ಕೇಶವ, ಡಿ.ಬಿ.ವಿಜಯ, ಕೆ.ಎನ್.ಇಂದ್ರೇಶ್, ದಯಾನಂದ, ವಸಂತ್, ಸತ್ಯಪ್ರಕಾಶ್, ದೇವರಾಜ್, ನಟೇಶ್, ಹೇಮಂತ್, ಗೋವಿಂದ, ಡಿ.ಎಸ್.ವಸಂತ, ಗೌತಮ್, ವಿಜಯ್, ಮಂಜುನಾಥ್ ಹಾಜರಿದ್ದರು.

ಬಿ.ವಿ.ವೈಷ್ಣವಿ ರಾಷ್ಟ್ರಮಟ್ಟಕ್ಕೆ ಆಯ್ಕೆ

ಮಡಿಕೇರಿ, ಡಿ.6– ತುಮಕೂರಿನ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 2023–24ನೇ ಸಾಲಿನ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಟೆಕ್ವಾಂಡೋ ಪಂದ್ಯಾವಳಿಯಲ್ಲಿ ಮಡಿಕೇರಿಯ ಸಂತ ಜೋಸೆಫರ ಪಿಯು ಕಾಲೇಜಿನ ಬಿ.ವಿ.ವೈಷ್ಣವಿ ಪದಕ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಜನವರಿಯಲ್ಲಿ ಮಹಾರಾಷ್ಟ್ರದಲ್ಲಿ ನಡೆಯುವ ರಾಷ್ಟ್ರಮಟ್ಟದ ಟೆಕ್ವಾಂಡೋ ಪಂದ್ಯಾವಳಿಯಲ್ಲಿ ವೈಷ್ಣವಿ ಸ್ಪರ್ಧಿಸಲಿದ್ದಾರೆ. ಈಕೆ ಮಡಿಕೇರಿಯ ನಿವಾಸಿ ಹಾಗೂ ಮಾಜಿ ಯೋಧ ವಿನೋದ್ ಬಿ.ಎಲ್.ಕುಮಾರ್ ಹಾಗೂ ಶಿಕ್ಷಕಿ ಕೆ.ಆರ್.ಮಾಲಿನಿ ದಂಪತಿಯ ಪುತ್ರಿ. ಈಕೆಯ ಸಾಧನೆಗೆ ಮರ್ಕರ ಟೆಕ್ವಾಂಡೋ ಕ್ಲಬ್‌ನ ಮಾಸ್ಟರ್ ಕುಶಾಲ್ ಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಅಪ್ರಾಪ್ತೆಯ ಅತ್ಯಾಚಾರಿಗೆ 20 ವರ್ಷ ಜೈಲು ಶಿಕ್ಷೆ

ಮಡಿಕೇರಿ, ಡಿ.6–ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ ವಿರಾಜಪೇಟೆಯ 2ನೇ ಹೆಚ್ಚುವರಿ ಮತ್ತು ಜಿಲ್ಲಾ ಸತ್ರ ನ್ಯಾಯಾಲಯ 20 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 55 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಶ್ರೀಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯ ಪೂಜೆಕಲ್ಲು ನಿವಾಸಿ ಆನಂದ್ ಕುಮಾರ್ ಅಲಿಯಾಸ್ ಕುಶಾ ಅರುಣ ಶಿಕ್ಷೆಗೆ ಒಳಗಾದ ಅಪರಾಧಿ.

ಈತ 2017ರಲ್ಲಿ ಅಪ್ರಾಪ್ತೆಯನ್ನು ಮದುವೆಯಾಗುವುದಾಗಿ ನಂಬಿಸಿ, ತನ್ನ ಮನೆಗೆ ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದ. ಈ ಸಂಬಂಧ ಈಕೆಯ ಪೋಷಕರು ಈತನ ವಿರುದ್ಧ ಪೋಕ್ಸೋ ಕಾಯ್ದೆಯಡಿ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ನಂತರ ತನಿಖೆ ನಡೆಸಿದ ಪೊಲೀಸರು ಆನಂದ್ ಕುಮಾರ್‌ನನ್ನು ಬಂಧಿಸಿ ವಿಚಾರಣೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ಕುರಿತು ವಿಚಾರಣೆ ನಡೆಸಿದ ವಿರಾಜಪೇಟೆ 2ನೇ ಹೆಚ್ಚುವರಿ ಮತ್ತು ಜಿಲ್ಲಾ ಸತ್ರ ನ್ಯಾಯಾಲಯ ಆನಂದ್ ಕುಮಾರ್‌ಗೆ ಕಠಿಣ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ, ತೀರ್ಪು ನೀಡಿದೆ.

ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಅಂಬೇಡ್ಕರ್ ಪರಿನಿರ್ವಾಣ ದಿನ

● ಜಿಲ್ಲಾಡಳಿತದಿಂದ ಗೌರವ ● ವಿವಿಧ ಸಂಘ–ಸಂಸ್ಥೆಗಳಿಂದ ಅರ್ಥಪೂರ್ಣ ಆಚರಣೆ

ಚಾಮರಾಜನಗರ, ಡಿ.6–ಜಿಲ್ಲೆಯ ವಿವಿಧೆಡೆ ಬುಧವಾರ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನವನ್ನು ಜಿಲ್ಲಾಡಳಿತ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಜಿಲ್ಲಾಡಳಿತ: ನಗರದ ಜಿಲ್ಲಾಡಳಿತ ಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಇತರು ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು.

ಬಳಿಕ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ವತಿಯಿಂದ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಗಣ್ಯರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿದರು. ಇದೇ ವೇಳೆ ಬುದ್ಧ ಧಮ್ಮ ವಂದನೆ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶ ನೀಡಿರುವುದರಿಂದ ಪ್ರತಿದಿನ ಅಂಬೇಡ್ಕರ್ ಅವರನ್ನು ಸ್ಮರಿಸಬೇಕು. ಸಂವಿಧಾನದಲ್ಲಿ ಅಡಕವಾಗಿರುವ ಮೂಲಭೂತ ಕರ್ತವ್ಯಗಳನ್ನು ಪಾಲಿಸಲು ಎಲ್ಲರೂ ಸಂಕಲ್ಪ ಮಾಡಬೇಕು. ಅಂಬೇಡ್ಕರ್ ಅವರ ಚಿಂತನೆ, ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್, ನಗರಸಭೆ ಪೌರಾಯುಕ್ತ ರಾಮ್‌ದಾಸ್, ತಹಸೀಲ್ದಾರ್ ಬಸವರಾಜು, ವಿವಿಧ ಸಂಘಟನೆಗಳ ಮುಖಂಡರು ಇದ್ದರು.

ಅಂಬೇಡ್ಕರ್ ಅಭಿಮಾನಿ ಬಳಗ: ನಗರದಲ್ಲಿ ಅಂಬೇಡ್ಕರ್ ಅಭಿಮಾನಿ ಬಳಗದ ವತಿಯಿಂದ ಅಂಬೇಡ್ಕರ್ ಪರಿನಿರ್ವಾನ ದಿನ ಆಚರಿಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಆಯೋಜಿಸಿದ ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಲಕ್ಷ್ಮಯ್ಯ, ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಕಾಂತ್, ಇನ್ಸ್‌ಪೆಕ್ಟರ್ ರಾಜೇಶ್, ಡೀನ್ ಮಂಜುನಾಥ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.



ಬಹುಜನ ಸಮಾಜ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಬಿ.ಕೆ.ರವಿಕುಮಾರ್, ದಲಿತ ಮುಖಂಡರಾದ ವೆಂಕಟರಮಣ ಸ್ವಾಮಿ, ನಗರಸಭಾ ಸದಸ್ಯ ಆರ್.ಪಿ. ನಂಜುಂಡಸ್ವಾಮಿ, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಮೂಡ್ನಾಕೂಡ ಪ್ರಕಾಶ್, ವಕೀಲರಾದ ಪ್ರಸನ್ನ ಕುಮಾರ್, ಬಿವಿಎಫ್ ರವಿಮೌರ್ಯ, ಅಂಬೇಡ್ಕರ್ ಅಭಿಮಾನಿ ಬಳಗದ ಆಯೋಜಕ ಹೊಂಡರಬಾಳು ವಾಸು, ಬಾಬು ರಾಮಸಮುದ್ರ, ಮೋಹನ್ ನಗು, ಅಕ್ಷಯ್, ಎಸ್.ಪಿ.ಮಹೇಶ್, ಬ್ಯಾಡಮೂಡ್ಲು ಬ.ಮು.ಕೃಷ್ಣಮೂರ್ತಿ, ಬಸವಣ್ಣ, ದೇವಾಲಪುರ ಶಿವಣ್ಣ, ಶ್ರೀನಿವಾಸಗೌಡ, ಶಾ.ಮುರಳಿ, ಕೃಷ್ಣಯ್ಯ, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಕಿರಣ್, ಪಣ್ಯದಹುಂಡಿ ರಾಜು, ಕಾಂತರಾಜು, ಮಧು, ಚಂದ್ರಕಾಂತ್ ಭಾಗವಹಿಸಿದ್ದರು.

ಕಷ್ಟದಿಂದ ಶಿಕ್ಷಣ ಪಡೆದ ಅಂಬೇಡ್ಕರ್



ಚಾಮರಾಜನಗರ, ಡಿ.6–ನಗರದ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಬುಧವಾರ ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಿಸಲಾಯಿತು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೆ.ಎಂ.ಶ್ರೀನಿವಾಸಮೂರ್ತಿ ಮಾತನಾಡಿ, ಅಂಬೇಡ್ಕರ್ ಅವರು ಬಾಲ್ಯದಿಂದಲ್ಲೂ ಕಷ್ಟದಿಂದ ಶಿಕ್ಷಣ ಪಡೆದು ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆದು ಅಪಾರ ಪಾಂಡಿತ್ಯ ಗಳಿಸಿದ್ದರು. ಸಂವಿಧಾನ ಬರೆದು ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ನೆಹರು ಹಾಗೂ ಇಂದಿರಾ ಗಾಂಧಿ ನೇತೃತ್ವದ ಸರ್ಕಾರ ಅಂಬೇಡ್ಕ ಅವರ ಪುಸ್ತಕಗಳ ಬಿಡುಗಡೆ ಅವಕಾಶ ನೀಡದೆ 37 ವರ್ಷ ಮುಚ್ಚಿಡಲಾಗಿತ್ತು. ನಂತರ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಶರತ್ ಪವಾರ್ ಅಂಬೇಡ್ಕರ್ ಅವರ ಪುಸ್ತಕಗಳನ್ನು ಬಿಡುಗಡೆ ಅನ್ಯಭಾಷೆಗಳಿಗೆ ಭಾಷಾಂತರ ಮಾಡಿ ದೇಶಕ್ಕೆ ತಲುಪಿಸುವ ಕೆಲಸ ಮಾಡಿದ್ದರು ಎಂದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನೋಟರಿ ಶಿವರಾಂ, ಕಾರ್ಯದರ್ಶಿ ಉತ್ತುವಳ್ಳಿ ಕುಮಾರ್, ಹಿರಿಯ ವಕೀಲರಾದ ಪುಟ್ಟರಾಜು, ಶಿವಲಿಂಗೇಗೌಡ, ಚಿನ್ನಸ್ವಾಮಿ, ಜಯಪ್ರಕಾಶ್, ವಿ.ನಾಗರಾಜೇಂದ್ರ, ರಾಮಸಮುದ್ರ ಪುಟ್ಟಸ್ವಾಮಿ, ಪ್ರಸನ್ನಕುಮಾರ್ ಬಿ.ಸೋಮವಾರಪೇಟೆ ಚಂದ್ರು, ಕೆರಹಳ್ಳಿ ಕೆಂಪರಾಜು, ಹೊಂಗನೂರು ಮಹೇಶ್, ಕೌಲಂದೆ ಪಲ್ಲವಿ, ನಾಗಮ್ಮ, ಸವಿತಾ, ನೋಟರಿ ರೂಪಶ್ರೀ, ಎಸ್.ನಂಜಯ್ಯ, ಮಂಜು, ಗಣೇಶ್‌ಪ್ರಸಾದ್, ಪುಟ್ಟರಾಚಯ್ಯ ಹಾಗೂ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಡಿ.17ಕ್ಕೆ ಜಿಲ್ಲಾ ಮಾದಿಗ ಮುನ್ನಡೆ ಸಮಾವೇಶ



ಚಾಮರಾಜನಗರ, ಡಿ.6–ಒಳ ಮೀಸಲಾತಿ ಕುರಿತು ಜನರಿಗೆ ಅರಿವು ಮೂಡಿಸಲು ಜಿಲ್ಲಾ ಮಾದಿಗ ಮುನ್ನಡೆ ಸಮಾವೇಶವನ್ನು ಡಿ.17ರಂದು ನಗರದಲ್ಲಿ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಹೆಚ್.ಡಿ.ಕೋಟೆ ಎಂ.ಶಿವಣ್ಣ ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ನಡೆದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವರಾದ ಎ.ನಾರಾಯಣಸ್ವಾಮಿ, ಗೋವಿಂದ ಕಾರಜೋಳ, ಮಾಜಿ ಶಾಸಕ ಸಿ.ರಮೇಶ್ ಮತ್ತಿತರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಈ ಸಂಬಂಧ ಎಲ್ಲಾ ಜಿಲ್ಲೆಗಳಲ್ಲೂ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಸಮುದಾಯದ ಜನರಿಗೆ ಒಳ ಮೀಸಲಾತಿ ಅರಿವು ಮೂಡಿಸುವುದು ಸಮಾವೇಶ ಉದ್ದೇಶವಾಗಿದೆ. ಜಿಲ್ಲೆಯ ಪ್ರತಿ ಹಳ್ಳಿಗಳಿಂದ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನವೆಂಬರ್ ಶ್ರೀಮಂದಕೃಷ್ಣ ಮಾದಿಗರವರ ನೇತೃತ್ವದಲ್ಲಿ ನಡೆದ ಮಾದಿಗ ವಿಶ್ವರೂಪಂ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸುಮಾರು 40 ನಿಮಿಷ ಭಾಷಣ ಮಾಡಿ, ಮಾದಿಗ ಸಮುದಾಯಕ್ಕೆ ನ್ಯಾಯ ದೊರಕಿಸಲು ಭರವಸೆ ನೀಡಿದ್ದಾರೆ. ಯಾವುದೇ ಜಾತಿಗಳ ಸಮಾವೇಶಗಳಿಗೆ ಹೋಗದ ಪ್ರಧಾನಿ ಮಾದಿಗ ಸಭೆಯಲ್ಲಿ ಭಾಗವಹಿಸಿದ್ದು ಚರಿತ್ರೆಯಾಗಿದೆ ಎಂದರು.

ಗೃಹ ಸಚಿವ ಅಮಿತ್ ಶಾ ಇತ್ತೀಚಿಗೆ 3 ಸಾವಿರ ಮಾದಿಗ ಮುಖಂಡರೊಡನೆ ಸಂವಾದ ನಡೆಸಲಾಗಿದೆ. ನರೇಂದ್ರ ಮೋದಿ ನೇತೃತ್ವದಲ್ಲಿ ಈಗಾಗಲೇ ಉನ್ನತ ಮಟ್ಟದ ಅಧಿಕಾರಿಗಳನ್ನು ಕರೆದು ಸಮುದಾಯದ ಒಳ ಮೀಸಲಾತಿಗೆ ಕ್ರಮ ತೆಗೆದುಕೊಂಡಿರುವುದು ಸ್ವಾಗತಾರ್ಹ ಎಂದರು.

ವಕೀಲ ಅರುಣ್‌ಕುಮಾರ್, ಮುಖಂಡರಾದ ರಾಜೇಂದ್ರ ಬೂದಿತಿಟ್ಟು, ಬಸವನಪುರ ರಾಜಶೇಖರ್, ಅರಕಲವಾಡಿ ನಾಗೇಂದ್ರ ಮಾತನಾಡಿದರು. ಸಭೆಯಲ್ಲಿ ಮುಖಂಡ ಚಾ.ಗು.ನಾಗರಾಜ್, ಜಿಲ್ಲಾ ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಶಿವಕುಮಾರ್, ಬ್ಯಾಂಕ್ ಬಸವರಾಜು, ಸಂತೇಮರಹಳ್ಳಿ ರಾಜು, ಲಿಂಗರಾಜು, ಹೆಚ್.ಮೂರ್ತಿ, ಶಿವಕುಮಾರ್ ರಾಮಸಮುದ್ರ, ಆರ್.ಎನ್.ಶಿವು, ಮಹದೇವು, ಅರಕಲವಾಡಿ ಮಹದೇವ, ಕಿರಣ್, ದೇವರಾಜ್, ಗುರುಲಿಂಗಯ್ಯ, ಮರಪ್ಪ, ರಾಮು, ಹನೂರು ಗುರುಸಿದ್ದು, ಕಾಮಗೆರೆ ಮಹದೇವ, ಬಸವರಾಜು ದ್ವಾರ್ಕಿ, ಶಿವಮಲ್ಲಣ್ಣ ಭಾಗವಹಿಸಿದ್ದರು.

ಗ್ರಂಥಾಲಯ ನಿರ್ಮಾಣದಿಂದ ಶಿಕ್ಷಣಕ್ಕೆ ಒತ್ತು




ಚಾಮರಾಜನಗರ, ಡಿ.6– ಗ್ರಾಮಗಳಲ್ಲಿ ಗ್ರಂಥಾಲಯ ಹಾಗೂ ಅಂಬೇಡ್ಕರ್ ಭವನಗಳು ನಿರ್ಮಾಣವಾಗಬೇಕು. ಇದರಿಂದ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದಂತಾಗುತ್ತದೆ ಎಂದು ಕನಿಷ್ಠ ವೇತನ ಸಲಹ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಎಸ್‌ಪಿಕೆ ಗ್ರೂಪ್‌ನ ಮಾಲೀಕ ಉಮೇಶ್ ತಿಳಿಸಿದರು.

ಸಮೀಪದ ಮಲ್ಲಯ್ಯನಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮಂಟೇಸ್ವಾಮಿ ದೇವಸ್ಥಾನದ ಗೋಪುರ, ಕಳಸಾರೋಹಣ ಹಾಗೂ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ಮಲ್ಲಯ್ಯನಪುರ ಗ್ರಾಮದ ಯುವಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮುಂದಿನ ದಿನಗಳಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಿಸಲಾಗುವುದು. ಈ ಬಗ್ಗೆ ಶಾಸಕರೊಂದಿಗೆ ಚರ್ಚಿಸಲಾಗುವುದು ಎಂದರು.

ಗ್ರಾಮದಲ್ಲಿ ಶ್ರೀ ಮಂಟೇಸ್ವಾಮಿ ದೇವಸ್ಥಾನ ನಿರ್ಮಾಣವಾಗಿರುವುದು ಶುಭ ಸಂದೇಶವಾಗಿದೆ. ಭಕ್ತಿಯಿಂದ ಭಗವಂತನನ್ನು ಪೂಜಿಸುವುದರಿಂದ ಮನಸ್ಸಿಗೆ ನೆಮ್ಮದಿ ಹಾಗೂ ಶಾಂತಿ ಲಭಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಸೋಮಣ್ಣೇಗೌಡ, ಉತ್ತರ ಖಂಡ (ರೂರ್ಕಿ) ಭೂವಿಜ್ಞಾನಿ ಆರ್.ಧರ್ಮರಾಜ್, ತಾಪಂ ಮಾಜಿ ಸದಸ್ಯ ಮಲ್ಲೇದೇವರು, ಗ್ರಾಪಂ ಮಾಜಿ ಅಧ್ಯಕ್ಷೆ ಮಹದೇವಮ್ಮ, ಸದಸ್ಯರಾದ ಎಂ.ಶಿವಣ್ಣ, ಶೋಭಾರಾಣಿ, ಶಿವಕುಮಾರ್, ಯುವ ಮುಖಂಡ ಕುಸುಮರಾಜ್, ಯಜಮಾನರಾದ ಎಂ.ಎನ್.ಮಹದೇವ್, ಚಿಕ್ಕಮಹದೇವ್, ಚಿಕ್ಕನಾಗಣ್ಣ, ಸಂಪತ್ ಕುಮಾರ್, ರಮೇಶ್, ಚಂದ್ರಶೇಖರ್, ನಾಗರಾಜು, ಮಂಟೇಸ್ವಾಮಿ, ಮಹದೇಶ್ವರಸ್ವಾಮಿ ದೇವರಗುಡ್ಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.



ಚಾಮರಾಜನಗರದ ನ್ಯಾಯಾಲಯ ರಸ್ತೆಯ ರಾಮಚಂದ್ರ ವಿದ್ಯಾಸಂಸ್ಥೆಯಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನವನ್ನು ಕ್ಯಾಂಡಲ್ ಬೆಳಗಿಸುವುವ ಮೂಲಕ ಆಚರಿಸಲಾಯಿತು. ಸಂಸ್ಥೆ ಅಧ್ಯಕ್ಷ ಎಂ.ಎಸ್.ಮಾದಯ್ಯ, ಕಾರ್ಯದರ್ಶಿ ರುದ್ರಮೂರ್ತಿ, ಶಿಕ್ಷಕ ಕುಮಾರ್, ದೈಹಿಕ ಶಿಕ್ಷಣ ಶಿಕ್ಷಕ ರಂಗಸ್ವಾಮಿ, ಯಶ್‌ಪಾಲ್, ಮಂಜುಳಾ, ಮಹೇಶ್, ನಾಗರಾಜು, ವೀರಣ್ಣ, ಪರಶಿವಮೂರ್ತಿ, ವಿದ್ಯಾರ್ಥಿಗಳು ಇದ್ದರು.

ಇಂದು ಜನಸಂಪರ್ಕ ಸಭೆ

ಚಾಮರಾಜನಗರ, ಡಿ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ವಿದ್ಯುತ್ ಗ್ರಾಹಕರ ಜನಸಂಪರ್ಕ ಸಭೆಯನ್ನು ಡಿ.7ರಂದು ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ಚಾಮರಾಜನಗರದ ಸೆಸ್ಕ್ ಉಪ ವಿಭಾಗದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಂಬಂಧಿತ ಕುಂದುಕೊರತೆಗಳಿದ್ದಲ್ಲಿ ತಿಳಿಸುವಂತೆ ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ.600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WE ARE HIRING
Female **Receptionist** with **Marketing knowledge** for Viosmart Merchandise Company in J P Nagar Mysore intrested Candidates WhatsApp
7624874832

ಮನೆ ಬಾಡಿಗೆ
(ಚಿಕ್ಕ ಸಂಸಾರಕ್ಕೆ) ಜೆಪಿ ನಗರ
9663563587
6362210810

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 8,000/- per month. For evening: (Male only). 6.30 pm to 11.30 pm. Salary: Rs. 8,000/- per month.
7349337469, 9448525072

Sri Vinayaka TECHNOLOGIES

All types of Laptop, Desktop, CCTV Smart Classes, Projector, Printer, Networking Products
SALES & SERVICE
M: 7348 977 948 / 9481 349 347

WANTED
@ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಅನುಭವ ವ್ಯಕ್ತಿಗಳು ಬೇಕಾಗಿದ್ದಾರೆ.
Mob: 98450-28614

WANTED
SALES BOYS for a **SPORTS STORE** in Mysore.
Full Time: 10 am to 7 pm
Part Time: 5 to 9 pm
77601-09047 / 81053-68325

SALES & SERVICE
CCTV
LAPTOP
DESKTOP
PRINTERS
73489-77948

ಅನುಬಂಧ ಮ್ಯಾರೇಜಸ್
ವೀರಶೈವ ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ ನಾಯಕ, ಮರಾಠ, ಆದಿಕರ್ನಾಟಕ, ತಮಿಳು, ಬೋವಿ, ಬಲಿಜ, ಈಡಿಗ, ಕೂರ್ಗಿ, ಅರಸು, ವಿಶ್ವಕರ್ಮ, ಅಂತರ್ಜಾತಿ ಮತ್ತು ಇನ್ನು ಹಲವು ಎಲ್ಲಾ ಜಾತಿಯ ವಧುವರರಿಗೆ ಸಂಪರ್ಕಿಸಿ:
Mob: 63617-40552
LADY COMPUTER OPERATOR ಬೇಕಾಗಿದ್ದಾರೆ

REQUIRED
Female & male TELECALLERS ready to work in financial services. Qualification: SSLC & above with computer basic knowledge and Salary around 10000.
Work place: SLV ENTERPRISES, #2060, 2nd Floor, Vaibhav complex, Madavachar Road, near 101 Ganapathi Temple, Agrahara, Mysore-570 004.
95139-65656 / 0821-3539085

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
9148733213

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc., B.Com, MA, M.Com, M.Sc., MBA, MBBS, BE, M.Tec, B.Ed., D.Ed., M.Ed.
ವಿವಾಹ ನೊಂದಣಿಗೆ ಕರೆ ಮಾಡಿ.
(2nd Marriage also)
Mob: 91647-43059

OWN YOUR HOUSE (SITE + Bldg)
30x40 / 40x60 / 2-3 BHK IN 4/5 Month

STE AREA	Bldg	Total Cost	Pay Down
30x40 Hebbal	10 SQ/ 2BHK	99 Lac	70.00 Lac
40x60 J P Nagar / Sringr	16 SQ/ 2BHK	1.12 Cr	75.00 Lac
30x40 KSRTC, Kote Rd	10 SQ/ 2BHK	69 Lac	45.00 Lac
30x50 Srirampura	12 SQ/ 2BHK	1.12 Cr	75.00 Lac

Contact for Modern / Vaastu / Bldg Plan, 3D, Other Architect services. From Expert Engineers Includes Licence / SBI Loan
Any Budget / Any Area
✆ 9886697052

SITE FOR SALE
30/50 Corner Site Srirampura, Near Bramaramba choultry Mysore.
50/50 MUDA Site Kuvempunagar, Mysore.
PH: 99004 64111

HOUSE FOR LEASE
2BHK House, Ground Floor East Face Semi Furnished with Solar & UPS @ JP Nagar Ring Road (Outer)
9880290857

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಹೋಟೆಲ್‌ಗೆ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
ಸಂಪರ್ಕಿಸಿ:
99458-02991
72040-94056

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL **99012 91267** **98454 26862**

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

EKADANTHA VENTURES
Sites for Sale near hale Kesare Main Road, Super location, best investment, opportunity for both commercial & Residential purpose, Mysore.
99003-75763

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಮುಡಾ ಕಾರ್ನರ್ ಸೈಟ್ ಸೇಲ್
28.5x40, ಈಸ್ಟ್ ಫೇಸಿಂಗ್, ಏರ್‌ಪೋರ್ಟ್ ಹಿಂಭಾಗದ ರಸ್ತೆ, ಜ್ಞಾನಭಾರತಿ ಲೇಔಟ್‌ಟ್ ಚದುರಡಿಗೆ : 3000 ರೂ
ಡೈರೆಕ್ಟ್ ಓನರ್
6362639387

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

COMMERCIAL SITE FOR SALE
50'x80', East Facing site on Gaddige Main Road, near St. Francis School.
Price: Rs. 3,300/sft
Mob: 97384-04534

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ.ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000ರಿಂದ 20000 ವರೆಗೆ
63661-41518 / 98450-10281

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
ಸಂಬಳ 10,000 ಮೂಲ ಭತ್ಯೆ, +5000 ಪ್ರೋತ್ಸಾಹ ಧನ.
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರ್ಯಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು-570 016. ಕರೆ ಮಾಡಿ:
Mob: 8867064586

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಶ್ರೀ ಮೂರ್ತಿ ಟೂರಿಸ್ಟ್
20.12.23 ಬುಧವಾರ ಬೆಳಿಗ್ಗೆ 4.30ಕ್ಕೆ ಒಂದೇ ದಿನದಲ್ಲಿ 3 ಶ್ರೀರಂಗನಾಥಸ್ವಾಮಿ ದರ್ಶನಕ್ಕಾಗಿ ಪ್ರವಾಸ 21–12–23 ಬೆಳಿಗ್ಗೆ 11ಕ್ಕೆ ವಾಪಸ್ ಬರುವುದು
ಮನೆ ಬಾಡಿಗೆಗೆ ಇದೆ
20x30 (Ground Floor), E&F ಬ್ಲಾಕ್‌ನಲ್ಲಿ ರಾಮಕೃಷ್ಣನಗರ ಮೈಸೂರು (Veg Only)
9480733069

TEACHERS REQUIRED
State Syllabus SUBJECTS Maths and Science (qualification: BSc / MSc , BEd)
Hindi : (qualification: BA / MA, BEd)
9538275947
9482143347

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಅಡಕನಹಳ್ಳಿಹುಂಡಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಮಹಿಳಾ ಸೆಕ್ಯೂರಿಟಿ ಗಾರ್ಡಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು PUC
ಸಂಬಳ: 16,000/– 8 hours + w/o
ವಯೋಮಿತಿ: 40 ವರ್ಷದೊಳಗೆ
ESI, PF ಸೌಲಭ್ಯವಿರುತ್ತದೆ
ಸಂಪರ್ಕಿಸಬೇಕಾದ ಸಂಖ್ಯೆಗಳು:
96207-77819 / 96206-67819

WANTED
SALES EXECUTIVE
for Marketing our product
Full Time / Part Time
Male / Female
Attractive Salary + Incentive
RAE CARD
Vijayanagar 4th Stage, Mysore.
Mob: 70193-93338

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 48 ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿನಗರ, ಬೋಗಾದಿ ಹಾಗೂ ಹಡುವಾರಹಳ್ಳಿ ಮೈಸೂರಿನ ಸುತ್ತಮುತ್ತ ಇರುವ ಪ್ರದೇಶಗಳಿಗೆ.
9538886305
9538886328

ವಿಕೇರ್ ಹೋಮ್ ನರ್ಸಿಂಗ್ ಮೈಸೂರು
ಮೈಸೂರಿನಲ್ಲಿ ರೋಗಿಯ ಆರೈಕೆಗೆ **ಫುಲ್‌ಟೈಮ್ ಕೆಲಸಕ್ಕೆ ಮಹಿಳಾ ಹೋಮ್‌ನರ್ಸ್ ಬೇಕಾಗಿದ್ದಾರೆ**
ವೇತನ 16,000–23,000/–
ಸಂಪರ್ಕಿಸಿ:
+91 9380 04 3696
+91 6364 48 1333



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚ್ಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ, ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಒಕ್ಕಲಿಗ ಜನಾಂಗದ ವಧು ವರರ ಮಾಹಿತಿ ಕೇಂದ್ರ. ನೊಂದಣಿ ಉಚಿತ
ಮಾಹಿತಿಗಾಗಿ ಸಂಪರ್ಕಿಸಿ:
Mob: 99002-84079

ಮನೆ ಮಾರಾಟಕ್ಕಿದೆ
ಮೈಸೂರು ನಗರ – 570 008, ಶ್ರೀರಾಂಪುರ, ಕೋಟೆ ರಸ್ತೆ, 3ನೇಯ ಕ್ರಾಸ್, ಇಂಡಿಯನ್ ಆಯಿಲ್ ಹಿಂಭಾಗ, ಇದರ ಅಳತೆಯು 30'x40' ಅಡಿ, ಮಹದೇವಪುರ, ಪೂರ್ವದಿಕ್ಕು ಮಾಲೀಕರು:
98452-46549
63630-15322

SITES FOR SALE
Near MIT College, Fully developed, Ready for Registration & also in installments.
Call: 96637-61853

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬ್ಯುಸಿನೆಸ್ ಪ್ಲಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

HOUSE FOR RENT
3 BHK, South Face, INDPDT, Ground Floor at Ramanuja Road, 8th Cross,
Rent: 14 k
Vegetarian preferred
Mob: 97316-00819

ಹೋಟೆಲ್ ಮಾರಾಟಕ್ಕೆ / ಬಾಡಿಗೆಗೆ
(Opposite Engineering College) Vijayanagar, Mysuru.
Mob: **99720-68716** **88929-18150**

ಸುವರ್ಣ ಯುತ್ರಾ ಪ್ಯಾಕೇಜ್
1) 25/12/2023–ಪೂರಿ ಜಗನ್ನಾಥ ಪ್ರವಾಸ, 4 ದಿನಗಳು ,ಕೊನಾರ್ಕ್ ಲಿಂಗರಾಜ್ ಟೆಂಪಲ್.
2) 04/01/2024 – ಮಧ್ಯ ಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ, 4 ದಿನಗಳು, ಮಹಾಕಾಳೇಶ್ವರ ಓಂಕಾರೇಶ್ವರ ಮಾಂಡವ್ ಮಹೇಶ್ವರ್ ಇಂದೋರ್.
ಕರೆ ಮಾಡಬೇಕಾದ ನಂಬರ್
Mob: 90083-81022 / 94808-43945 / 90194-62508

N.G.R.S ಭವನ
ಹಳೇ ತಿರುಮಕೂಡಲು, ಟಿ. ನರಸೀಪುರ
(250 ರಿಂದ 300 ಜನಕ್ಕೆ ವ್ಯವಸ್ಥೆಯಿದೆ)
ಸಭಾಂಗಣ, ಅಡುಗೆ ಮನೆ, ಭೋಜನ ಶಾಲ ಇದೆ.
1) ಶುಭಸಮಾರಂಭಗಳಿಗೆ
2) ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ
3) Meeting / Conference ಗಳಿಗೆ ಲಭ್ಯವಿದೆ. ಸಂಪರ್ಕಿಸಿ:
99451-41668 / 81058-47866

NEW HOUSE FOR RENT
2 BHK & 3 individual Room at 101 Ganapathi Tempel, near Agrahara, Mysore. Contact:
Mob: 95138-61395

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

ಮನೆ ಮಾರಾಟಕ್ಕಿದೆ
25/30, ಡ್ಯೂಪ್ಲೆಕ್ಸ್ ಮನೆ, ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿ 60 ಲಕ್ಷಗಳಿಗೆ ಮಾರಾಟಕ್ಕಿದೆ.
10 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರೋಡ್ ಇಂದ 15 ಕಿಮಿ ದೂರದಲ್ಲಿ 15 ಲಕ್ಷಗಳಿಗೆ ಮಾರಾಟಕ್ಕಿದೆ. ಸಂಪರ್ಕಿಸಿ: OWNER
Mob: 74111-10087

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಮನೆ ಕ್ರಯಕ್ಕೆ
ಗಂಗೋತ್ರಿ ಬಡಾವಣೆಯಲ್ಲಿ ಒಂದು ಅಂತಸ್ತಿನ EWS ಮನೆ ಕ್ರಯಕ್ಕೆ ಇದೆ.
ಆಸಕ್ತಿ ಉಳ್ಳವರು ಮಾತ್ರ ಸಂಪರ್ಕಿಸಿ.
80885-84803
97391-84999

ಬೇಕಾಗಿದ್ದಾರೆ
ಮೊಬೈಲ್ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ ಕಂಪ್ಯೂಟರ್ ಜ್ಞಾನವುಳ್ಳವರಾಗಿರಬೇಕು
ಸಮಯ: 8 ರಿಂದ 7 ರವರೆಗೆ
ಸ್ಥಳ: ಬಿ.ಎಂ.ಶ್ರೀನಗರ, ಮೇಟಗಳ್ಳಿ, ಮೈಸೂರು–16
9972192125
8431160814

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ವಯೋಮಿತಿ : 18 ರಿಂದ 35ರ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ಉಚಿತ: ತಿಂಡಿ, ಊಟ
ವೇತನ: 15600(ESI+PF) & Bonus
ಸ್ಥಳ : ಆಲನಹಳ್ಳಿ Bus Stop, Mysore
8073429574, 9538886328
9035269781,0821-4852002

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ
6361056646,7676844160

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಆಫೀಸರ್, ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ : ಸೂಪರ್ ವೈಸರ್ 19000 +W/o (8hrs)
ಗಾರ್ಡ್: 18000+W/o (8hrs)
9880727819,9538567819

ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣ ಮಟ್ಟ ಉಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ Rs. 1670/- ರಂತೆ ಕಟ್ಟಿ ಕೊಡಲಾಗುವುದು. ಮುಂಗಡ ಹಣ ಪಾವತಿ ಮಾಡುವಂತಿಲ್ಲ. ಸಾಲದ ಸೌಲಭ್ಯ ಒದಗಿಸಲಾಗುವುದು.
Mob: 94821-27279

WANTED IMMEDIATELY
SUPERVISOR
Mob: 85488-80010

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು, ಅವರ ಮನೆಯಲ್ಲೇ ಇದ್ದು ನೋಡಿಕೊಳ್ಳಲು ಗಂಡಸರು / ಹೆಂಗಸರು ಬೇಕಾಗಿದ್ದಾರೆ.
ಸಂಬಳ: 15,000 /–, ಊಟ, ವಸತಿ ESI / PF ನೀಡಲಾಗುವುದು.
ಗಮನಿಸಿ: ಇಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಆದ್ಯತೆ. ಸಂಪರ್ಕಿಸಿ:
Mob: 98801-02700

WANTED SITES
@ Vijayanagar, Yelwala Anandasagara Nithyananda Sagara & Mysore Surroundings
Quick Registration
9538839926

WANTED
HOUSE KEEPING & ROOM BOYS for Lodge.
Mob: **97432-21781** **80509-36432**

ಮನೆ ಮಾರಾಟಕ್ಕಿದೆ
ವಿಳಾಸ: ನಂ. 41, ಸೋಲಾರ್ ಸ್ಟ್ರೀಟ್, ಚಾಮರಾಜ ಮೊಹಲ್ಲಾ, ಮೈಸೂರು–23, ವಿವರ: ಉತ್ತರ ಬಾಗಿಲು, ಅಳತೆ : ಉದ್ದ 45 ಅಡಿ, ಅಗಲ 10.5 ಅಡಿ
9902422916

HOUSE FOR SALE
Lal Bahadhur Shastri Nagar, Mysore.
55 lakh G + 1
Contact:
Mob: **97388-84777** **97400-19514**

FOR RENT / LEASE
Newly built 1 BHK, 2nd Floor & 2 BHK Ground Floor (30'x40') for Rent / Lease near SBM Layout, Bogadi.
Contact: Raghavendra
Mob: 94839-31131

WANTED
Female Experienced Office Assistant,
Fluency in English
Salary-15000 to 20000
SMART HAIR FIXING
Kuvempunagar
Mob: 87929-45515

PART TIME
ವಾರದ 5 ದಿನ ದಿನದಲ್ಲಿ 2 ಗಂಟೆ ಕೆಲಸ, ಅಕರ್ಷಕ ಸಂಬಳ, ಮಹಿಳೆಯರಿಗೆ.
ಸಂಪರ್ಕಿಸಿ:
Mob: 83102-33663

ವಾಣಿಜ್ಯ ಜಾಗ ಬಾಡಿಗೆಗಿದೆ
ನೆಲಮಹಡಿ 1400 ಚದರಡಿ, ಬೇಕರಿ, ಹೋಟೆಲ್, ದಿನಸಿಅಂಗಡಿ, ಫರ್ನಿಚರ್ ಅಂಗಡಿ, ಡೈಯಗ್ನೋಸ್ಟಿಕ್ ಲ್ಯಾಬ್ & ಏಜೆನ್ಸಿಗಳಿಗೆ ಸೂಕ್ತ, ಮೊದಲಮಹಡಿ 700 ಚದರ ಅಡಿ, ಆಡಿಟರ್ ಆಫೀಸ್ ಫಾರ್ಮ ಏಜೆನ್ಸಿಗಳು ಡೆಂಟಲ್ ಕ್ಲಿನಿಕ್ (ಹಿಂದೆ ಡೆಂಟಿಸ್ಟ್ ಇದ್ದು ಖಾಲಿಯಾಗಿದೆ.)
8838422761,6364578496

ದಾಖಲಾತಿ ಕಳೆದಿದೆ
ಜಯಲಕ್ಷ್ಮಿ ಲೇ.ನರಸಿಂಹೇಗೌಡ ನಂ.385, 2ನೇ ಮೇನ್, 3ನೇ ಹಂತ, ಗೋಕುಲಂ, ಮೈಸೂರು ಇವರ ನಿವೇಶನದ ಮೂಲದಾಖಲಾತಿಗಳಾದ ಮಂಜೂರಾತಿ ಪತ್ರ, ಟೈಟಲ್‌ಡೀಡ್, ಕಂದಾಯ ರಶೀದಿಗಳು, ಕನ್ನಿಕಾ ಹಾರ್ಡ್‌ವೇರ್ ಬಳಿ ಕಳೆದಿದ್ದು ಸಿಕ್ಕವರು ಸಂಪರ್ಕಿಸಿ:
9945273574

WANTED
1) Accountant (M/F)
Experience - 1 to 2 yrs any Degree
Skills: Tally, ERP-9, GST, MS Office
Contact: 0821-4286890 or WhatsApp: 63646-97759

ತಕ್ಷಣ ಬೇಕಾಗಿದ್ದಾರೆ
ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ, ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ಮ್ಯಾನೇಜರ್–2, ಸೂಪರ್‌ವೈಸರ್–2, ಕಿಚನ್ ಸೂಪರ್‌ವೈಸರ್–2, ಚಾಟ್ ಮೇಕರ್–2, ಕ್ಯಾಪ್ಟನ್–2, ಜ್ಯೂಸ್‌ಮೇಕರ್–2
7899929233

WANTED
HOSTEL WARDEN
Place: Reputed PU Science College, Mysuru.
Science Post-graduate is preferred. Contact:
Mob: 94489-79080

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ಹಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು

ಮನೆ ಬಾಡಿಗೆಗೆ /ಭೋಗ್ಯಕ್ಕೆ ಇದೆ
ಶ್ರೀರಾಂಪುರ ಯುನಿವರ್ಸಿಟಿ ಬಡಾವಣೆ ಎದುರು, ರಿಂಗ್ ರಸ್ತೆ ಹತ್ತಿರ, ಗಾಯತ್ರಿ ಬಡಾವಣೆಯಲ್ಲಿ ಮನೆ, ಅಂಗಡಿ, ಮಳಿಗೆ ಬಾಡಿಗೆಗೆ / ಭೋಗ್ಯಕ್ಕೆ ಇದೆ.
ಸಂಪರ್ಕಿಸಿ:
Mob: 94480-92818

HOUSE FOR SALE
20'x30', 3 Floor Building # near Marimallappa School, Vijayanagar 4th Stage, Mysore.
Mob: 96860-78319

ಮಾರಾಟಕ್ಕೆ / ಭೋಗ್ಯಕ್ಕೆ
60x230, 15000 ಚದರಡಿಗಳ ಬೆಲೆ – 4000/–, ಅಲಿನೇಷನ್ ಕಮರ್ಷಿಯಲ್ ಜಮೀನು ಬೋರ್ ಮತ್ತು ಆಫೀಸ್‌ನೊಂದಿಗೆ ಬನ್ನೂರು ಮೇನ್ ರೋಡ್, ವಿದ್ಯಾವಿಕಾಸ್ ಕಾಲೇಜ್ ಎದುರು, ದೇವೇಗೌಡ ಸರ್ಕಲ್ ಹತ್ತಿರ.
Mob: 63636-24003

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ರಾಜ್ಯ ಸಚಿವ ಸಂಪುಟ ನಿರ್ಣಯದಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಕೊಡಗರು ಬದಲಾಗಿ 'ಕೊಡವ' ನಮೂದು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟ ನಿರ್ಧಾರ ತೆಗೆದುಕೊಂಡಂತೆ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಈವರೆಗೆ ಇದ್ದ **'ಕೊಡಗರು'** ಎಂಬ ಪದದ ಬದಲಾಗಿ **'ಕೊಡವ'** ಎಂದು ಬದಲಾಯಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ (ಗೆಜೆಟ್ ನೋಟಿಫಿಕೇಷನ್) ಸರ್ಕಾರ ಮಂಗಳವಾರ ಪ್ರಕಟಿಸಿದೆ.

ಭಾರತ ಸಂವಿಧಾನದ ಅನುಚ್ಛೇದ 15(4)ರಂತೆ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶಾತಿ ಹಾಗೂ ಅನುಚ್ಛೇದ 16(4)ರನ್ವಯ ಔದ್ಯೋಗಿಕ ನೇಮಕಾತಿಗಳಲ್ಲಿ ಮೀಸಲಾತಿ ಕಲ್ಪಿಸಲು ರಾಜ್ಯದ ಹಿಂದುಳಿದ ವರ್ಗಗಳನ್ನು ಗುರುತಿಸಿ ಪ್ರವರ್ಗವಾರು ವಿಂಗಡಿಸಿ ರಾಜ್ಯ ಸರ್ಕಾರದ ಆದೇಶ ಸಂಖ್ಯೆ : ಸಕಇ 255 ಬಿಸಿಎ 2000 ದಿನಾಂಕ 30-03-2002 ಅನ್ನು ಹೊರಡಿಸಲಾಗಿರುತ್ತದೆ. ಆ ಮೀಸಲಾತಿ ಪಟ್ಟಿಯ ಪ್ರವರ್ಗ-3ಎ ಕ್ರಮ ಸಂಖ್ಯೆ 2ರಲ್ಲಿ **'ಕೊಡಗರು'** ಜಾತಿ ನಮೂದಾಗಿರುತ್ತದೆ. ಡಾ.ಸಿ.ಎಸ್.ದ್ವಾರಕಾನಾಥ್ ಅವರ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ವಿಶೇಷ ವರದಿ -2010ರ ಸಲಹೆ ಸಂಖ್ಯೆ 1ರಲ್ಲಿ ಈ ಕೆಳಕಂಡಂತೆ ಸಲಹೆ ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಕಇ/225/ಬಿಸಿಎ/2010 ದಿನಾಂಕ 30-03-2002ರ ಪ್ರವರ್ಗ -3ಎ ಕ್ರಮ ಸಂಖ್ಯೆ 2ರಲ್ಲಿ **'ಕೊಡಗರು'** ಎಂಬ ಪದವನ್ನು ತೆಗೆದು ಹಾಕಿ **'ಕೊಡವ'** ಮತ್ತು **'ಕೊಡವರು'** ಎಂದು ಸೇರಿಸಬಹುದಾಗಿದೆ ಎಂದು ಆಯೋಗವು ಸಲಹೆ ನೀಡಿರುವುದಾಗಿ ರಾಜ್ಯ ಪತ್ರದಲ್ಲಿ ತಿಳಿಸಲಾಗಿದ್ದು, ಅಂತಿಮವಾಗಿ ಸರ್ಕಾರಿ ಆದೇಶ ಸಂಖ್ಯೆ ಹಿಂವಕ 04 ಬಿಸಿಎ 2021 ದಿನಾಂಕ 09-10-2023 ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಕಇ 225 ಬಿಸಿಎ 2000 ದಿನಾಂಕ 30-03-2002ರ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಪ್ರವರ್ಗ-3ಎ ಕ್ರಮ ಸಂಖ್ಯೆ 2ರಲ್ಲಿ ನಮೂದಾಗಿರುವ **'ಕೊಡಗರು'** (kodagaru) ಎಂಬುದರ ಬದಲಾಗಿ ಕನ್ನಡ ಆವೃತ್ತಿಯಲ್ಲಿ **'ಕೊಡವ'** ಎಂದು ಮತ್ತು ಇಂಗ್ಲಿಷ್ ಆವೃತ್ತಿಯಲ್ಲಿ (kodava) ಎಂದು ಬದಲಾಯಿಸಿ ಆದೇಶಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಸ್ಲಿಂ ಸಮುದಾಯಕ್ಕೆ 10 ಸಾವಿರ ಕೋಟಿ ಘೋಷಣೆ ಪ್ರತಿಧ್ವನಿ

ವಿಧಾನಸಭೆಯಲ್ಲಿ ಆಡಳಿತ-ವಿಪಕ್ಷಗಳ ನಡುವೆ ವಾಕ್ಸಮರ

● ಈ ಹೇಳಿಕೆ ವಾಪಸ್ ಪಡೆಯುವಂತೆ ಆಗ್ರಹ ● ಸಿಎಂ ಹೇಳಿಕೆ ಖಂಡಿಸಿ ವಿಪಕ್ಷಗಳು ಸಭಾತ್ಯಾಗ



ಬೆಂಗಳೂರು, ಡಿ.6(ಕೆಎಂಶಿ)- ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ 10,000 ಕೋಟಿ ರೂ. ನೀಡುವುದಾಗಿ ಮಾಡಿದ ಘೋಷಣೆ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ, ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಪ್ರಶ್ನೋತ್ತರ ವೇಳೆ ಮುಗಿಯುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯರು, ಮುಖ್ಯಮಂತ್ರಿ ಅವರು ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ ಸಮರಕ್ಕೆ ಎಡೆಮಾಡಿಕೊಟ್ಟಿತು.

ಪ್ರತಿಪಕ್ಷಗಳ ಒತ್ತಡಕ್ಕೆ ಸರ್ಕಾರ ಮಣಿಯದಿದ್ದಾಗ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಇದಕ್ಕೂ ಮುನ್ನ ದೇಶದ ಆಸ್ತಿಯಲ್ಲಿ ಮುಸ್ಲಿಮರಿಗೂ ಹಂಚಿಕೆ ಮಾಡುತ್ತೇನೆ ಎಂದು ಹುಬ್ಬಳ್ಳಿಯಲ್ಲಿ ನಡೆದ ಅಲ್ಪಸಂಖ್ಯಾತರ ಸಭೆಯಲ್ಲಿ ಮುಖ್ಯಮಂತ್ರಿ ಅವರು ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯಬೇಕು.

ಇದು ನಿಮ್ಮ ಮನೆಯ ಸ್ವಂತ ಆಸ್ತಿಯಲ್ಲ, ನೂರಾರು ಕೋಟಿ ಜನರ ಬೆವರಿನಿಂದ ಕಟ್ಟಿದ ರಾಷ್ಟ್ರ, ನೀವು ಸದನ ನಡೆಯುವಾಗ ಒಂದೇ ಸಮುದಾಯಕ್ಕೆ 10,000 ಕೋಟಿ ರೂ. ಘೋಷಣೆ ಮಾಡಿರುವುದು ಸರಿಯಲ್ಲ, ಈ ಬಗ್ಗೆ ವಿವರಣೆ ಕೊಡಿ ಎಂದು ಒತ್ತಾಯಿಸಿದರು. ಇದಕ್ಕೆ ಆಡಳಿತ ಪಕ್ಷದ ಕಡೆಯಿಂದ ಆಕ್ಷೇಪ ವ್ಯಕ್ತವಾಗಿ ಒಮ್ಮೆಲೇ ಎಲ್ಲರೂ ಎದ್ದು ನಿಂತು ಬಿಜೆಪಿ ಸದಸ್ಯರ ವಿರುದ್ಧ ಮುಗಿಬಿದ್ದರು. ಈ ಸಂದರ್ಭದಲ್ಲಿ ಯಾರು ಏನು ಮಾತನಾಡುತ್ತಿದ್ದಾರೆ ಎಂಬುದು ತಿಳಿಯಲಾಗಲಿಲ್ಲ, ಸಭಾಧ್ಯಕ್ಷ ಯು.ಟಿ. ಖಾದರ್ ಮಾಡಿದ ಮನವಿಗೂ ಸದಸ್ಯರು ಸ್ಪಂದಿಸಲಿಲ್ಲ, ಇದರಿಂದ ಕೋಲಾಹಲದ ವಾತಾವರಣ ಉಂಟಾಯಿತು.

ಕೊನೆಗೆ ಸಭಾಧ್ಯಕ್ಷರು ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರಿಗೆ ಮಾತನಾಡಲು ಅವಕಾಶ ನೀಡುತ್ತಿದ್ದಂತೆ ಗೊಂದಲ ತಿಳಿಗೊಂಡಿತು. ನಂತರ ಮಾತನಾಡಿದ ಅಶೋಕ್, ಬರ ಪರಿಹಾರ ಕಾಮಗಾರಿ ಕೈಗೊಂಡಿಲ್ಲ, ರೈತರ ಬೆಳೆ ಹಾನಿಗೆ ಹಣ ನೀಡಿಲ್ಲ, ಸದನ ನಡೆಯುವ ಸಂದರ್ಭದಲ್ಲಿ ನೀಡಿರುವ ಒಂದು ಸಮುದಾಯದ ಅಭಿವೃದ್ಧಿಗೆ 10,000 ಕೋಟಿ ರೂ. ನೀಡುವ ಘೋಷಣೆಯನ್ನು ಹಿಂದಕ್ಕೆ ಪಡೆಯಬೇಕೆಂದರು.

ಮುಖ್ಯಮಂತ್ರಿಗಳು ತಮ್ಮ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ, ಸದನದಲ್ಲಿ ಮಾತನಾಡಲು ಅವಕಾಶ ನೀಡುವುದಿಲ್ಲ ಎಂದು ಅಶೋಕ್ ಹೇಳುತ್ತಿದ್ದಂತೆ ಮತ್ತೆ ಆಡಳಿತ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶ ಮಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಹಣವನ್ನು ಒಂದೇ ಬಾರಿಗೆ ಬಿಡುಗಡೆ ಮಾಡುತ್ತೇವೆ ಎಂದು ಹೇಳಿಲ್ಲ, ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ.

ಮುಖ್ಯಮಂತ್ರಿ ಅವರು ಮಾಡಿರುವ ಘೋಷಣೆ ಆಕ್ಷೇಪಾರ್ಹವಲ್ಲ ಎಂದು ಹೇಳುತ್ತಿದ್ದಂತೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಹೇಳಿಕೆಯನ್ನು ಖಂಡಿಸಿ, ಸಭಾತ್ಯಾಗ ಮಾಡಿದರು.

ಹಿಂದೂ ರಾಷ್ಟ್ರ ಪರಿಕಲ್ಪನೆಯಿಂದ ರಾಷ್ಟ್ರದಲ್ಲಿ ಕೋಮುವಾದ ಮೇಳೈಸುತ್ತಿದೆ

ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಆರೋಪ



ಮೈಸೂರು, ಡಿ.6(ಎಂಟಿವೈ)- ಸಂವಿಧಾನ ವಿರೋದವಾದ ಸಂಘ ಪರಿವಾರ ಚಿಂತನೆ ಮತ್ತು ಬಿಜೆಪಿಯ ಹಿಂದೂ ರಾಷ್ಟ್ರದ ಪರಿಕಲ್ಪನೆಯಿಂದ ರಾಷ್ಟ್ರದಲ್ಲಿ ಕೋಮುವಾದ ಮೇಳೈಸುತ್ತಿದೆ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಆರೋಪಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣದ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ 'ಹಿಂದೂ ರಾಷ್ಟ್ರ ಪರಿಕಲ್ಪನೆಯಲ್ಲಿ ಕೋಮುವಾದಿ ರಾಜಕಾರಣ-ಸಂಸದೀಯ ಪ್ರಜಾಪ್ರಭುತ್ವದ ಸವಾಲುಗಳು' ವಿಷಯ ಕುರಿತ ಜನ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಹಿಂದೂ ಧರ್ಮದ ವಿರೋಧಿಯಾಗಿರಲಿಲ್ಲ. ಆದರೆ, ಹಿಂದೂ ಧರ್ಮದಲ್ಲಿನ ವರ್ಣಾಶ್ರಮ, ಜಾತಿ ಪದ್ಧತಿ, ಮೂಢ ನಂಬಿಕೆಗಳ ನಿರ್ಮೂಲನೆಗೆ ಪಣತೊಟ್ಟಿದ್ದರು. ಅಂಬೇಡ್ಕರ್ ಅವರಂತೆ ಸ್ವಾಮಿ ವಿವೇಕಾನಂದರು, ನಾರಾಯಣಗುರು, ರಾಮಕೃಷ್ಣ ಪರಮಹಂಸರು, ರಾಷ್ಟ್ರಕವಿ ಕುವೆಂಪು ಸಹ ಹಿಂದೂ ವಿರೋಧಿಗಳಾಗಿರಲಿಲ್ಲ. ಆದರೆ, ಅವರನ್ನು ಅಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ಹಿಂದೂ ವಿರೋಧಿ ಎಂಬ ಪಟ್ಟವನ್ನು ಕಟ್ಟಿದರು ಎಂದು ವಿಷಾದಿಸಿದರು.

ಬಿಜೆಪಿ, ಸಂಘ ಪರಿವಾರದ ಹಿಂದೂ ರಾಷ್ಟ್ರದ ಕಲ್ಪನೆಯಲ್ಲಿ ರಾಮನನ್ನು ಪೂಜಿಸುವುದು, ಮಂದಿರಗಳನ್ನು ಕಟ್ಟುವುದು ಮಾತ್ರವಲ್ಲ. ದೇಶದ ಸಂವಿಧಾನವನ್ನು ದುರ್ಬಲಗೊಳಿಸಿ ವರ್ಣಾಶ್ರಮ ಪದ್ಧತಿಯನ್ನು ಜಾರಿ ಮಾಡುವ ಉದ್ದೇಶವಿದೆ. ಆ ಕಾರಣದಿಂದಾಗಿ ಹಿಂದೂ ರಾಷ್ಟ್ರ ನಿರ್ಮಾಣವು ಅಂಬೇಡ್ಕರ್ ಮತ್ತು ಸಂವಿಧಾನ ವಿರೋಧಿಯಾಗಿ ಮಾರ್ಪಟ್ಟಿದೆ. ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ಕೋಮು ರಾಜಕಾರಣದ ಅಪಾಯ ಜನತೆಗೆ ಅರ್ಥವಾಗುತ್ತಿಲ್ಲ. ದೇಶದ ಜನಸಂಖ್ಯೆಯಲ್ಲಿ ಶೇ.65ರಷ್ಟಿರುವ ಯುವ ಸಮೂಹ ಕೋಮುವಾದಿಗಳ ಜತೆ ಗುರುತಿಸಿಕೊಂಡಿದ್ದಾರೆ. ಇದರಿಂದ ಒಂದು ಜಾತಿಗೆ ಅನುಕೂಲವಾದರೆ ಶೂದ್ರ, ಅಸ್ಪೃಶ್ಯ ಸಮುದಾಯಗಳ ಹಕ್ಕು ಕಸಿದುಕೊಳ್ಳಲಾರಂಭಿಸಿವೆ. ಇದನ್ನು ಅಸ್ಪೃಶ್ಯ ಸಮುದಾಯ ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೋಮುವಾದಿಗಳ ಆಡಳಿತದಲ್ಲಿ ಸಂವಿಧಾನ ದುರ್ಬಲವಾಗುವುದರ ಜತೆಗೆ ಮೀಸಲಾತಿಗೂ ಪರೋಕ್ಷ ಅಪಾಯ ಎದುರಾಗುತ್ತಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಆಡಳಿತದಲ್ಲಿ ಮೀಸಲಾತಿ ತೆಗೆಯುತ್ತಿಲ್ಲ. ಆದರೆ, ಶಿಕ್ಷಣ ಮತ್ತು ಉದ್ಯೋಗ ಸೇರಿದಂತೆ ಎಲ್ಲವನ್ನೂ ಖಾಸಗೀಕರಣ ಮಾಡುವ ಸಂಚು ನಡೆಸುತ್ತಿದೆ. ಸರ್ಕಾರಿ ಸಂಸ್ಥೆಗಳಲ್ಲಿ ನಾವು ಮೀಸಲಾತಿ ಕೇಳಬಹುದು. ಆದರೇ, ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ಇರುವುದಿಲ್ಲ. ಖಾಸಗಿ ಕ್ಷೇತ್ರಗಳಲ್ಲೂ ಮೀಸಲಾತಿ ಕೇಳುವ ಹೋರಾಟ ಆರಂಭಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೂಡು ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಲಿತರು, ಕೋಮುವಾದಿ ಬಿಜೆಪಿಯನ್ನು ರಾಜ್ಯದಲ್ಲಿ ಕಿತ್ತೊಗೆಯಲು ನಿರ್ಧರಿಸಿದ್ದರು. ಅದು ಯಶಸ್ವಿಯಾಗಿರುವಂತೆ ಮುಂಬರುವ ಲೋಕಸಭಾ ಚುನಾವಣೆಯಲ್ಲೂ ದೇಶದಲ್ಲಿ ಬಿಜೆಪಿಯನ್ನು ಸಂಪೂರ್ಣವಾಗಿ ಸೋಲಿಸುವ ನಿರ್ಣಯ ಕೈಗೊಳ್ಳುವ ಅನಿವಾರ್ಯತೆ ಇದೆ. ಪ್ರಧಾನಿ ನರೇಂದ್ರ ಮೋದಿ ಇದುವರೆಗೂ ಕೈಗೊಂಡಿರುವ ನಿರ್ಣಯಗಳು, ಕಾರ್ಯಕ್ರಮಗಳು ಸಂಸದೀಯ ಪ್ರಜಾಪ್ರಭುತ್ವದ ವಿರೋಧಿ ಧೋರಣೆಗಳಿಂದ ಕೂಡಿವೆ. ಬಿಜೆಪಿಯವರು ದೇಶದಲ್ಲಿ ಮೋದಿ ಎನ್ನುವ ಭ್ರಾಂತಿ ಸೃಷ್ಟಿಸಿ ಜನ ಸಾಮಾನ್ಯರಲ್ಲಿ ವೈದಿಕ ತತ್ವ, ಸಿದ್ಧಾಂತಗಳನ್ನು ಬಿತ್ತುತ್ತಿದ್ದಾರೆ. ದೇವರು, ಧರ್ಮದ ವಿಚಾರ ಮುಂದಿಟ್ಟು, ಜನರನ್ನು ಮರಳು ಮಾಡಿ ಚುನಾವಣೆ ಗೆಲ್ಲುತ್ತಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾವು ಅದಕ್ಕೆ ಅವಕಾಶ ನೀಡಲಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಅವನತಿ ಮೈಸೂರಿನಿಂದಲೇ ಪ್ರಾರಂಭವಾಗಲಿದೆ ಎಂದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ, ರಾಜ್ಯ ಸಂಘಟನಾ ಸಂಚಾಲಕ ಎನ್. ವೆಂಕಟೇಶ್, ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಉಪನ್ಯಾಸಕಿ ಡಾ.ಪದಶ್ರೀ, ಉಪಸ್ಥಿತರಿದ್ದರು. ದಸಂಸ ಜಿಲ್ಲಾ ಖಜಾಂಚಿ ಬಿ.ಡಿ. ಶಿವಬುದ್ದಿ, ರಾಜ್ಯ ಸಂಶೋಧಕರ ವೇದಿಕೆ ಅಧ್ಯಕ್ಷ ರಾಜೇಶ್ ಚಾಕನಹಳ್ಳಿ ಮುಂತಾದವರು ವೇದಿಕೆಯಲ್ಲಿದ್ದರು. ಶಂಭು ಲಿಂಗಸ್ವಾಮಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹೆಗ್ಗನೂರು ನಿಂಗರಾಜು ಮತ್ತು ಕಲ್ಲಹಳ್ಳಿ ಕುಮಾರ್ ತಂಡದವರು ಕ್ರಾಂತಿಗೀತೆ ಹಾಡಿದರು.

ಹರಕೆ ಪಾದಯಾತ್ರೆ ಮುಂದೂಡಿಕೆ



ಮೈಸೂರು, ಡಿ.6(ಜಿಎ)-ಅವಿವಾಹಿತ ಯುವ ರೈತರ ವಿವಾಹ ಬೇಡಿಕೆ ಈಡೇರಲು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯು ಡಿ.8ರಿಂದ 10ರವರೆಗೆ ನಡೆಸಲು ಉದ್ದೇಶಿಸಿದ್ದ ಆದಿಚುಂಚನಗಿರಿ ಕ್ಷೇತ್ರಕ್ಕೆ ಹರಕೆ ಪಾದಯಾತ್ರೆಯನ್ನು ಡಿ.29ರಿಂದ 31ಕ್ಕೆ ಮುಂದೂಡಲಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷೆ ಎಚ್.ಎಲ್. ಯಮುನಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ರೈತರು ಕಾತುರರಾಗಿದ್ದಾರೆ. ಆದರೆ, ಅನೇಕ ರೈತರು ಕೃಷಿ ಚಟುವಟಿಕೆ ಕಾರಣವೊಡ್ಡಿ ಪಾದಯಾತ್ರೆ ಮುಂದೂಡುವಂತೆ ಒತ್ತಾಯಿಸಿದ್ದಾರೆ. ಹಾಗಾಗಿ, ಡಿ.29ರಂದು ಬೆಳಿಗ್ಗೆ 7ಕ್ಕೆ ಮೈಸೂರು ಬೆಂಗಳೂರು ವರ್ತುಲ ರಸ್ತೆಯ ಕೆಂಪೇಗೌಡರ ವೃತ್ತದಿಂದ ಪಾದಯಾತ್ರೆ ಆರಂಭವಾಗಲಿದೆ. ಧರ್ಮಸ್ಥಳದಲ್ಲಿ ಅತ್ಯಾಚಾರ ಮತ್ತು ಕೊಲೆಗೀಡಾದ ಸೌಜನ್ಯಾಗೆ ನ್ಯಾಯ ದೊರೆಯಬೇಕು ಎಂಬ ಹರಕೆಯೂ ನಮ್ಮದಾಗಿದೆ. 150 ಜನರು ಈಗಾಗಲೇ ನೋಂದಣಿಯಾಗಿದ್ದಾರೆ. ಆಸಕ್ತರು ಭಾಗವಹಿಸಲು ಮೊ.ಸಂ. 99026 98623 ಸಂಪರ್ಕಿಸಬಹುದು ಎಂದು ತಿಳಿಸಿದರು.

> **ಮೈಸೂರು-ಕೊಡಗು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ನಾನೂ ಸೇರಿದಂತೆ 16 ಮಂದಿ ಆಕಾಂಕ್ಷಿಗಳಿದ್ದು, ಪಕ್ಷದ ವರಿಷ್ಠರು ಸರ್ವೆ ನಡೆಸಿ, ಅವಕಾಶ ನೀಡುತ್ತಾರೆ. ಯಾರಿಗೆ ಟಿಕೆಟ್ ನೀಡಿದರೂ ಸಂತೋಷ. ಅವರ ಪರ ಕೆಲಸ ಮಾಡಿ ಪಕ್ಷ ಅಧಿಕಾರಕ್ಕೆ ತರುವಲ್ಲಿ ಶ್ರಮಿಸುತ್ತೇನೆ.**
> -ಡಾ.ಸುಶ್ರುತ್ ಗೌಡ, ವ್ಯವಸ್ಥಾಪಕ ನಿರ್ದೇಶಕ, ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ

ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ ಎಂ.ಡಿ.ಡಾ.ಸುಶ್ರುತ್ ಗೌಡ ಮಾತನಾಡಿ, ಯಾತ್ರೆಯ ಸದುದ್ದೇಶ ಅರಿತು ನಾನು ಪಾದಯಾತ್ರೆಗೆ ಜತೆಯಾಗಿದ್ದೇನೆ. ಭಾರತ್ ಜೋಡೊ ಯಾತ್ರೆಯಲ್ಲಿ ಭಾಗಿಯಾದ ಅನುಭವವಿದ್ದು, ಈ ಪಾದಯಾತ್ರೆಗೆ ಸಹಕಾರ ನೀಡಲಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಸದಸ್ಯೆ ಸುಶೀಲಾ ನಂಜಪ್ಪ, ವೇದಿಕೆ ಮಂಡ್ಯ ಜಿಲ್ಲಾಧ್ಯಕ್ಷ ಎ.ಎಸ್.ಸಿದ್ದರಾಜು, ಒಕ್ಕಲಿಗ ಸಂಘದ ಜಿಲ್ಲಾ ನಿರ್ದೇಶಕ ಮಂಜೇಗೌಡ, ಮುಖಂಡ ವಿಜೇಂದ್ರ ಉಪಸ್ಥಿತರಿದ್ದರು.

ಪಿರಿಯಾಪಟ್ಟಣದಲ್ಲಿ ಕುಡಿತ ಬಿಡಿಸುವ ಉಚಿತ ಶಿಬಿರ

ಮೈಸೂರು, ಡಿ. 6-ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಮಠಗಳು ಮತ್ತು ಸಂಘಸಂಸ್ಥೆಗಳ ಸಹಯೋಗದೊಂದಿಗೆ 2023 ಡಿ.18ರಿಂದ 27ರವರೆಗೆ ಕುಡಿತ ಬಿಡಿಸುವ 17ನೆಯ ಉಚಿತ ಶಿಬಿರವನ್ನು ಪಿರಿಯಾಪಟ್ಟಣದ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಆದಷ್ಟು ಜಾಗ್ರತೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಈ ಸಾಮಾಜಿಕ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳವರು ಸಹ ಮದ್ಯವ್ಯಸನಿಗಳನ್ನು ಕರೆದುಕೊಂಡು ಬಂದು ಶಿಬಿರಕ್ಕೆ ಸೇರಿಸಬಹುದಾಗಿದೆ. ಶಿಬಿರಾರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ಭಾವಚಿತ್ರ, ಅಗತ್ಯ ಬಟ್ಟೆ ಹಾಗೂ ಹೊದಿಕೆಗಳನ್ನು ತೆಗೆದುಕೊಂಡು ಬರಬೇಕು.

ಮಾಹಿತಿಗಾಗಿ, ಚುಂಚನಹಳ್ಳಿ ಶ್ರೀಗಳು, ಡಾ.ಎಂ.ಪಿ. ಸೋಮಶೇಖರ್ ಮತ್ತು ಎಸ್.ಬಸವರಾಜು ಮೊ.9945494612, 9448653897 ಮತ್ತು 9886476142 ಸಂಪರ್ಕಿಸಲು ಕೋರಲಾಗಿದೆ.

ನಾಳೆ ಹತ್ತನೇ ವಾರ್ಷಿಕೋತ್ಸವ



ಮೈಸೂರು, ಡಿ.6(ಜಿಎ)-ಮಾತಾ ಮೆಲೋಡಿಸ್ ಆರ್ಕೆಸ್ಟ್ರಾ ತಂಡದಿಂದ 10ನೇ ವಾರ್ಷಿಕೋತ್ಸವ ಸಮಾರಂಭವನ್ನು ಡಿ.8ರಂದು ಸಂಜೆ 4.30ಕ್ಕೆ ನಗರದ ಪುರಭವನದಲ್ಲಿ ಆಯೋಜಿಸಲಾಗಿದೆ ಎಂದು ತಂಡದ ವ್ಯವಸ್ಥಾಪಕ ಎಂ.ಪುಟ್ಟಮಹದೇವಪ್ಪ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾರ್ಯಕ್ರಮವನ್ನು ನಗರ ಸಶಸ್ತ್ರ ಮೀಸಲು ಪಡೆ ಉಪ ಪೊಲೀಸ್ ಆಯುಕ್ತ ಎ.ಮಾರುತಿ ಉದ್ಘಾಟಿಸಲಿದ್ದಾರೆ. ನೈಜ ಸಂಗೀತ ವಾದ್ಯಗಳ ಸಹಕಾರದೊಂದಿಗೆ ಕನ್ನಡ ಹಾಗೂ ಹಿಂದಿ ಚಲನಚಿತ್ರ ಗೀತೆಗಳನ್ನು ಗಾಯಕರು ಹಾಡಲಿದ್ದಾರೆ. ಹಿರಿಯ ಕಲಾವಿದರಾದ ರಾಮಸ್ವಾಮಿ, ಗೋಪಾಲ್, ರಾಜು ಮಾಸ್ಟರ್ ಅವರನ್ನು ಈ ವೇಳೆ ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ತಂಡದ ಗಾಯಕಿ ಪ್ರೇಮಕುಮಾರಿ, ಜಿ.ಪಾರ್ಥಸಾರಥಿ ಉಪಸ್ಥಿತರಿದ್ದರು.

ರುಡ್‌ಸೆಟ್ ಸಂಸ್ಥೆಯಲ್ಲಿ ಲಘು ವಾಹನ ಚಾಲನಾ ತರಬೇತಿ ಸಮಾರೋಪ



ಮೈಸೂರು, ಡಿ. 6-ಮೈಸೂರಿನ ರುಡ್‌ಸೆಟ್ ಸಂಸ್ಥೆಯು ಎನ್‌ಆರ್‌ಎಲ್‌ಎಂ ಯೋಜನೆಯಡಿಯಲ್ಲಿ 30 ದಿನಗಳ ಉದ್ಯಮಶೀಲತಾಭಿವೃದ್ಧಿಯಲ್ಲಿ ಲಘು ಮೋಟಾರ್ ವಾಹನ ಚಾಲನಾ ತರಬೇತಿ ನಡೆಸಲಾಗಿದ್ದು, ತರಬೇತಿ ಸಮಾರೋಪ ಸಮಾರಂಭ ಸಂಸ್ಥೆಯ ಆವರಣದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯಿತ್ರಿ ಭಾಗವಹಿಸಿದ್ದರು.

ಬಳಿಕ ಮಾತನಾಡಿದ ಅವರು, ಎನ್‌ಆರ್‌ಎಲ್‌ಎಂ ವಿನೂತನವಾದ ಕಾರ್ಯಕ್ರಮವಾಗಿದ್ದು, ಗ್ರಾಮಗಳ ತ್ಯಾಜ್ಯ ವಿಲೇವಾರಿಗೆ ಮಹಿಳೆಯರು ಮುಂದೆ ಬಂದು ಗ್ರಾಮಗಳ ಸ್ವಚ್ಛತೆಯ ಜೊತೆಗೆ ಸೌಂದರ್ಯವನ್ನು ಹೆಚ್ಚಿಸುವ ಕಾರ್ಯಕ್ಕೆ ಮುನ್ನುಡಿ ಬರೆಯುವ ಕಾರ್ಯ ಅತ್ಯಂತ ಶ್ಲಾಘನೀಯವಾದದ್ದು. ಘನತ್ಯಾಜ್ಯ ವಿಲೇವಾರಿಯಲ್ಲಿ ಸಂಗ್ರಹಿಸುವ ವಸ್ತು ಕಸವಲ್ಲ, ಅದು ಸಂಪನ್ಮೂಲ ಎಂದು ಪರಿಗಣಿಸಬೇಕು. ಅದರ ವ್ಯವಸ್ಥಿತ ವಿಲೇವಾರಿಗೆ ಸ್ಥಳೀಯ ಸಾರ್ವಜನಿಕರು, ಸ್ವಯಂ ಸೇವಾ ಸಂಸ್ಥೆಯವರೂ ಕೈಜೋಡಿಸಿ ಕೆಲಸ ಮಾಡಬೇಕು. ಯಾವ ಕೆಲಸವು ಕೀಳೂ ಅಲ್ಲ, ಮೇಲೂ ಅಲ್ಲ ಎಂಬುದನ್ನು ಅರಿತು ನಾವು ಶ್ರದ್ಧೆಯಿಂದ ಮಾಡುವ ಪ್ರತಿ ಕೆಲಸ ದೊಡ್ಡ ಫಲವನ್ನು ನೀಡುತ್ತದೆ. ನಾವು ಮಾಡುವ ಕೆಲಸವನ್ನು ಪ್ರೀತಿ ಮತ್ತು ವಿಶ್ವಾಸದಿಂದ ಮಾಡುವುದರಿಂದ ಕೆಲಸದಲ್ಲಿ ಗೌರವ ದೊರೆಯುತ್ತದೆ ಎಂದು ತಿಳಿ ಹೇಳಿದರು. ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಸ್ವ ಉದ್ಯೋಗ ಮಾಡಿ ಸ್ವಾವಲಂಬನೆ ಸಾಧಿಸಲು ಹಲವಾರು ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದರ ಫಲವನ್ನು ಪಡೆದು ನೀವುಗಳು ಸ್ವಾವಲಂಬಿಗಳಾಗಿ ಆತ್ಮವಿಶ್ವಾಸದಿಂದ ಬದುಕಬೇಕು. ನಮ್ಮ ಬದುಕಿಗೆ ನಾವೇ ಚಾಲಕರು, ಹಾಗೆಯೇ ನಾವೇ ನಿಯಂತ್ರಕರು. ಬದುಕು ನಮ್ಮ ನಿಯಂತ್ರಣದಲ್ಲಿದ್ದಾಗ ನಾವಿಡುವ ಪ್ರತಿ ನಿರ್ಧಾರದ ಹೆಜ್ಜೆಗಳನ್ನು ಸದೃಢದಿಂದಿಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ನಮ್ಮ ಜೀವನವೆಂಬ ಬಂಡಿಯಲ್ಲಿ ಹಾದಿ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಗೇರ್‌ಗಳನ್ನು ಬದಲಾಯಿಸುತ್ತಾ ಸಾಗಬೇಕು ಪ್ರಸ್ತುತತೆಗೆ ಹೊಂದಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣರಾಜು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಸವಿಲೇವಾರಿ ಮಾಡುವುದು ಬಹುದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ. ಅದರ ಭಾಗವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಸ ವಿಲೇವಾರಿಯನ್ನು ವ್ಯವಸ್ಥಿತವಾಗಿ ಮಾಡಲು ಗ್ರಾಮೀಣ ಜನರನ್ನು ಮನವೊಲಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಶ್ರೀಮತಿ ಆಶಾ ಎ.ಆರ್., ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಎನ್‌ಆರ್‌ಎಲ್‌ಎಂ, ಮೈಸೂರು, ಬಸವರಾಜು, ಜಿಲ್ಲಾ ವ್ಯವಸ್ಥಾಪಕರು, ಎನ್‌ಆರ್‌ಎಲ್‌ಎಂ, ಮೈಸೂರು ಮತ್ತು ಸುಬ್ರಮಣ್ಯ, ಮ್ಯಾನೇಜರ್, ಮಾಂಡೋವಿ ಡ್ರೈವಿಂಗ್ ಸ್ಕೂಲ್ ಉಪಸ್ಥಿತರಿದ್ದರು.

ಸರ್ಕಾರಿ ಕಾಲೇಜುಗಳಲ್ಲಿ ಕ್ಯಾಂಪಸ್ ಇಂಟರ್‌ವ್ಯೂಗೆ ಎಎಪಿ ಆಗ್ರಹ



ಮೈಸೂರು, ಡಿ.6(ಜಿಎ)-ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಕ್ಯಾಂಪಸ್ ಸಂದರ್ಶನಗಳ ಮೂಲಕ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸಲು ಸರ್ಕಾರ ಮುಂದಾಗಬೇಕು ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯ ಯುವಘಟಕದ ಅಧ್ಯಕ್ಷ ಲೋಹಿತ್ ಜಿ.ಹನುಮಾಪುರ ಆಗ್ರಹಿಸಿದರು.

ನಗರದ ಪತ್ರಕರ್ತರ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಸಗಿ ಕಾಲೇಜಿನ ವಿದ್ಯಾರ್ಥಿಗಳು ಪದವಿ ಪೂರೈಸುವ ಮುನ್ನ ಕ್ಯಾಂಪಸ್‌ನಲ್ಲಿಯೇ ವಿವಿಧ ಕಂಪನಿಗಳಿಂದ ಉದ್ಯೋಗಗಳನ್ನು ಪಡೆಯುತ್ತಿದ್ದಾರೆ. ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೂ ಈ ಸೌಲಭ್ಯ ದೊರೆಯಬೇಕು. ಈ ಬಗ್ಗೆ ನಮ್ಮ ಪಕ್ಷ 'ನಮಗೇಕಿಲ್ಲ ಕ್ಯಾಂಪಸ್ ಇಂಟರ್‌ವ್ಯೂ? ಸರ್ಕಾರಿ ಕಾಲೇಜಿನ ಕೂಗು' ಎಂಬ ರಾಜ್ಯಮಟ್ಟದ ಅಭಿಯಾನ ಹಮ್ಮಿಕೊಳ್ಳುತ್ತಿದ್ದು, ವಿದ್ಯಾರ್ಥಿಗಳಿಗೆ ಕರಪತ್ರ ನೀಡಿ ಅಭಿಪ್ರಾಯ ಸಂಗ್ರಹಿಸುತ್ತೇವೆ. ಇದನ್ನು ಆಧಾರವಾಗಿಟ್ಟುಕೊಂಡು ಕ್ಯಾಂಪಸ್ ಸಂದರ್ಶನ ಕಡ್ಡಾಯಗೊಳಿಸುವಂತೆ ಹೈಕೋರ್ಟ್‌ನಲ್ಲಿಯೂ ಅರ್ಜಿ ಸಲ್ಲಿಸುತ್ತೇವೆ ಎಂದರು.

ಕೆಲ ಖಾಸಗಿ ಕಂಪನಿಗಳು ಸರ್ಕಾರಿ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ತಮ್ಮ ಕಂಪನಿಗೆ ನೇಮಿಸಿಕೊಳ್ಳಲು ಸಿದ್ಧವಾಗಿವೆ. ಈ ಬಗ್ಗೆ ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ಇಲ್ಲಿನ ಕಾಲೇಜುಗಳಲ್ಲಿ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಲು ಒತ್ತಾಯಿಸುತ್ತೇವೆ. ನಮ್ಮ ಉದ್ದೇಶವನ್ನು ಬೆಂಬಲಿಸಲು ಮೊ.ಸಂ.76691 00500 ಮಿಸ್ ಕಾಲ್ ನೀಡಬಹುದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಯುವ ಘಟಕದ ಜಿಲ್ಲಾಧ್ಯಕ್ಷ ಕಿರಣ್ ಕಲ್ಯಾಣ್, ಸದಸ್ಯರಾದ ಧರ್ಮಶ್ರೀ, ಹರೀಶ್, ಜನಾರ್ಧನ್ ಉಪಸ್ಥಿತರಿದ್ದರು.

ಡಿ.10ರಿಂದ ಬೇಲದಕುಪ್ಪೆ ಮಾದಪ್ಪನ ಜಾತ್ರಾ ಮಹೋತ್ಸವ

ಸಿದ್ಧತೆ ಬಗ್ಗೆ ಜಿಲ್ಲಾಡಳಿತ, ಧಾರ್ಮಿಕ ದತ್ತಿ, ಅರಣ್ಯ ಇಲಾಖೆ ಅಧಿಕಾರಿಗಳ ಸಭೆ



ಧಾರ್ಮಿಕ ಕಾರ್ಯಕ್ರಮಗಳು

ಡಿ.10 ರಿಂದ ಜಾತ್ರಾ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದೆ. ಸಂಜೆ ಭಜನೆ ನಡೆಯಲಿದೆ. ಡಿ.11ರ ಸೋಮವಾರ ದೇವಸ್ಥಾನ ಸಮೀಪವಿರುವ ಕೆರೆಯಲ್ಲಿ ವಿವಿಧ ಪೂಜೆಗಳನ್ನು ಸಲ್ಲಿಸಿ, ಹಾಲರವಿ ಸೇವೆ ತೆಗೆದುಕೊಂಡು ದೇವರನ್ನು ದೇವಾಲಯದವರೆಗೂ ಉದ್ಭವ ಸ್ಥಾನಕ್ಕೆ ಕರೆತರಲಾಗುವುದು. ರಾತ್ರಿ ಎಣ್ಣೆಮಜ್ಜನ ಮತ್ತು ಪ್ರಸಾದ ವಿನಿಯೋಗ ಇರಲಿದೆ. ನಂದಿ ಕಂಬ ರಸ್ತೆಯ ಮೂಲಕ ನೃತ್ಯ ಪ್ರದರ್ಶನ ನಡೆಯಲಿದೆ. ನಂತರ ಕೊಂಡೋತ್ಸವ ಇರಲಿದೆ. 12ರ ಮಂಗಳವಾರ ಬೆಳಗ್ಗೆ ರಥೋತ್ಸವ ನಡೆಯಲಿದೆ. ಪಾನಕ ಪೂಜೆ ಹಾಗೂ ಸಂಜೆ 5ಕ್ಕೆ ದೇವರ ಮೆರವಣಿಗೆ ಜರುಗಲಿದೆ.

ಸರಗೂರು, ಡಿ.6– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅರಣ್ಯ ವ್ಯಾಪ್ತಿಯ ಬೇಲದಕುಪ್ಪೆ ಮಹದೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಡಿ.10 ರಿಂದ ಮೂರು ದಿನಗಳ ಕಾಲ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಲಿದ್ದು, ಭಕ್ತರು ಮತ್ತು ಅರಣ್ಯಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಜಿಲ್ಲಾಡಳಿತ, ಧಾರ್ಮಿಕ ದತ್ತಿ ಇಲಾಖೆ ಮತ್ತು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ.

ಸಮೀಪದ ಹೆಡಿಯಾಲ ಅರಣ್ಯ ಕಚೇರಿಯಲ್ಲಿ ಬುಧವಾರ ನಡೆದ ಶ್ರೀ ಕ್ಷೇತ್ರ ಬೇಲದಕುಪ್ಪೆ ಮಹದೇಶ್ವರ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಜನರ ಧಾರ್ಮಿಕ ಭಾವನೆಗಳಿಗೆ ತೊಂದರೆಯಾಗದಂತೆ ಅಧಿಕಾರಿಗಳು, ಅರಣ್ಯ ಇಲಾಖೆಯ ಸಹಕಾರದೊಂದಿಗೆ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ತೀರ್ಮಾನಿಸಲಾಯಿತು.

ಪೊಲೀಸ್ ಬಿಗಿ ಭದ್ರತೆ: ಜಾತ್ರಾ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಸರಗೂರು ಪೊಲೀಸ್ ವೃತ್ತ ನಿರೀಕ್ಷಕ ಎಂ.ಲಕ್ಷ್ಮಿಕಾಂತ ನೇತೃತ್ವದಲ್ಲಿ ಪಿಎಸ್ಐ ನಂದೀಶ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ 350 ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಿದೆ. ನಂಜನಗೂಡು ತಾಲೂಕಿನ ಹೆಡಿಯಾಲದಿಂದ ಹಾದನೂರು ಮಾರ್ಗವಾಗಿ ದೇವಾಲಯದವರೆಗೆ ಹಾಗೂ ದೇವಸ್ಥಾನ ಆವರಣದ ಸುತ್ತ ಬ್ಯಾರಿಕೇಡ್‌ಗಳನ್ನು ಇರಿಸಿ ವಾಹನ ಹಾಗೂ ಸಾರ್ವಜನಿಕರ ಸುಗಮ ಓಡಾಟಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಇದಲ್ಲದೆ ಭಕ್ತರು ದೇವಸ್ಥಾನಕ್ಕೆ ಹೋಗಿ ಬರಲು ಕೆಎಸ್‌ಆರ್‌ಟಿಸಿಯಿಂದ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ದ್ವಿಚಕ್ರ ವಾಹನಗಳು, ಖಾಸಗಿ ವಾಹನಗಳಿಗೆ ಪ್ರವೇಶ ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿಯಿಂದ 100ಕ್ಕೂ ಹೆಚ್ಚು ಬಸ್‌ಗಳನ್ನು ನಿಯೋಜಿಸಲಾಗಿದೆ. ನಂಜನಗೂಡು, ಎಚ್.ಡಿ.ಕೋಟೆ, ಸರಗೂರು, ಗುಂಡ್ಲುಪೇಟೆ ತಾಲೂಕಿನಿಂದ ಭಕ್ತರು ಬಸ್‌ನಲ್ಲಿ ಬರಬಹುದು. ಇದರೊಂದಿಗೆ ಅರಣ್ಯ ಪ್ರವೇಶದ್ವಾರದ ಸಮೀಪದಲ್ಲಿರುವ ಅಳಲಹಳ್ಳಿ ಚೈನ್‌ಗೇಟ್ ಬಳಿ ದ್ವಿಚಕ್ರ, ಖಾಸಗಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದಲ್ಲದೆ ತಿಂಡಿ ಅಂಗಡಿಗಳಿಗೂ ವ್ಯವಸ್ಥೆ ಮಾಡಲಾಗಿದೆ.

ದನ, ಎತ್ತಿನ ಗಾಡಿ ನಿರ್ಬಂಧ: ಅರಣ್ಯ ಇಲಾಖೆಯ ಸಂರಕ್ಷಣೆ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಜಾನುವಾರುಗಳಿಗೆ ನಿರ್ಬಂಧ ವಿಧಿಸಲಾಗಿದೆ. ಎತ್ತಿನ ಗಾಡಿ, ಖಾಸಗಿ ವಾಹನಗಳಿಗೆ ಪ್ರವೇಶ ನಿರಾಕರಿಸಲಾಗಿದೆ. ಇದೇ ಸಂದರ್ಭದಲ್ಲಿ ಮಾತನಾಡಿದ ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಕಳೆದ ವರ್ಷದಂತೆ ಜಾತ್ರಾ ಮಹೋತ್ಸವ ಆಚರಣೆ ಮಾಡಬೇಕು. ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಅರಣ್ಯ ಇಲಾಖೆಗಳು ಭಕ್ತರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಈಗಾಗಲೇ ನಿಗದಿಗೊಳಿಸಲಾದ ಸ್ಥಳಗಳಲ್ಲಿ ವ್ಯಾಪಾರಸ್ಥರು ತಮ್ಮ ವ್ಯಾಪಾರ ನಡೆಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ತಹಸೀಲ್ದಾರ್ ರುಕಿಯಾ ಬೇಗಂ, ಕಾಂಗ್ರೆಸ್ ಮುಖಂಡ ಶಂಭುಲಿಂಗನಾಯಕ, ಎಸಿಎಫ್ ಪರಮೇಶ್, ಪಿಎಸ್ಐ ನಂದೀಶ್ ಕುಮಾರ್, ನೀರಾವರಿ ಇಲಾಖೆ ಎಇ ಕೃಷ್ಣ, ಅಧಿಕಾರಿಗಳಾದ ಗೋವಿಂದರಾಜ್, ಸುಪ್ರೀತ್, ಮುಜರಾಯಿ ಇಲಾಖೆಯ ಇಒ ರಘು, ಪಾರುಪತ್ತೇದಾರರಾದ ಮಹದೇವಸ್ವಾಮಿ, ರಾಕೇಶ್‌ಗೌಡ ಸೇರಿದಂತೆ ಇನ್ನಿತರರು ಸಭೆಯಲ್ಲಿ ಹಾಜರಿದ್ದರು.



ಅಧಿಕಾರಿಗಳು, ಪತ್ರಕರ್ತರಿಗೆ ಪ್ರವೇಶವಿಲ್ಲ

ಮುಜರಾಯಿ ಇಲಾಖೆಯ ಇಓ ರಘು, ಪಾರುಪತ್ತೇದಾರರಾದ ಮಹದೇವಸ್ವಾಮಿ, ರಾಕೇಶ್‌ಗೌಡ ಹಾಗೂ ಪತ್ರಕರ್ತರಿಗೆ ಆರ್‌ಎಫ್‌ಓ ನಾರಾಯಣ್ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಬಿಡದೆ ದರ್ಪ ತೋರಿದರು. ಇದರಿಂದ ಬೇಸರಗೊಂಡ ಮುಜರಾಯಿ ಇಲಾಖೆಯ ಇಓ ರಘು, ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ ಹಿರಿಯ ಅಧಿಕಾರಿಗಳಿಗೆ ತಿಳಿಸುವುದಾಗಿ ಹೇಳಿದರು. ಹಿರಿಯ ಅಧಿಕಾರಿಗಳ ಮಾತಿಗೂ ಆರ್‌ಎಫ್‌ಓ ನಾರಾಯಣ್ ಕೇರ್ ಮಾಡಲಿಲ್ಲ.

ಶೋಷಿತ ಸಮುದಾಯಗಳಿಗೆ ಬೆಳಕಾಗಿದ್ದ ಅಂಬೇಡ್ಕರ್

ನಂಜನಗೂಡಲ್ಲಿ ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನ ಆಚರಣೆ



ವರುಣ ಕ್ಷೇತ್ರಕ್ಕೆ ಸೇರುವ ತುಮ್ಮನೇರಳೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನಾಚರಣೆಯ ಅಂಗವಾಗಿ ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಮರಡಿಹುಂಡಿ ಬುಲೆಟ್ ಮಹದೇವು, ನಂದೀಶ್, ಪಿ.ನಾಗೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ನಂಜನಗೂಡು, ಡಿ.6– ಡಾ.ಬಿ.ಆರ್. ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳಿಗೆ ಸಂವಿಧಾನಾತ್ಮಕ ಶಕ್ತಿಯನ್ನು ನೀಡಿ ಜ್ಞಾನದ ಬೆಳಕಾಗಿದ್ದಾರೆ ಎಂದು ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನದ ಕಾರ್ಯಕ್ರಮದಲ್ಲಿ ಬಾಬಾ ಸಾಹೇಬರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಅಸ್ಪೃಶ್ಯತೆಯ ನೋವನ್ನು ಅನುಭವಿಸಿ ಜ್ಞಾನವನ್ನು ಸಂಪಾದಿಸಿ ಸಂವಿಧಾನ, ಪ್ರಜಾಪ್ರಭುತ್ವದ ಮೂಲಕ ಧ್ವನಿಯಿಲ್ಲದ ತಳ ಸಮುದಾಯಗಳಿಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ಅಂತಹ ಮಹಾಪುರುಷರ ಚಿಂತನೆಗಳನ್ನು ನಾವೆಲ್ಲಾ ಪಾಲಿಸುವ ಮೂಲಕ ಪರಸ್ಪರ ಪ್ರೀತಿ, ಸಹಬಾಳ್ವೆಯನ್ನು ನಡೆಸಿ ಒಂದೇ ಎಂದು ಜೀವಿಸಬೇಕು ಎಂದ ಅವರು, ಬಾಬಾ ಸಾಹೇಬರ ಪರಿನಿಬ್ಬಾಣ ದಿನದ ಅಂಗವಾಗಿ ಇಡೀ ದೇಶದಾದ್ಯಂತ ಸಂವಿಧಾನದ ಮೇಲೆ ಗೌರವ, ನಂಬಿಕೆಯುಳ್ಳ ಎಲ್ಲಾ ಜನರೂ ಕೂಡ ಅವರಿಗೆ ಗೌರವ ಸಲ್ಲಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ಸ್ವಾಭಿಮಾನದ ಸಂಕೇತವಾಗಿದ್ದರು. ಅವರ ತತ್ವ ಆದರ್ಶಗಳನ್ನು ಪಾಲಿಸುವ ಮೂಲಕ ಅವರು ಹಾಕಿಕೊಟ್ಟ ದಾರಿ, ಮಾರ್ಗದರ್ಶನದಲ್ಲಿ ಸಾಗೋಣ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಭೀಮರಾವ್‌ವಡ್ಡಾರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಎಂ.ಶಂಕರ್, ರಂಗಸ್ವಾಮಿ, ದಸಂಸ ಸಂಚಾಲಕರಾದ ಮಲ್ಲ ಹಳ್ಳಿನಾರಾಯಣ, ಬೊಕ್ಕಹಳ್ಳಿ ಲಿಂಗಯ್ಯ, ಸುರೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.



ವಾಲ್ಮೀಕಿ ರಾಜ್ಯ ಪ್ರಶಸ್ತಿ ಪುರಸ್ಕೃತ ಸೋಮಣ್ಣಗೆ ಅಭಿನಂದನೆ



ಹೆಚ್.ಡಿ.ಕೋಟೆ, ಡಿ.6– ಆದಿವಾಸಿ ಮುಖಂಡ ಸೋಮಣ್ಣ ಅವರಿಗೆ ಮಹರ್ಷಿ ವಾಲ್ಮೀಕಿ ಕರ್ನಾಟಕ ರಾಜ್ಯ ಪ್ರಶಸ್ತಿ ದೊರಕಿರುವುದು ತಾಲೂಕಿಗೆ ಹೆಮ್ಮೆ ತಂದಿರುವ ವಿಚಾರ ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ವಾಲ್ಮೀಕಿ ಪ್ರಶಸ್ತಿಗೆ ಭಾಜನರಾದ ಮೊತ್ತ ಹಾಡಿಯ ಆದಿವಾಸಿ ಮುಖಂಡ ಸೋಮಣ್ಣ ಅವರಿಗೆ ಹೆಚ್.ಡಿ.ಕೋಟೆ ಮತ್ತು ಸರಗೂರು ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಮಹರ್ಷಿ ವಾಲ್ಮೀಕಿಯವರು ರಾಮಾಯಣ ಮಹಾ ಗ್ರಂಥವನ್ನು ರಚಿಸಿದಂತ ಮಹಾನ್ ವ್ಯಕ್ತಿಯ ಹೆಸರಿನಲ್ಲಿರುವ ರಾಜ್ಯದ ಪ್ರತಿಷ್ಠಿತ ಪ್ರಶಸ್ತಿಯು ಮೊತ್ತ ಹಾಡಿಯ ಆದಿವಾಸಿ ಮುಖಂಡ ಸೋಮಣ್ಣರವರಿಗೆ ದೊರಕಿರುವುದು ತಾಲೂಕು ಹೆಮ್ಮೆ ಪಡುವ ಸಂಗತಿಯಾಗಿದೆ ಎಂದರು.

ನಾನು ಇದೇ ತಾಲೂಕಿನಲ್ಲಿ ಹುಟ್ಟಿಬೆಳೆದಿದ್ದು, ನಮ್ಮ ತಾಲೂಕಿನ ವ್ಯಕ್ತಿಯೊಬ್ಬರಿಗೆ ಈ ಪ್ರಶಸ್ತಿ ದೊರೆತಿದ್ದು, ಅದನ್ನು ಗುರುತಿಸಿ ಅಭಿನಂದಿಸುತ್ತಿರುವ ಪತ್ರಕರ್ತರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸುವುದರ ಜೊತೆಗೆ ನನಗೆ ಈ ಒಂದು ಸನ್ಮಾನ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ ಎಂದು ಆಯುಕ್ತರು ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತ ಸೋಮಣ್ಣ ನಾನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿ ಬಾಲ್ಯದಿಂದಲೇ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಬೆಳೆದ ಹಿನ್ನೆಲೆಯಲ್ಲಿ ನನಗೆ ಆದಿವಾಸಿಗಳ ಕಷ್ಟ ಕಾರ್ಪಣ್ಯಗಳು ಹಂತ ಹಂತವಾಗಿ ತಿಳಿಯಿತು. ಆ ಹಿನ್ನೆಲೆಯಲ್ಲಿ ನಾನು ಆದಿವಾಸಿಗಳ ಅಭಿವೃದ್ಧಿಗೆ ಮತ್ತು ಸಂಘಟನೆಗೆ ಹೆಚ್ಚು ಒತ್ತು ನೀಡಿ ರಾಜ್ಯದ ವಿವಿಧ ಸಂಘಟನೆಗಳ ಮೂಲಕ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೋರಾಟವನ್ನು ಮಾಡಿ, ಆದಿವಾಸಿಗಳ ಸಮಸ್ಯೆಗಳು ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ನಾನು ಶ್ರಮಿಸಿದ್ದೆ, ಇದನ್ನು ಮನಗಂಡ ಸರ್ಕಾರ ವಾಲ್ಮೀಕಿ ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ನನಗೆ ನೀಡಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಉಪಾಧ್ಯಕ್ಷ ಮಹೇಶ, ಪ್ರಧಾನ ಕಾರ್ಯದರ್ಶಿ ನಾಗರಾಮ, ಸಹ ಕಾರ್ಯದರ್ಶಿ ದೊಡ್ಡಸಿದ್ದು, ಖಜಾಂಚಿ ಮಂಜುಕೋಟೆ, ನಿರ್ದೇಶಕರುಗಳಾದ ರೇಣುಕಾ, ರವಿ ಆರಾಧ್ಯ, ಪುಟ್ಟರಾಜು, ಹಂಪಾಪುರ ನಾಗೇಶ್, ಜಿ. ರವಿಕುಮಾರ್, ರಂಗರಾಜು, ಸದಸ್ಯರುಗಳಾದ ಎಚ್.ಪಿ. ಬಸವರಾಜ್, ಸತೀಶ್ ಆರಾಧ್ಯ ಕ್ಷಡ ಪ್ರಮೋದ್, ನಿಂಗಣ್ಣ, ನಂದಕುಮಾರ್ ಶೈಲಿ, ಶ್ರೀನಿಧಿ, ಪುರುಷೋತ್ತಮ, ಶರವಣ, ಚಂದ್ರು ಅವರುಗಳು ಹಾಜರಿದ್ದರು.

ಸರಗೂರಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಣೆ

ಸರಗೂರು: ಪಟ್ಟಣದ ಆದಿ ಕರ್ನಾಟಕ ಸಮಾಜದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನ ಆಚರಿಸಲಾಯಿತು. 4ನೇ ವಾರ್ಡಿನ ಸಮಾಜದ ಯಜಮಾನರು, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೇಣದ ಬತ್ತಿ ಹಚ್ಚಿ ಗೌರವ ಸಮರ್ಪಿಸಿದರು. 4ನೇ ವಾರ್ಡ್ ಹಾಗೂ ಬಿಡಗಲು 11ನೇ ವಾರ್ಡ್ ಆದಿ ಕರ್ನಾಟಕ ಸಮಾಜದ ವತಿಯಿಂದ ಸಮಾಜದ ಬಂಧುಗಳು ಹಾಗೂ ಅಂಬೇಡ್ಕರ್ ಯುವಕ ಸಂಘದವರು ಮೇಣದ ಬತ್ತಿ ಮೆರವಣಿಗೆ ನಡೆಸಿ ನಮನ ಸಲ್ಲಿಸಿದರು.

ಸಮಾಜದ ಯಜಮಾನರು, ಮುಖಂಡರು, ಯುವಕ ಸಂಘದವರು ಮಕ್ಕಳು ಭಾಗವಹಿಸಿದ್ದರು.

ರತ್ನಪುರಿ ಬ್ಯಾಡ್ರಹಳ್ಳಿ ಕಾಲೋನಿಯಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಣೆ



ಹುಣಸೂರು, ಡಿ.6– ತಾಲೂಕಿನ ರತ್ನಪುರಿ ಬ್ಯಾಡ್ರಹಳ್ಳಿ ಕಾಲೋನಿಯಲ್ಲಿ ಇಂದು ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಸ್ಪತ್ರೆ ಕಾವಲ್ ಗ್ರಾ.ಪಂ ಅಧ್ಯಕ್ಷ ರಮೇಶ್ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಗ್ರಾಮದ ಹಿರಿಯರು ಹಾಗೂ ಹೋರಾಟಗಾರರಾದ ಹರಿಹರ ಅನಂತಸ್ವಾಮಿಯವರು ಅಂಬೇಡ್ಕರ್ ಅವರ ಚಿಂತನೆ ಮತ್ತು ಹೋರಾಟದ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉದ್ದೂರು ಕಾವಲ್ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಫೀಕ್, ಗ್ರಾಮದ ಮುಖಂಡರಾದ ಅಜ್ಗರ್ ಪಾಷಾ, ಉದ್ಯಮಿ ಆದಂತಹ ಕೋಡಿ ಗ್ರಾಮದ ಕೋಳಿಕೃಷ್ಣ, ದಸಂಸ ಮುಖಂಡ ರತ್ನಪುರಿ ಪುಟ್ಟಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯರಾದ ಇಬ್ಬು, ವಿಜೇಂದ್ರಕುಮಾರ್, ಜನಾರ್ಧನ(ಜಾನಿ), ದೀಪು, ಸುಂದರ, ಟಿ.ರವಿ, ಅಭಿಷೇಕ್. ಡಿ,ಅರುಣ್, ಭುವನ್, ಕುಮಾರ, ಗೌತಮ್, ಪ್ರೀತಮ್ ಭಾಗವಹಿಸಿದ್ದರು. ಶಾಲಾ ಮಕ್ಕಳಿಂದ ಸಂವಿಧಾನ ಪೀಠಿಕೆ ಓದಿಸಲಾಯಿತು. ರತ್ನಪುರಿ ಪುಟ್ಟಸ್ವಾಮಿರವರು ನಿರೂಪಣೆ ನಡೆಸಿದರು.

ಕಿರನೆಲ್ಲಿ ಶಾಲೆಯಲ್ಲಿ ಅನಾವರಣಗೊಂಡ ಜಾನಪದ ಉತ್ಸವ



ಕಂಪಲಾಪುರ, ಡಿ.6– ಇತ್ತೀಚಿನ ದಿನಗಳಲ್ಲಿ ದೇಸಿಯ ಕಲೆಗಳು ಮರೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್ ಬೇಸರ ವ್ಯಕ್ತಪಡಿಸಿದರು.

ಕಂಪಲಾಪುರ ಕ್ಲಸ್ಟರ್‌ನ ಕಿರನೆಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಆಯೋಜಿಸಿದ್ದ ಜಾನಪದ ಉತ್ಸವ ಕಾರ್ಯಕ್ರಮವನ್ನು ರಾಗಿ ಬೀಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಶಾಲೆಗಳು ದೇವಾಲಯವಿದ್ದಂತೆ. ಶಿಕ್ಷಕರು ಪೂಜಾರಿಗಳಿದ್ದಂತೆ. ಇದು ಸರಿ ಇದ್ದಾಗ ಇಂತಹ ಗ್ರಾಮೀಣ ಕಲಾ ವೈಭವ ಅನಾವರಣಗೊಳ್ಳುತ್ತದೆ. ಈ ಶಾಲೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಾಲೆ, ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಎಲ್ಲವನ್ನೂ ಪಡೆದುಕೊಂಡಿದೆ. ಇದು ನಿಜಕ್ಕೂ ಶ್ಲಾಘನೀಯ ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್ ಮಾತನಾಡಿ, ಶಾಲೆಯಲ್ಲಿ ಹಮ್ಮಿಕೊಂಡಿರುವ ಇಂತಹ ಕಾರ್ಯಕ್ರಮವನ್ನು ನೋಡಿದರೆ ದಸರಾ ವೈಭವ ನೆನಪಾಗುತ್ತದೆ. ಕನ್ನಡದ ಕಂಪು ಸೂಸುವ ಬಾವುಟಗಳು, ತಳಿರು–ತೋರಣಗಳು ಕಣ್ಣು ಕಟ್ಟುವ ರೀತಿ ಎದ್ದು ಕಾಣುತ್ತದೆ. ಮೊಬೈಲ್ ಗೀಳಿನಿಂದ ದೇಸೀಯ ಸಂಸ್ಕೃತಿ ಮರೆಯಾಗುತ್ತಿದೆ. ನಾಳಿನ ಜನತೆಗೆ ಕೊಡುಗೆಯಾಗಿ ನೀಡಲು ಜಾನಪದ ಕಲೆಗಳನ್ನು ಉಳಿಸಬೇಕಿದೆ ಎಂದರು.

ನಂದಿಧ್ವಜ, ವೀರಗಾಸೆ, ಹುಲಿವೇಷ, ಗೊರವರ ಕುಣಿತ ಮುಂತಾದ ಕಲೆಗಳನ್ನು ಪ್ರದರ್ಶಿಸುವ ಮೂಲಕ 'ಜಾನಪದ ಉತ್ಸವ'ಕ್ಕೆ ಮೆರಗು ನೀಡಲಾಯಿತು.

ಇದೇ ಸಂದರ್ಭ ಗ್ರಾ.ಪಂ ಅಧ್ಯಕ್ಷೆ ಯಶೋದಮ್ಮ, ಸಿಆರ್‌ಪಿ ಸುದರ್ಶನ್, ಗಣೇಶ್, ಶಾಲೆಯ ಮುಖ್ಯ ಶಿಕ್ಷಕ ಶ್ರೀಧರ್, ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಾಥ್, ಯ. ಕೆಂಪೇಗೌಡ, ನಿಸಾರ್ ಅಹಮದ್ ಸೇರಿದಂತೆ ಶಿಕ್ಷಕ ಶಿಕ್ಷಕಿಯರು, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಡಾ. ಅಂಬೇಡ್ಕರ್ ನಮಗೆಲ್ಲಾ ಆದರ್ಶಪ್ರಾಯರಾಗಿದ್ದಾರೆ

ತಿ.ನರಸೀಪುರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಣೆ



ತಿ.ನರಸೀಪುರ, ಡಿ.6– ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಿ, ಸಮ ಸಮಾಜಕ್ಕಾಗಿ ಶ್ರಮಿಸಿದ ಬಾಬಾ ಸಾಹೇಬ್ ಅಂಬೇಡ್ಕರ್ ನಮಗೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ ಎಂದು ತಾಲೂಕು ದಂಡಾಧಿಕಾರಿ ಸುರೇಶ್ ಆಚಾರ್ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾ ಪರಿನಿಬ್ಬಾಣ ದಿನದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸ್ವಾತಂತ್ರ್ಯ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಭಾರತದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಭಾರತ ಸಂವಿಧಾನ ರಚಿಸುವಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಗಲಿರುಳು ಶ್ರಮಿಸಿದ್ದಾರೆ. ಭಾರತದ ಎಲ್ಲಾ ವರ್ಗದ ಕಟ್ಟ ಕಡೆಯ ಜನರಿಗೂ ಸಂವಿಧಾನದ ಸೌಲಭ್ಯಗಳು ತಲುಪುವಲ್ಲಿ ಶ್ರಮಿಸಿದ್ದಾರೆ ಎಂದರು. ಅಂಬೇಡ್ಕರ್ ಅವರ ಸಾರ್ಥಕ ಬದುಕಿನ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಶೋಷಿತ ಸಮುದಾಯಗಳ ಏಳಿಗೆಗೆ ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ ಎಂದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಮಾನವಾಗಿ ಬದುಕಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಅಭಿವೃದ್ಧಿ ಸಾಧಿಸಬೇಕು ಎಂದು ತಿಳಿಸಿದರು.

ಮಹಿಳೆಯರಿಗೆ ಸಮಾನ ಹಕ್ಕು, ಕಾರ್ಮಿಕರ ಕಲ್ಯಾಣ, ಶಿಕ್ಷಣ ಹಾಗೂ ಸ್ವಾತಂತ್ರ್ಯದ ಹಕ್ಕಿಗಾಗಿ ಹೋರಾಡಿದ್ದಾರೆ. ದೇಶಕ್ಕೆ ಸಶಕ್ತ ಸಂವಿಧಾನ ನೀಡುವ ಮೂಲಕ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಒಂದು ಮೂರ್ತರೂಪ ನೀಡಿದರು. ವಿಶ್ವದಲ್ಲಿಯೇ ಮಾದರಿ ಅನಿಸಿಕೊಂಡ ಭಾರತದ ಸಂವಿಧಾನ, ಸಮಾನತೆ, ಭ್ರಾತೃತ್ವ, ಸೌಹಾರ್ದತೆಯನ್ನು ಸಾರುತ್ತದೆ ಎಂದು ತಿಳಿಸಿದರು.

ಉಪನ್ಯಾಸಕಿ ಮಂಗಳಾ ಮೂರ್ತಿ ಮುಖ್ಯ ಭಾಷಣ ಮಾಡಿದರು. ಕಾರ್ಯಕ್ರಮಕ್ಕೆ ಮೊದಲು ಮಿನಿವಿಧಾನಸೌಧದ ಮುಂಭಾಗದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ,ಮಾಜಿ ಜಿ.ಪಂ. ಅಧ್ಯಕ್ಷ ಸಿದ್ದಾರ್ಥ, ಕೆ.ಎನ್.ಪ್ರಭುಸ್ವಾಮಿ, ಕಿರಗಸೂರು ಗ್ರಾ.ಪಂ ಅಧ್ಯಕ್ಷೆ ಚಂದ್ರಮ್ಮ, ಪುರಸಭಾ ಸದಸ್ಯ ಪ್ರಕಾಶ್, ತಾ.ಪಂ. ಮಾಜಿ ಸದಸ್ಯ ರಾಮಲಿಂಗಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷಮಹೇಶ್, ತಾಲೂಕು ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಡಾ. ಚಂದ್ರಶೇಖರ್, ರಾಜು ಮರಿಸ್ವಾಮಿ. ಶಿವಣ್ಣ ಮಂಜುನಾಥ್. ಎಡದೊರೆ ಮಹದೇವಯ್ಯ, ಸೋಸಲೆ ಶಶಿಕಾಂತ್, ಶಿವಕುಮಾರ್, ಎಂ ಮಿಥುನ್, ನಂಜುಂಡಯ್ಯ ಗುತ್ತಿಗೆದಾರ ಕೆಂಪಯ್ಯನ ಹುಂಡಿ ಮಾಧು, ಜಗಜೀವನ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಮಾಜಿ ಅಧ್ಯಕ್ಷ ಸಿದ್ದರಾಜು, ಜನ ಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಮಲಿಯೂರು ಶಂಕರ್, ಎ ವಿ ಎಸ್.ಎಸ್.ರಾಮು, ತ್ರಿವೇಣಿನಗರ ಮಹದೇವಮ್ಮ, ತಾ.ಪಂ. ಕಾರ್ಯನಿರ್ವಾಧಿಕಾರಿ ಸಿ.ಕೃಷ್ಣ, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ಪುರಸಭಾ ಮುಖ್ಯಾಧಿಕಾರಿ ವಸಂತಕುಮಾರಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇಜಸ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಹಾವೀರನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಅನಿಮಲ್ (ಹಿಂ)	2 ಪ್ರದರ್ಶನಗಳು
ರಾಜಕಮಲ್	
ಅನ್ನಪೂರ್ಣೆ (ತ)	4 ಪ್ರದರ್ಶನಗಳು
ಸಂಗಂ	
ಅನಿಮಲ್ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್‌ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ಪ್ರಭಾ	
ರಾಖಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಶುಗರ್ ಫ್ಯಾಕ್ಟರಿ (ಕ):** ಮ.1.25ಕ್ಕೆ, ಸಂ.4.15ಕ್ಕೆ, **ನೆಪೋಲಿಯನ್ (ಇಂ):** ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	**ಬ್ಯಾಡ್ ಮ್ಯಾನರ್ಸ್ (ಕ):** ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ಮ.1.20ಕ್ಕೆ, **ಕಾಥಲ್ ದಿ ಕೋರ್ (ಮ):** ರಾ.9.55ಕ್ಕೆ.
ಸ್ಕ್ರೀನ್ 3	**ಕಾಥಲ್ ದಿ ಕೋರ್ (ಮ):** ಬೆ.10.45ಕ್ಕೆ, **ಫರ್ರಿ (ಹಿಂ):** ಮ.1.05ಕ್ಕೆ, **ವಿಶ್ (3ಡಿ) (ಇಂ):** ಮ.3.20ಕ್ಕೆ, ಸಂ.5.25ಕ್ಕೆ, **ಸ್ವಾತಿ ಮುತ್ತಿನ ಮಳೆ ಹನಿಯೇ (ಕ):** ರಾ.7.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಅನಿಮಲ್ (ಹಿಂ):** ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.9.25ಕ್ಕೆ, ಮ12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ):** ಮ.3.55ಕ್ಕೆ.
ಸ್ಕ್ರೀನ್ 4	**ಅನಿಮಲ್ (ಹಿಂ):** ಬೆ.8.05ಕ್ಕೆ, ಮ.12.10ಕ್ಕೆ, **ಅರ್ಧಂ ಬರ್ಧ ಪ್ರೇಮ ಕಥೆ (ಕ):** ಸಂ.4.15ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ರಾ.7.10ಕ್ಕೆ, **ಪಾರ್ಕಿಂಗ್ (ತ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೌರಿ ಲಂಕೇಶ್, ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣ

ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆ

ಬೆಂಗಳೂರು: ಹಿರಿಯ ಪತ್ರಕರ್ತೆ, ಸಾಮಾಜಿಕ ಹೋರಾಟಗಾರ್ತಿ ಗೌರಿ ಲಂಕೇಶ್ ಹಾಗೂ ಹಿರಿಯ ಸಾಹಿತಿ, ಸಂಶೋಧಕ ಡಾ.ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ರಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸೂಚನೆ ನೀಡಿದ್ದಾರೆ.

ಈ ಸಂಬಂಧ ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ. ಎಂ.ಎಂ.ಕಲಬುರ್ಗಿ 2015ರ ಆ.31ರಂದು ಧಾರವಾಡದ ಅವರ ಸ್ವಗೃಹದಲ್ಲಿ ಹತ್ಯೆಯಾಗಿ ಏಳು ವರ್ಷಗಳು ಪೂರ್ಣಗೊಂಡಿವೆ. ಪ್ರಕರಣದ ಸಂಬಂಧ 2018–19ರಲ್ಲಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು, ಮೃತರ ಕುಟುಂಬದವರ ವಿಚಾರಣೆಗಳು ಪೂರ್ಣಗೊಂಡಿದ್ದರೂ ನ್ಯಾಯಾಲಯದಲ್ಲಿ ವಿಚಾರಣೆಗಳು ಮುಂದುವರಿದಿವೆ. ಈಗಾಗಲೇ ಸಾಕಷ್ಟು ಸಮಯ ಆಗಿರುವುದರಿಂದ ವಿಶೇಷ ನ್ಯಾಯಾಲಯ ರಚಿಸುವಂತೆ ಮೃತರ ಪತ್ನಿ ಉಮಾ ದೇವಿ ಎಂ.ಕಲಬುರ್ಗಿ ಕೋರಿದ್ದು, ಈ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಇನ್ನು ಪತ್ರಕರ್ತೆ ಹಾಗೂ ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಗೌರಿ ಲಂಕೇಶ್ 2017ರ ಸೆ.5ರಂದು ಹತ್ಯೆಗೀಡಾಗಿದ್ದು, ಈ ಸಂಬಂಧ ವಿಶೇಷ ತನಿಖಾ ದಳ ರಚಿಸಲಾಗಿದೆ. ಇದುವರೆಗೂ 18 ಆರೋಪಿಗಳು ಬಂಧನಕ್ಕೊಳಗಾಗಿದ್ದು, 1200 ಪುರಾವೆ ಹಾಗೂ 500ಕ್ಕೂ ಹೆಚ್ಚು ವಿವಿಧ ಬಗೆಯ ಸಾಕ್ಷ್ಯಗಳನ್ನೊಳಗೊಂಡ ಚಾರ್ಜ್‌ಶೀಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.



ಪ್ರಕರಣದ ವಿಚಾರಣೆಯು ನ್ಯಾಯಾಲಯದಲ್ಲಿ ಜುಲೈ, 2022ರಿಂದ ಪ್ರಾರಂಭಗೊಂಡಿದ್ದು, ನ್ಯಾಯಾಲಯದ ಅನುದಿನದ ಪ್ರಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ವಿಚಾರಣೆಯು ನಿಧಾನಗತಿಯಲ್ಲಿ ಸಾಗಿದೆ. ಆದ್ದರಿಂದ, ಈ ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ರಚಿಸಿ, ಪೂರ್ಣಾವಧಿ ನ್ಯಾಯಾಧೀಶರನ್ನು ನೇಮಕ ಮಾಡುವಂತೆ ಗೌರಿ ಲಂಕೇಶ್ ಸಹೋದರಿ ಕವಿತಾ ಲಂಕೇಶ್ ಅವರು ಸರ್ಕಾರಕ್ಕೆ ಕೋರಿದ್ದು. ಈ ಬಗ್ಗೆ ಜರೂರು ಅಗತ್ಯ ಕ್ರಮವಹಿಸಲು ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಲೋಕಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಮಸೂದೆ ಅಂಗೀಕಾರ

ಪಿಒಕೆ ನಮ್ಮದು ಎಂದ ಅಮಿತ್ ಶಾ



ದೆಹಲಿ: ಜಮ್ಮು ಮತ್ತು ಕಾಶ್ಮೀರ ಮೀಸಲಾತಿ ತಿದ್ದುಪಡಿ ಮಸೂದೆ – 2023 ಹಾಗೂ ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ತಿದ್ದುಪಡಿ ಮಸೂದೆ 2023 ಅನ್ನು ಬುಧವಾರ ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ. ಇಂದು ಲೋಕಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಈ ಎರಡು ಮಸೂದೆಗಳನ್ನು ಮಂಡಿಸಿದರು.

ಮಸೂದೆ ಮಂಡಿಸಿ ಮಾತನಾಡಿದ ಅಮಿತ್ ಶಾ, ಮೋದಿ ಸರ್ಕಾರದ ಗುರಿ ಪಿಒಕೆ ಅಂತ ಘೋಷಿಸಿದರು. ಯಾರಿಗೂ ಕಾಶ್ಮೀರಿಗಳ ಬಗ್ಗೆ ಕಾಳಜಿ ಇರಲಿಲ್ಲ. ಆದರೆ ಈಗ ಅವರಿಗೆ ನ್ಯಾಯ ಕೊಡುವ ಸಮಯ ಬಂದಿದೆ. ಈ ಕೆಲಸವನ್ನು ನರೇಂದ್ರ ಮೋದಿ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಮೋದಿ ಸರ್ಕಾರ ಕೇವಲ ಉಗ್ರರನ್ನು ನಿರ್ಮೂಲನೆ ಮಾಡಿಲ್ಲ. ಉಗ್ರರಿಗೆ ಹಣ ನೀಡುತ್ತಿದ್ದ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಕ್ರಮ ತೆಗೆದುಕೊಂಡಿದೆ ಎಂದು ಅಮಿತ್ ಶಾ ತಿಳಿಸಿದರು. ಕಾಶ್ಮೀರದ ಈ ಎರಡು ಮಸೂದೆಗಳಲ್ಲಿ ಒಂದು ಮಸೂದೆ ಮಹಿಳೆ ಸೇರಿದಂತೆ ಇಬ್ಬರು ಕಾಶ್ಮೀರಿ ವಲಸಿಗ ಸಮುದಾಯದ ಸದಸ್ಯರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸುತ್ತದೆ ಎಂದು ಕೇಂದ್ರ ಗೃಹ ಸಚಿವರು ಲೋಕಸಭೆಗೆ ತಿಳಿಸಿದರು. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಈ ಎರಡು ಮಸೂದೆಗಳು ಕಳೆದ 70 ವರ್ಷಗಳಿಂದ ತಮ್ಮ ಹಕ್ಕುಗಳಿಂದ ವಂಚಿತರಾದವರಿಗೆ ನ್ಯಾಯವನ್ನು ನೀಡಲಿವೆ ಎಂದು ಅಮಿತ್ ಶಾ ಹೇಳಿದ್ದಾರೆ.

ತೆಲಂಗಾಣ ನೂತನ ಸಿಎಂ ರೇವಂತ್ ರೆಡ್ಡಿ ಪ್ರಮಾಣ ವಚನ ಸಮಾರಂಭದಲ್ಲಿ ಸೋನಿಯಾ ಗಾಂಧಿ ಭಾಗಿ ಸಾಧ್ಯತೆ



ನವದೆಹಲಿ: ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಅವರು ಗುರುವಾರ ತೆಲಂಗಾಣ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದು, ಸಮಾರಂಭದಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪಾಲ್ಗೊಳ್ಳುವ ಸಾಧ್ಯತೆಯಿದೆ. ಇಂದು ಸಂಸತ್ತಿಗೆ ಆಗಮಿಸಿದ್ದ ಸೋನಿಯಾ ಗಾಂಧಿ ಅವರನ್ನು ರೇವಂತ್ ರೆಡ್ಡಿ ಅವರ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಲು ಹೈದರಾಬಾದ್‌ಗೆ ತೆರಳುತ್ತೀರಾ ಎಂಬ ವರದಿಗಾರರ ಪ್ರಶ್ನೆಗೆ ಹೌದು, ಹೋಗಬಹುದು ಎಂದು ಪ್ರತಿಕ್ರಿಯಿಸಿದರು. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯ ಅವರ ನಿವಾಸದಲ್ಲಿ ಬುಧವಾರ ಭೇಟಿ ಮಾಡಿದ್ದ ರೇವಂತ್ ರೆಡ್ಡಿ, ಖರ್ಗೆ ಅವರಿಗೆ ಹೂಗುಚ್ಛ ನೀಡಿ ಶಾಲು ಹೊದಿಸಿ ಅಭಿನಂದಿಸಿದರು.

ರೇವಂತ್ ರೆಡ್ಡಿ ಅವರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮತ್ತು ಪ್ರಿಯಾಂಕಾ ಗಾಂಧಿ ಅವರಿಗೂ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದ್ದಾರೆ.

ಕೆಲ ನಾಯಿ, ನರಿಗಳಿಂದ ಸಮಸ್ಯೆಯಾಗಿದೆ

ಬಿಜೆಪಿ ಮುಖಂಡರ ವಿರುದ್ಧ ಸೋಮಣ್ಣ ವಾಗ್ದಾಳಿ



ತುಮಕೂರು: ಬಿಜೆಪಿ ಮುಖಂಡರ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಮಾಜಿ ಸಚಿವ ವಿ.ಸೋಮಣ್ಣ 'ಕೆಲ ನಾಯಿ, ನರಿಗಳಿಂದ ಸ್ವಲ್ಪ ವ್ಯತ್ಯಾಸವಾಗಿ ಸಮಸ್ಯೆಯಾಗಿದೆ' ಎಂದು ಹರಿಹಾಯ್ದರು. ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕೆಲವು ಸಂದರ್ಭಗಳಲ್ಲಿ ನನ್ನ ದುರಹಂಕಾರ ನನಗೆ ತೊಂದರೆ ಕೊಟ್ಟಿದೆ. ಮೇಲೆ ಆಕಾಶವಿದೆ ಎಂದು ತಿಳಿಯದೆ ಅತ್ತ ಕಡೆಗೆ ಉಗುಳಿದೆ. ಅದು ನನ್ನ ಮೇಲೆ ಬಿದ್ದಿದೆ. ಅದನ್ನು ಒರೆಸಿಕೊಂಡು ಮುಂದೆ ಹೋಗುವ ಕೆಲಸ ಮಾಡುತ್ತೇನೆ ಎಂದರು. ಬಿಜೆಪಿ ವರಿಷ್ಠರ ಭೇಟಿಗೆ ನ. 30ರಂದು ಸಮಯ ನೀಡಿದ್ದರು. ಅಂದು ಹೋಗಿ ಭೇಟಿಯಾಗಲು ಸಾಧ್ಯವಾಗಲಿಲ್ಲ. ಮುಂದೆ ಏನಾಗುವುದೋ ಗೊತ್ತಿಲ್ಲ. ಆಗಿರುವ ತಪ್ಪುಗಳನ್ನು ಹೈಕಮಾಂಡ್ ಯಾವ ರೀತಿ ಸರಿಪಡಿಸಲಿದೆ ಎಂಬುದು ಗೊತ್ತಿಲ್ಲ. ಕೆಲ ದಿನಗಳು ನೋಡುತ್ತೇನೆ. ಎಲ್ಲವನ್ನೂ ಜನರ ಮುಂದೆ ಹೇಳುತ್ತೇನೆ. ನಂತರ ನಿರ್ಧಾರ ಮಾಡುತ್ತೇನೆ ಎಂದು ಹೇಳಿದರು.

'ಲಿಡ್ಕರ್'ಗೆ ರಾಯಭಾರಿಯಾಗಿ ಡಾಲಿ ಧನಂಜಯ ನೇಮಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತ ಘೋಷಣೆ



ಬೆಂಗಳೂರು: ಲಿಡ್ಕರ್ ಉತ್ಪನ್ನಗಳಿಗೆ ನಟ ಡಾಲಿ ಧನಂಜಯ್ ರಾಯಭಾರಿ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಬುಧವಾರ ಘೋಷಣೆ ಮಾಡಿದರು. ಬೆಂಗಳೂರಿನ ವಿಧಾನಸೌಧದ ಮುಂದೆ ನಡೆದ ಡಾ.ಬಿ ಆರ್ ಅಂಬೇಡ್ಕರ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅಧಿಕೃತವಾಗಿ ಲಿಡ್ಕರ್ ಉತ್ಪನ್ನಕ್ಕೆ ಡಾಲಿ ಧನಂಜಯ ರಾಯಭಾರಿಯಾಗಿ ಘೋಷಣೆ ಮಾಡಲಾಗಿದೆ. ಈ ವೇಳೆ ಸಿಎಂ ಸಿದ್ದರಾಮಯ್ಯ, ಸಚಿವ ಹೆಚ್.ಸಿ. ಮಹದೇವಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಡಾ.ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ (ಲಿಡ್ಕರ್)ಕ್ಕೆ ಇದೇ ಮೊದಲ ಬಾರಿಗೆ ರಾಯಭಾರಿಯನ್ನು ನೇಮಕ ಮಾಡಲಾಗಿದೆ. ಖ್ಯಾತ ನಟ ಡಾಲಿ ಧನಂಜಯ್ ಲಿಡ್ಕರ್‌ಗೆ ರಾಯಭಾರಿ ಆಗಿದ್ದಾರೆ. ಮೊದಲ ಬಾರಿಗೆ ಡಾಲಿ ಸರ್ಕಾರದ ಜಾಹೀರಾತಿನಲ್ಲಿ ಮಿಂಚುವ ಮೂಲಕ ಲಿಡ್ಕರ್ ಬ್ರಾಂಡ್ ಪ್ರಮೋಟ್ ಮಾಡಲಿದ್ದಾರೆ. ಲಿಡ್ಕರ್‌ನಲ್ಲಿ 50 ಸಾವಿರಕ್ಕೂ ಹೆಚ್ಚು ಚರ್ಮ ಕುಶಲ ಕರ್ಮಿಗಳ ಕುಟುಂಬವಿದ್ದು, ಚರ್ಮ ಕೈಗಾರಿಕೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಮುಂದಾಗಿರುವ ಸರ್ಕಾರ ಸ್ಯಾಂಡಲ್‌ವುಡ್ ಸ್ಟಾರ್ ಧನಂಜಯ್ ಅವರನ್ನು ರಾಯಭಾರಿಯಾಗಿ ನೇಮಕಮಾಡಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಂ.ಎಸ್ ವಸುಂಧರಾ, ಧನಂಜಯ್ ಅವರು ರಾಯಭಾರಿಯಾಗಿದ್ದು ತುಂಬಾ ಖುಷಿ ಇದೆ. ಅವರು ಸ್ಯಾಂಡಲ್‌ವುಡ್‌ನ ಲೀಡಿಂಗ್ ನಟ. ಎಲ್ಲಾ ವರ್ಗದ ಜನರಿಗೆ ತಲುಪುವ ಕೂಲಿದ ಹಾಗಾಗಿ ಅವರನ್ನ ನೇಮಕ ಮಾಡಿದ್ದೇವೆ. ಸಚಿವರು ಕೂಡ ಇದಕ್ಕೆ ಒಪ್ಪಿಗೆ ಸೂಚಿಸಿದ್ದು ಆದಷ್ಟು ಬೇಗ ಜಾಹೀರಾತಿನ ಚಿತ್ರೀಕರಣ ನಡೆಯಲಿದೆ ಎಂದಿದ್ದಾರೆ.

ರೇವಂತ್ ರೆಡ್ಡಿ ಪ್ರಮಾಣ ವಚನ: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಭಾಗಿ

ಬೆಳಗಾವಿ: ತೆಲಂಗಾಣದ ನೂತನ ಮುಖ್ಯಮಂತ್ರಿ ಆಗಿ ಟಿಪಿಸಿಸಿ (ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ) ಅಧ್ಯಕ್ಷ ರೇವಂತ್ ರೆಡ್ಡಿ ಅವರು ಶುಕ್ರವಾರ (ಡಿ.7) ಪ್ರಮಾಣ ವಚನ ಸ್ವೀಕರಿಸಲಿದ್ದು, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ರಾಜ್ಯ ಸಚಿವ ಸಂಪುಟದ ಬಹುತೇಕ ಸಚಿವರು ಭಾಗವಹಿಸಲಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಹೈದರಾಬಾದ್‌ನ ಎಲ್‌ಬಿ ಸ್ಟೇಡಿಯಂನಲ್ಲಿ ಮಧ್ಯಾಹ್ನ 1 ಗಂಟೆ 4 ನಿಮಿಷಕ್ಕೆ ನಡೆಯಲಿದೆ. ರಾಜ್ಯದ ಜ್ಯೋತಿಷಿಯೊಬ್ಬರು ಪದಗ್ರಹಣದ ಮುಹೂರ್ತ ನಿಗದಿಪಡಿಸಿದ್ದಾರೆ ಎಂದು ಹೇಳಲಾಗಿದೆ.

ತೆಲಂಗಾಣ ಚುನಾವಣೆಯ ಉಸ್ತುವಾರಿ ವಹಿಸಿ ಮತ್ತು ಕ್ಷೇತ್ರಗಳನ್ನು ಹಂಚಿಕೊಂಡು ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಸಚಿವರಾದ ಬೋಸರಾಜು, ಬಿ.ಝೆಡ್. ಜಮೀರ್ ಅಹಮದ್ ಖಾನ್, ಕೆಲವು ಶಾಸಕರೂ ಸಮಾರಂಭದಲ್ಲಿ ಭಾಗಿ ಆಗಲಿದ್ದಾರೆ.

ಸಿಎಂ ಐಸಿಸ್ ಉಗ್ರನ ಬೆಂಬಲಿಗನ ಜೊತೆ ವೇದಿಕೆ ಹಂಚಿಕೊಂಡಿದ್ದಾರೆ: ಯತ್ನಾಳ್



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹುಬ್ಬಳ್ಳಿಯ ಕಾರ್ಯಕ್ರಮದಲ್ಲಿ ಐಸಿಸ್ ಭಯೋತ್ಪಾದಕರ ಬೆಂಬಲಿಗನೊಂದಿಗೆ ವೇದಿಕೆ ಹಂಚಿಕೊಂಡಿದ್ದಾರೆ ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಾಂಬ್ ಸಿಡಿಸಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ತನ್ವೀರ್ ಪೀರಾ ಎಂಬ ಮುಸ್ಲಿಂ ಮೌಲ್ವಿ ಯೆಮೆನ್, ಸೌದಿ ಹಾಗೂ ಮಧ್ಯ ಪ್ರಾಚ್ಯ ದೇಶಗಳ ಪ್ರವಾಸಗಳ ವೇಳೆ ಭಯೋತ್ಪಾದಕ ಸಂಘಟನೆಗಳ ಪ್ರಮುಖರನ್ನು ಭೇಟಿಯಾಗಿರುವ ಚಿತ್ರಗಳನ್ನು ಅಪ್ಲೋಡ್ ಮಾಡಿದ್ದಾರೆ.

ಪೋಸ್ಟ್‌ನಲ್ಲಿ ಏನಿದೆ: ಭಯೋತ್ಪಾದಕ ಬೆಂಬಲಿಗ ಹಿಂದೆಯೂ ಹಲವಾರು ಬಾರಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ಭೇಟಿಯಾಗಿದ್ದ. ಕೆಲವೇ ದಿನಗಳಲ್ಲಿ ತನ್ವೀರ್ ಪೀರಾ ಎಂಬ ಭಯೋತ್ಪಾದಕ ಬೆಂಬಲಿಗನ ಇನ್ನಷ್ಟು ವಿವರಗಳನ್ನು ಬಹಿರಂಗಗೊಳಿಸುತ್ತೇನೆ. ಈತನು ಮಧ್ಯಪ್ರಾಚ್ಯ ದೇಶಗಳಿಂದ ಹಣವನ್ನು ಭಾರತಕ್ಕೆ ತರುವ ಹಾಗೂ ಭಾರತದ ಚಟುವಟಿಕೆಗಳ ಮಾಹಿತಿಯನ್ನು ಅರಬ್ ದೇಶಗಳಿಗೆ ರವಾನಿಸುವ ಕೆಲಸ ಮಾಡುತ್ತಿದ್ದಾನೆ. ಇಂದು ಬೆಳಗಾವಿಯಲ್ಲಿ ಮುಂಜಾನೆ ನಾನು ಮುಖ್ಯಮಂತ್ರಿಗಳು ಐಸಿಸ್ ಬೆಂಬಲಿಗನ ಜೊತೆ ವೇದಿಕೆ ಹಂಚಿಕೊಂಡಿದ್ದಾರೆ ಎಂದು ಹೇಳಿದ್ದೆ. ರಾಜ್ಯ ಪೊಲೀಸ್, ಕೇಂದ್ರೀಯ ತನಿಖಾ ಸಂಸ್ಥೆಗಳು ಈ ಕುರಿತು ವಿಚಾರಣೆ ಮಾಡಬೇಕು ಎಂದು ಆಗ್ರಹಿಸುತ್ತಿದ್ದೇನೆ.

ಭಾರತಕ್ಕೆ ಬೇಕಾದ ಮತ್ತೊಬ್ಬ ಉಗ್ರನ ಹತ್ಯೆ

ಲಷ್ಕರ್ ಮುಖ್ಯಸ್ಥ ಹಫೀಜ್‌ನ ಆಪ್ತ ಹಂಜಲಾ ಅದ್ನಾನ್‌ನನ್ನು ಗುಂಡಿಕ್ಕಿ ಕೊಲೆ



ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಭಾರತಕ್ಕೆ ಬೇಕಾದ ಮತ್ತೊಬ್ಬ ಶತ್ರುವಿನ ಹತ್ಯೆಯಾಗಿದೆ. ಲಷ್ಕರ್–ಎ–ತೊಯ್ಬಾದ ಟಾಪ್ ಕಮಾಂಡರ್ ಅದ್ನಾನ್ ಅಹ್ಮದ್ ಅಲಿಯಾಸ್ ಹಂಜಾಲಾ ಅದ್ನಾನ್ ನನ್ನು ಪಾಕಿಸ್ತಾನದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಕರಾಚಿಯಲ್ಲಿ ಲಷ್ಕರ್ ಭಯೋತ್ಪಾದಕ ಹಂಜಲಾ ಅದ್ನಾನ್ ಮೇಲೆ ಅಪರಿಚಿತ ದಾಳಿಕೋರರು ದಾಳಿ ನಡೆಸಿದ್ದಾರೆ. 2015ರಲ್ಲಿ ಜಮ್ಮು ಮತ್ತು ಕಾಶ್ಮೀರದ ಉಧಮ್‌ಪುರ ಮತ್ತು 2016ರಲ್ಲಿ ಪಾಂಪೋರ್‌ನಲ್ಲಿ ಸಿಆರ್‌ಪಿಎಫ್ ಬೆಂಗಾವಲು ಪಡೆಯ ಮೇಲಿನ ದಾಳಿಯ ಮಾಸ್ಟರ್‌ಮೈಂಡ್ ಆಗಿದ್ದ. ಪಾಂಪೋರ್ ದಾಳಿಯಲ್ಲಿ 8 ಯೋಧರು ಹುತಾತ್ಮರಾಗಿದ್ದರೆ, 22ಕ್ಕೂ ಹೆಚ್ಚು ಯೋಧರು ಗಾಯಗೊಂಡಿದ್ದರು.

ಡಿಸೆಂಬರ್ 3ರ ರಾತ್ರಿ ಹಂಜಾಲಾ ಅದ್ನಾನ್ ಮೇಲೆ ಅಪರಿಚಿತ ಬಂದೂಕುಧಾರಿಗಳು ದಾಳಿ ಮಾಡಿದರು. ಅವನ ಮೇಲೆ ನಿರಂತರವಾಗಿ ಗುಂಡುಗಳನ್ನು ಹಾರಿಸಲಾಯಿತು. ಹಂಜಾಲಾಗೆ ನಾಲ್ಕು ಗುಂಡು ತಗುಲಿತ್ತು. ಗಂಭೀರ ಸ್ಥಿತಿಯಲ್ಲಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ವೈದ್ಯರು ಅವರು ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದರು. ಹಂಜಾಲಾ ಹತ್ಯೆಯು ಲಷ್ಕರ್–ಎ–ತೊಯ್ಬಾ ಮುಖ್ಯಸ್ಥ ಹಫೀಜ್ ಸಯೀದ್‌ಗೆ ದೊಡ್ಡ ಹೊಡೆತ ಎಂದು ಪರಿಗಣಿಸಲಾಗಿದೆ. ಏಕೆಂದರೆ ಆತನನ್ನು ಹಫೀಜ್ ಸಯೀದ್‌ನ ಬಲಗೈ ಬಂಟ ಎಂದು ಪರಿಗಣಿಸಲಾಗಿತ್ತು.

ಪಾಕಿಸ್ತಾನದಲ್ಲಿ ಕುಳಿತು ದಾಳಿಗೆ ಸೂಚನೆ: ಲಷ್ಕರ್ ಮುಖ್ಯಸ್ಥ ಹಫೀಜ್ ಸಯೀದ್ ಆದೇಶದ ಮೇರೆಗೆ ಹಂಜಾಲಾ ಅದ್ನಾನ್ ಭಾರತದ ವಿರುದ್ಧ ದಾಳಿ ನಡೆಸಲು ಯೋಜಿಸುತ್ತಿದ್ದನು. ಈತ ಹಲವು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದನು. ಪಿಒಕೆಯಲ್ಲಿ ಭಯೋತ್ಪಾದಕ ಶಿಬಿರ ನಡೆಸುತ್ತಿದ್ದ ಆರೋಪ ಆತನ ಮೇಲಿದೆ. 2015ರಲ್ಲಿ ಜಮ್ಮುವಿನ ಉಧಂಪುರದಲ್ಲಿ ಬಿಎಸ್‌ಎಫ್ ಬೆಂಗಾವಲು ಪಡೆಯ ಮಾಸ್ಟರ್‌ಮೈಂಡ್ ಆಗಿದ್ದವನು ಹಂಜಾಲ. ಪಾಕಿಸ್ತಾನದಲ್ಲಿ ಕುಳಿತು ದಾಳಿಗೆ ಸೂಚನೆ ನೀಡುತ್ತಿದ್ದನು. ಈ ದಾಳಿಯಲ್ಲಿ ಇಬ್ಬರು ಬಿಎಸ್‌ಎಫ್ ಯೋಧರು ಹುತಾತ್ಮರಾಗಿದ್ದರು. ಈ ದಾಳಿಯ ತನಿಖೆಯನ್ನು ಎನ್‌ಐಎ ನಡೆಸುತ್ತಿದೆ. 2015ರ ಆಗಸ್ಟ್ 6ರಂದು ಎನ್‌ಐಎ ಆರೋಪ ಪಟ್ಟಿ ಸಲ್ಲಿಸಿತ್ತು.

ಪಾಕಿಸ್ತಾನದಲ್ಲಿ ಉಗ್ರರಿಗೆ ನಿದ್ರೆ ಭಂಗ: ಪಾಕಿಸ್ತಾನದಲ್ಲಿ ಉಗ್ರರು ನಿದ್ದೆ ಕಳೆದುಕೊಂಡಿದ್ದಾರೆ. ಒಬ್ಬರ ಹಿಂದೆ ಒಬ್ಬರಂತೆ ದೊಡ್ಡ ದೊಡ್ಡ ಉಗ್ರರು ಹತರಾಗುತ್ತಿದ್ದಾರೆ. ಕಳೆದ ತಿಂಗಳು, ಖೈಬರ್ ಪಖ್ತುಂಖ್ವಾದಲ್ಲಿ ಅಕ್ರಮ್ ಗಾಜಿಯನ್ನು ಕೆಲವು ದಾಳಿಕೋರರು ಗುಂಡಿಕ್ಕಿ ಕೊಂದಿದ್ದರು. ಇದಕ್ಕೂ ಮುನ್ನ ಪಠಾಣ್ ಕೋಟ್ ದಾಳಿಯ ಮಾಸ್ಟರ್ ಮೈಂಡ್ ಶಾಹಿದ್ ಲತೀಫ್ ಹತ್ಯೆಯಾಗಿತ್ತು. ಈ ದಾಳಿಗಳು ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನದಲ್ಲಿ ಬೆಳೆಯುತ್ತಿರುವ ಭಯೋತ್ಪಾದಕರ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿವೆ. ಮೋಸ್ಟ್ ವಾಂಟೆಡ್ ಭಯೋತ್ಪಾದಕ ಶಾಹಿದ್ ಲತೀಫ್ ಸಿಯಾಲ್‌ಕೋಟ್‌ನಲ್ಲಿ ಯಾರನ್ನಾದರೂ ಭೇಟಿಯಾಗಲು ಹೋಗಿದ್ದಾಗ ಹತ್ಯೆ ಮಾಡಲಾಗಿತ್ತು. 2016ರಲ್ಲಿ ಪಠಾಣ್ ಕೋಟ್ ಏರ್ ಫೋರ್ಸ್ ಸ್ಟೇಷನ್ ಮೇಲೆ ನಡೆದ ದಾಳಿಯ ಮಾಸ್ಟರ್ ಮೈಂಡ್ ಆಗಿದ್ದನು.

ಐಸಿಸ್ ಸಂಪರ್ಕ ಇದ್ದವರ್‍ಯಾರೂ ಸಿದ್ದರಾಮಯ್ಯ ಜೊತೆ ವೇದಿಕೆ ಹಂಚಿಕೊಂಡಿಲ್ಲ: ಖಾದ್ರಿ



ಹುಬ್ಬಳ್ಳಿ: ಮುಸ್ಲಿಮ್ ಧರ್ಮಗುರುಗಳ ಸಮಾವೇಶದಲ್ಲಿ ಐಸಿಸ್ ಉಗ್ರರ ಜೊತೆ ಸಂಪರ್ಕ ಇದ್ದವರು ಯಾರು ಪಾಲ್ಗೊಂಡಿಲ್ಲ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಆರೋಪದಲ್ಲಿ ಹುರುಳಿಲ್ಲ. ಅಗತ್ಯವಿದ್ದರೆ ಸರ್ಕಾರ ತನಿಖೆ ನಡೆಸಲಿ ಎಂದು ಹುಬ್ಬಳ್ಳಿ ಬಾಷಾಪೀರಾ ದರ್ಗಾದ ಧರ್ಮಗುರು ಸಯ್ಯದ್ ತಾಜುದ್ದೀನ್ ಖಾದ್ರಿ ಹೇಳಿದರು. ಐಸಿಸ್ ಬೆಂಬಲಿಗ ವ್ಯಕ್ತಿ ಜೊತೆ ವೇದಿಕೆ ಹಂಚಿಕೊಂಡ ಸಿದ್ದರಾಮಯ್ಯ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾಡಿರುವ ಆರೋಪಕ್ಕೆ ಬುಧವಾರ ಹುಬ್ಬಳ್ಳಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಯತ್ನಾಳ್ ಅವರು ಡೈನಾಮಿಕ್ ಶಾಸಕರಾಗಿದ್ದಾರೆ. ಅವರು ಅಷ್ಟು ಆತ್ಮವಿಶ್ವಾಸದಿಂದ ಹೇಳಿಕೆ ನೀಡುತ್ತಾರೆ ಎಂದಾದರೆ, ಸತ್ಯ ಏನೆಂದು ಹೊರಬರಲಿ ಎಂದರು.

ಶಾಸಕರ ಆರೋಪಕ್ಕಷ್ಟೇ ಅಲ್ಲ, ಐಸಿಸ್ ಉಗ್ರರ ನಂಟು ಯಾರ ಯಾರು ಇಟ್ಟುಕೊಂಡಿದ್ದಾರೆ ಎನ್ನುವ ಕುರಿತು ಸಂಪೂರ್ಣ ತನಿಖೆಯಾಗಬೇಕು. ಅಂದು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಯಾರ ಯಾರು ಇದ್ದರೋ ಅವರೆಲ್ಲರನ್ನೂ ಬೇಕಾದರೆ ತನಿಖೆಗೆ ಒಳಪಡಿಸಲಿ. ಎಲ್ಲಾ ತನಿಖೆಗೂ ಸಹಕರಿಸುತ್ತೇವೆ. ನಾವು ಭಾರತದಲ್ಲಿಯೇ ಹುಟ್ಟಿದ್ದೇವೆ, ಇಲ್ಲಿಯೇ ಸಾಯುತ್ತೇವೆ. ಅಂತಹ ಕೆಲಸ ಮಾಡುವವರಿಗೆ ಬೆಂಬಲವೂ ನೀಡುವುದಿಲ್ಲ. ಪೊಲೀಸ್ ಇಲಾಖೆ, ಗುಪ್ತಚರ ಇಲಾಖೆಯ ಭದ್ರತೆ ನಡುವೆ, ಅಂಥವರು ಬರಲು ಸಾಧ್ಯವಿಲ್ಲ. ಯಾರ ಯಾರು ಪಾಲ್ಗೊಂಡಿದ್ದರು ಎನ್ನುವವರ ಸಂಪೂರ್ಣ ಮಾಹಿತಿ ನೀಡುತ್ತೇನೆ ಎಂದು ಹೇಳಿದರು.

ಶಾಸಕ ಯತ್ನಾಳ್ ಅವರು ಹುಚ್ಚರ ಹಾಗೆ ಮಾತನಾಡುತ್ತಾರೆ. ಅವರ ಆರೋಪದಲ್ಲಿ ಯಾವುದೇ ಸತ್ಯವಿಲ್ಲ ಎಂದು ಮುಸ್ಲಿಂ ಮುಖಂಡ ಎ.ಎಂ. ಹಿಂಡಸಗೇರಿ ಆಕ್ರೋಶ ವ್ಯಕ್ತಪಡಿಸಿದರು. ಯತ್ನಾಳ್ ಅವರು ತಮ್ಮ ಪಕ್ಷದವರ ಬಗ್ಗೆಯೇ ಅಗೌರವವಾಗಿ ಮಾತನಾಡುತ್ತ, ಸುಳ್ಳುಸುದ್ದಿ ಹಬ್ಬಿಸುತ್ತಾರೆ. ರಾಜಕೀಯವಾಗಿ ಏನೇ ಮಾತನಾಡಲಿ. ಆದರೆ, ಧಾರ್ಮಿಕವಾಗಿ ಇಂತಹ ಮಾತುಗಳನ್ನು ಯಾರೂ ಆಡಬಾರದು. ಸರ್ಕಾರದ ಹಿರಿಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದ್ದ ಧಾರ್ಮಿಕ ಕಾರ್ಯಕ್ರಮವದು. ಸಾವಿರಾರು ಮಂದಿ, ಎಲ್ಲಾ ಧರ್ಮದವರು ಅಲ್ಲಿ ಕೂಡಿದ್ದರು. ಸಮಾವೇಶಕ್ಕೆ ಪ್ರೋತ್ಸಾಹ ನೀಡಬೇಕು ಎಂದರು.